ಬೆಲೆ ರೂ. 3-00

ಕಲ್ಯಾಣ ಕಿರಣ

ಏಪ್ರಿಲ್ 1992

Digitalized by e-Sahithya Documentation Forum
Sponsored by Sarayu Foundation Trust

ಕಲ್ಯಾಣ ಕಿರಣ

ಮಾಸ ಪತ್ರಿಕೆ, ಬಿಡಿ ಸಂಚಿಕೆ 3-00 ರೂ.

ಮಾರ್ಚ - ಏಪ್ರಿಲ್ - 1992

ಸಂಪುಟ : 20 ಸಂಚಿಕೆ : 10-11 ಬಸವ ಶಕೆ : 886

ವಾರ್ಷಿಕ ಚಂದಾ : 30 ರೂ. ಆಜೀವ ಸದಸ್ಯತ್ವ : 300 ರೂ.

ಕಿರಣಗನ್ನಡಿ

ಲೇಖನಗಳು	ಲೇಖಕರು	ಪು.ಸಂಖ್ಯೆ
೧. ನುಡಿ ನೈವೇದ್ಯ	ಮಾತಾಜಿ	೧
೨. ಬಸವಣ್ಣ ಕಣ್ಣೀರು ಸುರಿಸು ! ಸುರಿಸು ಕಣ್ಣೀರು !!	ಕೋ. ಚನ್ನಬಸಪ್ಪ	೩
೩. ಕಣ್ಣೀರು ಸುರಿಸುವದಲ್ಲ, ಸೆಡ್ಡು ಹೊಡೆದು ಎದ್ದು ನಿಲ್ಲುವ ಕಾಲ	ಮಾತಾಜಿ	೬
೪. ವಿಶ್ವಧರ್ಮ ಪ್ರವಚನ ಭಾಗ - ೨	ಮಾತಾಜಿ	೯
೫. ಬಸವ ಧರ್ಮ : ಸ್ವತಂತ್ರ ಅಸ್ತಿತ್ವಕ್ಕಾಗಿ ಹೊಸ ಚಿಂತನೆ	ವೀರಣ್ಣ ದೇಸಾಯಿ ಬಿ. ಆರ್. ಪಾಟೀಲ	೧೯
೬. ಅಮೋಘ ಧ್ವನಿ ಸುರಳಿಗಳು	ಡಿ. ಬಿ. ಕೊಳ್ಳಿ, ಬೈಲಹೊಂಗಲ	೨೮
೭. ದಾಸೋಹಿಗಳ ಯಾದಿ		೩೦
೮, ಆಜೀವ ಸದಸ್ಯರ ಯಾದಿ		೩೫
೯. ಬೆಳ್ಳಿತ್ತಿನ ಮರೆಯಲ್ಲಿದ್ದು ಹುಲ್ಲೆಗಂಬ ಬಿಟ್ಟ ವೀರಶೈವ ಮಹಾಧಿವೇಶನ	ಮಾತಾಜಿ	೪೧
೧೦. ಬಸವ ರತ್ನ ಪ್ರಶಸ್ತಿಯ ದಾಸೋಹಿ ಶರಣ ಕುಮಾರ ಕಕ್ಕಯ್ಯ ಪೋಳ	ಮಾತಾಜಿ	೬೦

ಮುಖ ಪುಟ : ವಿಶ್ವಗುರು ಬಸವಣ್ಣನವರು

ಹೊದ್ದಿಕೆಯ 4ನೇ ಪುಟ : ವೀರ ವಿರಾಗಿಣಿ ಅಕ್ಕಮಹಾದೇವಿ

ಕಲ್ಯಾಣ ಕಿರಣ

ಮಾಸ ಪತ್ರಿಕೆ

ಸಂಪುಟ : 20 ಸಂಚಿಕೆ : 10-11 ಬಸವ ಶಕೆ : 886

ಮಾರ್ಚ್-ಏಪ್ರಿಲ್ ಸಂಚಿಕೆ ವಾರ್ಷಿಕ ಚಂದಾ-30 ರೂ ಆಜೀವ ಸದಸ್ಯತ್ವ 300

೧ ಬಸವೇಶನೆ ಜಸವರಾಜನೆ!
ಬಸವಣ್ಣನೆ ಬಸವ ತಂದೆ ಬಸವ ಕೃಪಾನಿಧಿ
ಬಸವ ನೀ ಪರಮೇಶ್ವರಾ
ಬಸವಾ ಪ್ರಮಥಾದಿದೇವ ರಕ್ಷಿಸು ಬಸವಾ॥ ಬ.ಸ್ತೋ.ತ್ರಿ. ೧

೨ ಬಸವನ ಮೂರ್ತಿಯೆ ಧ್ಯಾನಕ್ಕೆ ಮೂಲ
ಬಸವನ ಕೀರ್ತಿಯೆ ಜ್ಞಾನಕ್ಕೆ ಮೂಲ
ಬಸವಾ ಬಸವಾ ಎಂಬುದೆ ಭಕ್ತಿ ಕಾಣಾ
ಕಪಿಲಸಿದ್ಧ ಮಲ್ಲಿನಾಥಯ್ಯಾ ಸಿ.ವ. ೯೩೯

೩ ನಿನಗೆ ನೀನೇ ಕರ್ತನು ಬಸವಾ
ಎನಗೆ ನೀನೆ ಕರ್ತನು ಬಸವಾ
ನಾ ಮಾಡುವ ಭಕ್ತಿಗೆ ನೀನೆ ಕರ್ತನು ಬಸವಾ
ಕರುಣಿ ಕಪಿಲಸಿದ್ಧ ಮಲ್ಲಿನಾಥ ಬಸವಾ ಸಿ.ವ. ೯೪೦

೩ ಆವುದಾನೊಂದು ಭಕ್ತಿ ಬಸವಣ್ಣನದಯ್ಯಾ
ಆವುದಾನೊಂದು ಯುಕ್ತಿ ಬಸವಣ್ಣನದಯ್ಯಾ
ಆವುದಾನೊಂದು ಯೋಗಿ ಬಸವಣ್ಣನದಯ್ಯಾ ಸಿ.ವ. ೯೩೫

೫ ನೋಟದ ಭಕ್ತಿ ಬಸವನಿಂದಾಯಿತ್ತು
ಕೂಟದ ಜ್ಞಾನ ಬಸವನಿಂದಾಯಿತ್ತು ಕಾಣಾ
ಎಲ್ಲಿಯ ಶಿವಜ್ಞಾನ, ಎಲ್ಲಿಯ ಮಾಟಕೂಟ ಬಸವನಲ್ಲದೆ ?
ಮಹಾಜ್ಞಾನ ಮಹಾ ಪ್ರಕಾಶ ಬಸವಣ್ಣನ ಧರ್ಮವಯ್ಯಾ ಸಿ.ವ. ೯೩೭

೬ ಅಜನ ಕಲ್ಪಿತವಲ್ಲದ ಭಕ್ತಿ, ವಿಷ್ಣುವಿನ ಕಲ್ಪಿತವಲ್ಲದ ಭಕ್ತಿ
ರುದ್ರನ ಕಲ್ಪಿತವಲ್ಲದ ಭಕ್ತಿ, ನಿನ್ನ ಕಲ್ಪಿತವಾಯಿತ್ತಯ್ಯಾ ಬಸವಾ
ನೋಟಕಾರರ ನೋಟಕ್ಕೆ ಸಿಕ್ಕಿದ ಭಕ್ತಿ ಕೂಟಕ್ಕೆ ಕೂಟವಾಯಿತ್ತಯ್ಯ ಬಸವಾ
ಈ ಬೇಟದ ಭಕ್ತಿಯ ನಿಮ್ಮಿಂದ ಕಂಡೆನಯ್ಯಾ ಬಸವ ಗುರುವೆ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ ಸಿ.ವ. ೯೩೩

Digitalized by e-Sahithya Documentation Forum
Sponsored by Sarayu Foundation Trust

೭ ಇಂದು ಶಿವ ಶರಣರ ಹೊಂದಿ ಹಾರೈಸಿದೆ
ತಂದೆ ನಿಮ್ಮಯ ಕರುಣ ಪ್ರಸಾದವ
ಇಂದು ನಿಮ್ಮಯ ಕರುಣದಿಂದಿತ್ತು ಸಲಹಯ್ಯಾ
ತಂದೆ ನೀ ಬಸವಯ್ಯ ಯೋಗಿನಾಥ ಬ.ಸ್ತೋ.ತ್ರಿ. ೧೪

ಗುರು ಬಸವಣ್ಣ ಮತ್ತು ಶರಣ ಪರಂಪರೆ

ಷಟ್ ಪ್ರಮಥರಲ್ಲಿ ಒಬ್ಬರಾದ ಮಹಾಜಂಗಮ, ಶಿವಯೋಗಿ ಸಿದ್ಧರಾಮೇಶ್ವರರು ಲಿಂಗಾಯತ ಧರ್ಮದಲ್ಲಿ ಧರ್ಮಗುರು ಬಸವಣ್ಣನವರ ಸ್ಥಾನವೇನೆಂಬುದನ್ನು ಬಣ್ಣಿಸಿದ್ದಾರೆ.

೧ ಬಸವೇಶನು ನಮ್ಮ ಧಾರ್ಮಿಕ ಜಗತ್ತಿನ, ಪಾರಮಾರ್ಥಿಕ ರಾಜನು; ನಮ್ಮ ಆಧ್ಯಾತ್ಮಿಕ ತಂದೆ. ಲೌಕಿಕ ತಂದೆಯು ಶರೀರದ ಹುಟ್ಟಿಗೆ ಕಾರಣನಾಗಿ, ಶರೀರವನ್ನು ಸಲಹುತ್ತಾನೆ ; ನರ ಮನುಷ್ಯನ (instrictive being) ಜನ್ಮಕ್ಕೆ ಕಾರಣೀಭೂತನಾಗುತ್ತಾನೆ. ಆದರೆ ಧರ್ಮ ಗುರುವು ನಮ್ಮ ಪಾರಮಾರ್ಥಿಕ ತಂದೆಯಾಗಿ ಅಧ್ಯಾತ್ಮಿಕವಾಗಿ ಹುಟ್ಟುವ ಬಗೆಯನ್ನು ಹೇಳಿಕೊಟ್ಟಿದ್ದಾನೆ. ನರ ಮನುಷ್ಯನು ತನ್ನ ಕುಲಗೋತ್ರ ಜಾತಿಗಳ ಸೂತಕವನ್ನು ಕಳೆದುಕೊಂಡು ಶರಣನಾಗುವ ಕಲೆಯನ್ನು ಕಲಿಸಿದ್ದಾನೆ. ಬಸವ ತಂದೆಯು ಕೃಪಾನಿಧಿಯು ; ಕರ್ತನ ನಂತರದ (ಅಷ್ಟೇಕೆ ಕರ್ತನ ಸಮಾನವಾದ) ಸ್ಥಾನವನ್ನೇ ಪಡೆದಿದ್ದಾನೆ. ಆದಿ ಪ್ರಮಥನಾದ ಬಸವ ತಂದೆಯೇ ನಮ್ಮನ್ನು ರಕ್ಷಿಸು.

೨ ಧರ್ಮಗುರು ಬಸವಣ್ಣನ ಮೂರ್ತಿಯನ್ನು ನಾವು ಧ್ಯಾನಿಸಬೇಕು ಧರ್ಮಗುರು ಬಸವಣ್ಣನ ಕೀರ್ತಿಯನ್ನು (ಆತನ ವಚನಾಮೃತವನ್ನು) ಜ್ಞಾನದ ನಿಧಿಯೆಂದು ಭಾವಿಸಬೇಕು. ಬಸವ ಬಸವಾ ಎಂದು ಸ್ಮರಿಸುವುದೇ ನಿಜವಾದ ಭಕ್ತಿ.

೩ ಬಸವಾ, ನಿನಗೆ ನೀನೇ ಕರ್ತನು. ನಿನ್ನನ್ನು ಯಾರು ಮಾಡಿದುದಿಲ್ಲ. ಆದರೆ ಎನಗೆ, ನಮಗೆಲ್ಲ ನೀನು ಕರ್ತನು. ನೀನು ಹಾಕಿಕೊಟ್ಟ ದಾರಿಯಲ್ಲಿ ನಾವು ನಡೆಯುತ್ತಿದ್ದೇವೆ. ನಾವೀಗ ಮಾಡುವ ವಿಶಿಷ್ಟ ಭಕ್ತಿಗೆ ನೀನೇ ಕಾರಣ ಕರ್ತೃ.

೪ ನಾವು ಆಚರಿಸುವ ಭಕ್ತಿ, ನಾವು ಕೈಗೊಂಡ ಆಚಾರ ಮಾರ್ಗ ಅಳವಡಿಸಿಕೊಂಡ ಯೋಗ-ಇವು ಬಸವಣ್ಣನ ಕೊಡುಗೆಗಳು.

೫ ಎಲ್ಲೈ ದೇವನೆ, ನೋಟದ ಭಕ್ತಿ ಅಂದರೆ ತ್ರಾಟಕ ಯೋಗವೇ ಜೀವಾಳವಾದ ಇಷ್ಟಲಿಂಗ ಭಕ್ತ ಬಸವಣ್ಣನಿಂದ ಆಯಿತು. ಲಿಂಗ ಅಂಗಗಳ ಸಾಮರಸ್ಯದ, ಅಂದರೆ ಅವಿರಳ ಕೂಟದ ಜ್ಞಾನ ಬಸವ ಗುರುವಿನಿಂದಾಯಿತು. ಲಿಂಗವಂತ ಧರ್ಮವು ಪ್ರತಿಪಾದಿಸುವ ಶಿವಜ್ಞಾನ, ಮಾಟಕೂಟ (ಕಾಯಕ-ದಾಸೋಹಗಳ ಸಮರಸದ ಜೀವನ) ಮುಂತಾದುವು ಬಸವಣ್ಣನಿಲ್ಲದಿದ್ದರೆ ಸಾಧ್ಯವಿತ್ತೆ ?

೬ ಬಸವ ಗುರುವೇ, ನೀನು ರೂಪಿಸಿಕೊಟ್ಟ ಇಷ್ಟಲಿಂಗದ ಭಕ್ತಿ ಇಷ್ಟಲಿಂಗ ಯೋಗಗಳು ಅಸಾಮಾನ್ಯವಾದವು. ಬ್ರಹ್ಮನೂ ಇದನ್ನು ಕಲ್ಪಿಸಲಿಲ್ಲ, ವಿಷ್ಣುವಿನ ಕಲ್ಪಿತವೂ ಅಲ್ಲ, ರುದ್ರನು ಕಲ್ಪಿಸಿದ್ದೂ ಅಲ್ಲ ನೋಟಕಾರರು ಅಂದರೆ ತ್ರಾಟಕ ಯೋಗಿಗಳಿಗೆ ಬಹು ಇಷ್ಟವಾದ ಈ ಭಕ್ತಿ ದೇವನೊಡನೆ ಹೊಂದುವ ಕೂಟಕ್ಕೆ ಸಾಧನವಾಗಿರುವುದು ಈ ಭಕ್ತಿ ಈ ಯೋಗಗಳು ಬೇಟ ಅಂದರೆ ಪ್ರೇಮ ಪ್ರಧಾನವಾಗಿವೆ ಲಿಂಗ ಪತಿ-ಶರಣ ಸತಿ ಭಾವದಿಂದ ತುಂಬಿಕೊಂಡಿವೆ.

೭ ತಂದೆಯೇ, ಧರ್ಮಪಿತನೆ, ನಾನಿಂದು ದೀಕ್ಷೆಯನ್ನು ಪಡೆದೆ ; ತನ್ಮೂಲಕ ಗಣ ಸಂಬಂಧವನ್ನು ಹೊಂದಿದೆ. ಶರಣ ಪಥಕ್ಕೆ ಬಂದೆ. ನಿನ್ನ ಕರುಣ ಪ್ರಸಾದವನ್ನಿತ್ತು ಸಲಹುವೆಯಾ ?

ಡಾ|| ಆರ್. ಸಿ. ಹಿರೇಮಠರು ಸಂಪಾದಕರಾಗಿ ಪ್ರಕಟವಾದ ಶ್ರೀ ಸಿದ್ಧರಾಮೇಶ್ವರ ವಚನಗಳು ಎಂಬ ಪುಸ್ತಕದಿಂದ ಯಥಾವತ್ತಾಗಿ ಸಂಖ್ಯೆಯನ್ನೂ ಸೂಚಿಸಿ ಕೊಟ್ಟಿರುವ ವಚನಗಳನ್ನು ಓದಿ, ಮನನ ಮಾಡಿಕೊಳ್ಳಿರಿ.

—ನೂತಾಜಿ

ಬಸವಣ್ಣ ಕಣ್ಣೀರು ಸುರಿಸು ! ಸುರಿಸು ಕಣ್ಣೀರು !!

ಅಖಿಲ ಭಾರತ ವೀರಶೈವ ಮಹಾಸಭೆಯ ೨೧ನೇ ಅಧಿವೇಶನ ದಿದಾಂಕ ೧೦, ೧೧ ಮತ್ತು ೧೨ ರಂದು ಬೆಳಗಾವಿಯಲ್ಲಿ ಜರುಗಿತು. ಉಪರಾಷ್ಟ್ರಪತಿ ಡಾ|| ಶಂಕರ ದಯಾಳ್ ಶರ್ಮ ಉದ್ಘಾಟಿಸಿದರು. ಅಧಿವೇಶನ ನಡೆದ ಮೊದಲ ದಿನದ ಕಾರ್ಯಕಲಾಪ ವರದಿ ಮಾಡಿದ ಪತ್ರಿಕೆಗಳಲ್ಲಿ ಬಂದ ಕೆಲ ತಲೆಬರಹಗಳು :

Digitalized by e-Sahithya Documentation Forum
Sponsored by Sarayu Foundation Trust

'ವೀರಶೈವ ಧರ್ಮದಿಂದ ಮಾನವ ಕಲ್ಯಾಣ'-ಶರ್ಮಾ

'ಬಸವತತ್ವ ಪಾಲನೆಗೆ ಎಸ್.ಎನ್. ಕರೆ'.

ಆದರೆ ಪ್ರಾರಂಭದಲ್ಲಿಯ ಈ ಅಧಿವೇಶನದ ಆಮಂತ್ರಣ ಪತ್ರಿಕೆಯ ಬಗ್ಗೆ ಆಕ್ಷೇಪ: ದಾವಣಗೆರೆ ಬಸವ ಬಳಗದವರು ಆಮಂತ್ರಣ ಪತ್ರಿಕೆಯಲ್ಲಿ ಪಂಚಾಚಾರ್ಯರು ವೀರಶೈವ ಮಹಾಮತ ಸ್ಥಾಪಕರೆಂದು ಸಂಬೋಧಿಸಲಾಗಿದೆ....ಶ್ರೀ ಬಸವಣ್ಣನವರೇ ವೀರಶೈವ ಧರ್ಮ ಸ್ಥಾಪಕರು ಎಂದು ಉಗ್ರವಾಗಿ ಪ್ರತಿಭಟನೆ ವ್ಯಕ್ತಪಡಿಸಿತು. ಚಿತ್ರದುರ್ಗದ ಬೃಹನ್ಮಠದ ಶ್ರೀಗಳು ಅಧಿವೇಶನವನ್ನು ಬಹಿಷ್ಕರಿಸಿದರು.

ದಾವಣಗೆರೆಯ ಬಸವ ಬಳಗದ ನಿಲುವೆಯನ್ನು ಸಮರ್ಥಿಸಿ ಇಳಕಲ್ಲ ಶ್ರೀ ವಿಜಯ ಮಹಾಂತ ಮಹಾಸ್ವಾಮಿಗಳು, ಚಿತ್ರದುರ್ಗದ ಶ್ರೀಗಳ ನಿಲುವೆಯನ್ನು ಸಮರ್ಥಿಸಿ ಬೆಂಗಳೂರಿನ ಬೇಲಿಮಠದ ಶ್ರೀ ಶಿವರುದ್ರ ಸ್ವಾಮಿಗಳೂ ಮಾತನಾಡಿದರು.

ಕೊನೆಯ ದಿನದ ಕಾರ್ಯಕಲಾಪದಲ್ಲಿ ಒಂದು ಘನತರ ಆಘಾತದ ಸುದ್ಧಿ ಬಂತು :

'ಪಂಚಪೀಠಾಧಿಪತಿಗಳ ಸರಿಸಮಾನವಾಗಿ ಅವರ ಪಕ್ಕದಲ್ಲಿ ವಿರಕ್ತ ಪರಂಪರೆಯ ಮಠಾಧೀಶರೊಬ್ಬರಾದ ಶತಾಯುಷಿ ಡಾ|| ಶಿವಬಸವಸ್ವಾಮಿಜಿಯವರನ್ನು ಕೂಡಿಸಲು ನಾಗನೂರು ಶ್ರೀಗಳ ಭಕ್ತರ ಆಸೆಗೆ ಪಂಚಾಚಾರ್ಯ ಪೀಠಾಧಿಪತಿಗಳ ಭಕ್ತವೃಂದ ವಿರೋಧ ವ್ಯಕ್ತಪಡಿಸಿತು...ಕೆಲ ಕಾಲ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಯಿತು....'

ಇದಕ್ಕಿಂತಲೂ ಹೇಯ Disgraceful ಪುಂಡಾಟಿಕೆಯನ್ನು ಕಾಣಲಾದೀತೆ?

ಅಂತೂ ಮಹಾಧಿವೇಶನ ಕೊನೆಗೊಂಡಿತು. ಈ ಘಟನಾವಳಿಯನ್ನು ಗಮನಿಸಿ ಹಾಗ ೧೯೦೪ನೇ ಇಸ್ವಿಯಲ್ಲಿ ಜರುಗಿದ ಮೊದಲನೆ ಅಧಿವೇಶನ ೧೯೦೪ರಲ್ಲಿ ಬಳ್ಳಾರಿಯಲ್ಲಿ ಜರುಗಿದ ಮಹಾಧಿವೇಶನ ನಡವಳಿಕೆಗಳು ನೆನಪಿಗೆ ಬಂದವು. ಪಂಚಾಚಾರ್ಯ-ವಿರಕ್ತರ ಈ ವಿವಾದ ಆಗನಿಂದಲೂ ಮಸೆಯುತ್ತಲೇ ಇದೆ. ಆ ಅಧಿವೇಶನದಲ್ಲಿ ಒಂದು ನಿರ್ಣಯವನ್ನು ಮಂಡಿಸಲು ಸಿದ್ಧತೆ ನಡೆದಿತ್ತು. "ಹಿಂದೂ ಸಮಾಜವು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂದು ನಾಲ್ಕು ವರ್ಣಗಳಾಗಿ ವಿಂಗಡಿಸಲ್ಪಟ್ಟಿರುವಂತೆ ವೀರಶೈವ ಸಮಾಜವೂ ವರ್ಣವ್ಯವಸ್ಥೆಗೆ ಒಳಪಟ್ಟಿರಬೇಕು."

ಈ ನಿರ್ಣಯವನ್ನು ಶ್ರೀ ಮೈಸೂರು ಬಸವಯ್ಯನವರು ಪ್ರಬಲವಾಗಿ ವಿರೋಧಿಸಿದರು. ಶ್ರೀ ಹಾಲಭಾವಿ ವೀರಭದ್ರಪ್ಪನವರು, ಶ್ರೀ ಹಾನಗಲ್ ಕುಮಾರ ಸ್ವಾಮಿಗಳೂ ಈ ನಿರ್ಣಯವನ್ನು ಕೈ ಬಿಡುವಂತೆ ಮಾಡಿದರು.

ಮೊನ್ನೆ (೧೯೯೨ ರಲ್ಲಿ) ಜರುಗಿದ ಮಹಾಧಿವೇಶನದಲ್ಲಿ "ವೀರಶೈವರು ಹಿಂದೂ ಧರ್ಮದಿಂದ ಹೊರ ಬರಬೇಕು" ಎಂದು ಕರೆಯಿತ್ತುದಾಗಿ ವರದಿಯಾಯಿತು. ಅಂದರೆ ಆಗಿನ ಸಮಸ್ಯೆ ಈಗಲೂ ಇದೆ ಎಂದಂತಾಯಿತು.

ವೀರಶೈವ ಮಹಾಸಭೆ ಸ್ಥಾಪನೆ ಆಗಿ ೯೦ ವರ್ಷಗಳಾಗುತ್ತ ಬಂತು. ೨೧ ಅಧಿವೇಶನಗಳು ಜರುಗಿದವು. ಅಂದಿಗೂ ಇಂದಿಗೂ ವೀರಶೈವರಲ್ಲಿ ಶೈಕ್ಷಣಿಕ ಮಟ್ಟ ಹೆಚ್ಚಾಯಿತು. ಉದ್ದಿಮೆದಾರರು ಆದರು. ಅಧಿಕಾರವನ್ನೂ ಪಡೆದುಕೊಂಡರು. ಮಂತ್ರಿಗಳಾದರು, ರಾಜ್ಯಪಾಲರಾದರು, ಉಪರಾಷ್ಟ್ರಪತಿಗಳೂ ಆದರು.

ಆದರೆ ವೀರಶೈವ ಸಮಾಜವನ್ನು ಕಾಡುತ್ತಿರುವ ಒಳಪಂಗಡದ ಪ್ಲೇಗು ಬಸವ ಪಂಥ-ಪಂಚಾಚಾರ್ಯ ಸಂಪ್ರದಾಯ ಹಿಂದೆ ಇದ್ದಷ್ಟೇ ಪ್ರಬಲವಾಗಿ (ಅಲ್ಲಲ್ಲಿ ಕೆಲವು ಆಪವಾದಗಳ ಹೊರತು, ಇತ್ತೀಚೆಗೆ ಅಂತರ್ಜಾತಿ ವಿವಾಹಗಳ ಕೆಲವು ಉದಾಹರಣೆಗಳನ್ನು ಬಿಟ್ಟರೆ) ಈಗಲೂ ವಿಕಟಾಟ್ಟಹಾಸ ಬೀರುತ್ತಿರುವುದನ್ನು ಪ್ರಾಮಾಣಿಕವಾಗಿ ಅಲ್ಲಗಳೆಯುವರೆ ?

ಈ ಅಧಿವೇಶನದ ಕೊನೆಯ ದಿನ ಮಂಜೂರು ಮಾಡಿದ ನೂರಾರು ಗೊತ್ತುವಳಿಗಳನ್ನು ನೋಡಿದರೆ ವೀರಶೈವ ಧರ್ಮ ಮತ್ತು ಸಮಾಜದ ಸಮಸ್ಯೆಗಳು ಎಷ್ಟು ಭೀಕರ ! ರೈಲಿಗೆ ಬಸವ ಎಕ್ಸ್‌ಪ್ರೆಸ್ ಎಂದು ಹೆಸರಿಡಿ, ವಿಶ್ವ ವಿದ್ಯಾನಿಲಯಕ್ಕೆ ಬಸವಣ್ಣನ ಹೆಸರಿಡಿ....ಇ....ಇ....ಗೊತ್ತುವಳಿಯ ಸುರಿಮಳೆ.

ಬಸವ ತತ್ವವನ್ನು ಲೋಕ ಒಪ್ಪಿದರೇ ಜೀವಕ್ಕೂ ಜಗತ್ತಿಗೂ ಮುಕ್ತಿ ಎಂಬುದು ನಿರ್ವಿವಾದ. ಆದ್ದರಿಂದ ಬಸವತತ್ವ ಆಚರಣೆಯಲ್ಲಿ ನಿಶ್ಚಯವಾಗಿ ಬರಲೇಬೇಕು. ಬಸವನ ಆದರ್ಶ-ಎಲ್ಲ ರಂಗಗಳಲ್ಲೂ-ಕಾರ್ಯಗತವಾಗದಿದ್ದರೆ ಜೀವಕ್ಕಾಗಲಿ, ಜಗತ್ತಿಗಾಗಲಿ ಶಾಂತಿಯೂ ಇಲ್ಲ. ಸದ್ಗತಿಯೂ ಇಲ್ಲ. ಲೋಕ ಕಗ್ಗೊಲೆಯ ರಣರಂಗ. ಜೀವನ ಸಂಕಟದ ಸುಡುಗಾಡು. ಇದು ಶಾಶ್ವತ ಸತ್ಯ. ಹಾಗಾದರೆ ಬಸವತತ್ವ ಜೀವನ ಸತ್ಯವಾಗುವಂತೆ ಮಾಡುವ ಪರಿ ಏನು ?

ಬೀದಿಗೆ, ಜಲಾಶಯಕ್ಕೆ, ರೈಲಿಗೆ, ವಿಶ್ವ ವಿದ್ಯಾನಿಲಯಕ್ಕೆ ಬಸವನ ಹೆಸರಿಡುವುದರಿಂದ ಬಸವ ತತ್ವ ಆಚರಣೆಯಲ್ಲಿ ಬಂದೀತೆ ? ಈಗ ಎಷ್ಟೋ ವೃತ್ತಗಳು, ಜಲಾಶಯಗಳು, ಭವನಗಳು, ಬಸವನ ಹೆಸರು ಹೊತ್ತಿವೆ. ಆದರೆ ಬಸವತತ್ವ ನಮ್ಮ ಜೀವನ ಪದ್ಧತಿಯಾಗಿದೆಯೆ ? ಬಸವನ ಹೆಸರನ್ನು ಗುತ್ತಿಗೆ ಹಿಡಿದ ಲಿಂಗವಂತರಲ್ಲಿಯೇ ಬಸವತತ್ವ ಎಷ್ಟರ ಮಟ್ಟಿಗೆ ಆಚರಣೆಯಲ್ಲಿದೆ ?

ಬಸವಣ್ಣ ಧಾರ್ಮಿಕ ಕ್ಷೇತ್ರದಲ್ಲಿ ಮಾಡಿದ ಮಹೋಪಕಾರ- ಇಷ್ಟಲಿಂಗೋಪಾಸನೆಯ ಸುಲಭ ದೈವ ಸಾಕ್ಷಾತ್ಕಾರ ಪದ್ಧತಿ. ಆದರೆ ಎಷ್ಟು ಜನ ಲಿಂಗಾಯಿತರು

Digitalized by e-Sahithya Documentation Forum
Sponsored by Sarayu Foundation Trust

ಅಂಗದ ಮೇಲೆ ಲಿಂಗ ಧವಸಿ ಇಷ್ಟ ಲಿಂಗೋಪಾಸನೆ ಮಾಡುತ್ತಿದ್ದಾರೆ ? ತದ್ವಿರುದ್ಧವಾಗಿ ಬಸವತತ್ವದಿಂದ ಬಸವ ಪಂಥಾನುಯಾಯಿಗಳೇ ದೂರ ದೂರ ಸರಿದು ಹೋಗುತ್ತಿರುವುದನ್ನು ದಿನ ದಿನವೂ ನೋಡುತ್ತಿದ್ದೇವೆ. ಬಸವ ಪಂಥಾನುಯಾಯಿಗಳೆಂದು ಹೇಳಿಕೊಳ್ಳುವ ಜನರ ಕೊರಳಲ್ಲಿ ಆಂಜನೇಯ, ವೆಂಕಟರಮಣ, ಮಂಜುನಾಥ, ಬೃಂದಾವನ....ಮುಂತಾದ ತಾವೀಜಗಳು ಕಂಗೊಳಿಸುತ್ತಿವೆ; ಕಡು ಬಸವ ಪಂಥದವರ ಮನೆಯಲ್ಲಿ ಸಾಯಿಬಾಬ, ರಾಘವೇಂದ್ರಸ್ವಾಮಿ....ಮುಂ....ವಿಭೂತಿ ಪುರುಷರು ಪೂಜೆಗೊಂಬುತ್ತಿದ್ದಾರೆ....ಬಸವಣ್ಣನನ್ನು ವಿಶ್ವ ಗುರುವನ್ನಾಗಿ ಮಾಡಲು ಹೊರಟಿರುವ ಬಸವ ಭಕ್ತರು ಮನೆ ಅಂಗಳದಲ್ಲಿ ಬಸವನನ್ನು ಬೆಳೆಸಲು ಯಶಸ್ವಿಯಾಗಿಲ್ಲ. ಹಾಗಾದರೆ ಮಹಾ ಸಭೆಯ ಮಹಾಧಿವೇಶನದಲ್ಲಿ ಬಸವನನ್ನು ಕೊಂಡಾಡಿದ್ದರ ಪ್ರಯೋಜನವೇನು ? ಅಂದರೆ ಉಪದೇಶ ಮಾಡುವವರ ಮಾತನ್ನು ಯಾರೂ ಕೇಳುತ್ತಿಲ್ಲ ಯಾಕೆ ? ಜನರಿಗೆ ಉಪದೇಶ ಮಾಡುವ ಜನರು ಅಧಿಕಾರ ಪಡೆದಿಲ್ಲ. ಬಸವಣ್ಣ ಅಂಥ ಅಧಿಕಾರ ಪಡೆದುಕೊಂಡು ಬಂದಿದ್ದ. ರಾಜ–ಮಹಾರಾಜರಿಂದ ಹಿಡಿದು ಸಮಾಜದ ಅತ್ಯಂತ ಕೆಳ ಮಟ್ಟದ ಜನರವರೆಗೆ ಎಲ್ಲರೂ ಆತನ ಉಪದೇಶಕ್ಕೆ ಕಿವಿಗೊಟ್ಟರು, ಮನಗೊಟ್ಟರು, ಮುಕ್ತಾತ್ಮರಾದರು. ಅಧಿಕಾರ ಇಲ್ಲದವರು ಎಷ್ಟೇ ಪ್ರಚಾರ ಮಾಡಿದರೂ ಅದಕ್ಕೆ ಬೆಲೆಯಿಲ್ಲ. ಆದರೆ ಪ್ರಚಾರದಿಂದ ಪ್ರಸಿದ್ಧಿ ಬಂದೀತು ಪ್ರಯೋಜನ ಕಡಿಮೆ.

ಹಾಗಾದರೆ ಸಭೆ, ಸಮ್ಮೇಳನ, ವಿಚಾರ ಸಂಕಿರಣ, ಗೋಷ್ಠಿ....ಗಳಿಂದ ಪ್ರಯೋಜನ ಏನು ? ಚಾಮರಸನ ಮಾತಿನಲ್ಲಿ : 'ಹೊತ್ತು ಹೋಗದೆ ಪುಂಡರಾಲಿಪ ಮತ್ತ ಮತಿಗಳ ಗೋಷ್ಠಿ' ಈ ಮಾತು ಎಷ್ಟು ಸತ್ಯ ಎಂಬುದಕ್ಕೆ ನಡೆದ ಘಟನೆಗಳೇ ಸಾಕ್ಷಿ !

—ಕೋ. ಚನ್ನಬಸಪ್ಪ.

(ಸಂಯುಕ್ತ ಕರ್ನಾಟಕ ದಿ. ೧೮–೫–೧೯೯೨ ಪುಟ ೮)

ಕಣ್ಣೀರು ಸುರಿಸುವುದಲ್ಲ

ಸೆಡ್ಡು ಹೊಡೆದು ಎದ್ದು ನಿಲ್ಲುವ ಕಾಲ

ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯ ದಿ|| ೧೮–೫–೧೯೯೨ರ ಸಂಚಿಕೆ ೮ನೆಯ ಪುಟದಲ್ಲಿ ಶ್ರೀ ಕೋ. ಚನ್ನಬಸಪ್ಪನವರ ಲೇಖನವಿದೆ. ಚಿಂತನಾತ್ಮಕ ಬರಹಗಳಿಗೆ ಹೆಸರಾಂತ ಲೇಖನಿ ಅವರದು. ಪ್ರಸ್ತುತ ಲೇಖನದಲ್ಲಿ ಅವರ ಚಿಂತನೆ, ಕಳಕಳಿ ಅಭಿವ್ಯಕ್ತಗೊಂಡಿವೆ. ಆದರೆ, ಅವರು ಅಭಿಪ್ರಾಯ ಪಡುವಂತೆ ಬಸವಣ್ಣ ಕಣ್ಣೀರು

ಸುರಿಸಬೇಕಿಲ್ಲ. ಅವರು ತಮ್ಮ ಉದಾತ್ತ ಚಿಂತನೆ–ಉನ್ನತ ಸಂದೇಶಗಳಿಂದ ಜಾತಿ, ಮತ, ದೇಶ ಭಾಷೆಗಳ ಸೀಮೆದಾಟಿ ಬೆಳೆದು ವಿಚಾರಶೀಲರ ಹೃನ್ಮನಗಳ ಭೂಮಿಯಲ್ಲಿ ನೆಲೆಸಿ, ಬೇರುಬಿಟ್ಟು, ಉದ್ದಗಲ ಎತ್ತರಗಳಲ್ಲಿ ಬೆಳೆಯುತ್ತಿದ್ದಾರೆ.

ಕಣ್ಣೀರು ಸುರಿಸಬೇಕಾದವರು, ಇಂದಿನ ಅವರ ಅನುಯಾಯಿಗಳು, ಧರ್ಮಪಿತ ಬಸವಣ್ಣ ಕೊಟ್ಟ ಎಂಥ ಬೆಲೆಬಾಳುವ ತತ್ತ್ವಗಳನ್ನು ವಿಕೃತಗೊಳಿಸಿರುವ ಇವರು ಮತ್ತು ಸ್ವಧರ್ಮದಲ್ಲಿ ನುಸುಳಿ ಆ ತತ್ತ್ವಗಳನ್ನು ವಿಕಾರಗೊಳಿಸಿದ ಮತಾಂಧರ ಕೈಯಿಂದ ಬಸವ ತತ್ತ್ವವನ್ನು ಪಾರು ಮಾಡದ ಈ ಹೇಡಿಗಳು ಕಣ್ಣೀರು ಸುರಿಸಬೇಕು.

ಇವರೂ ಸುರಿಸಬೇಕಿಲ್ಲ, ಧೂರ್ತ ಪುರೋಹಿತಶಾಹಿಯ ಕಬಂಧ ಹಿಡಿತದಿಂದ ಬಸವತತ್ತ್ವವನ್ನೂ ಪಾರು ಮಾಡಲು ಚಿಂತನ ಶೀಲ ಜನಾಂಗ ಸೆಡ್ಡು ಹೊಡೆದು ನಿಲ್ಲಬೇಕು. ಕಣ್ಣೀರು ಸುರಿಸುವುದು ಹೇಡಿಗಳ ಲಕ್ಷಣ. ಅಂಥ ಹಂದೆ ತನವನ್ನು ಧರ್ಮಗುರು ಎಂದೂ ಮೆಚ್ಚಿಕೊಳ್ಳರು.

ಶ್ರೀ ಕೋ. ಚನ್ನಬಸಪ್ಪನವರು, ಇದಕ್ಕಿಂತಲೂ ಹೇಯ Disgraceful ಪುಂಡಾಟಿಕೆಯನ್ನು ಕಾಣಲಾದೀತೆ ? ಎಂದು ಕೇಳಿದ್ದಾರೆ. ಇದು ವಾಸ್ತವಿಕ ಸತ್ಯ. ಇಂದು ಸಮಾಜದಲ್ಲಿ ಕಣ್ಣು ಹಾಯಿಸಿದರೆ ವಿರಕ್ತಮಠಾಧೀಶರು ಬಸವ ಗುರುವಿನ ಕಾಯಕ–ದಾಸೋಹಗಳ ಬೆಂಬಳಿವಿಡಿದು ಅಪಾರ ಸೇವೆಯನ್ನು ಮಾಡಿದ್ದಾರೆ. ಅವರಿಗೆ ತುಲನೆ ಮಾಡಿದರೆ, ಪಂಚಪೀಠಾಧಿಪತಿಗಳು ಒಂದೇ ಒಂದಂಶದ ಕಾರ್ಯಕ್ರಮ–ಅಡ್ಡಪಲ್ಲಕ್ಕಿ ಉತ್ಸವ ಬಿಟ್ಟು ಏನನ್ನೂ ಮಾಡರು. ಹೊತ್ತು ಮೆರೆಯುವ ಮೂಢ ಭಕ್ತರು, ಅದರಿಂದ ನಾಲ್ಕು ಕಾಸು ಸಂಪಾದಿಸುವ ವ್ಯಾಪಾರಿ ವರ್ಗ, ಹೊತ್ತುದ್ದೇ ಭಾಗ್ಯ ಎಂದು ಸಂತೃಪ್ತಿಯಿಂದ ಬೀಗುವ ಸಿಂಹಾಸನಾಧೀಶ್ವರರು ಈ ಮೂವರ ಮೇಳ ಅತ್ಯದ್ಭುತ. ಸಾಹಿತ್ಯ ಪ್ರಕಟಣೆ, ಶಿಕ್ಷಣ ಕ್ಷೇತ್ರ, ಧರ್ಮಪ್ರಚಾರ ಯಾವುದಾದರೊಂದರಲ್ಲಾದರೂ ಅವರ ದಾಖಲೆ ? ಅವರ ಪಟ್ಟ ಶಿಷ್ಯ ವೃಂದ ತಮ್ಮ ಗುರುಗಳ ಗೌರವ ಉಳಿಸಲು ವಿದ್ಯಾಸಂಸ್ಥೆಗಳನ್ನು ತೆರೆಯುತ್ತಿರುವುದು ಇತ್ತೀಚಿನ ಪ್ರಥ.

ಹೀಗಿರುವಾಗ ಶತಾಯುಷಿಗಳಾದ ಶ್ರೀ ನಾಗನೂರು ಶಿವಬಸವ ಸ್ವಾಮಿಗಳಿಗೆ, ಅದೂ ಮಹಾಧಿವೇಶನದ ಸೂತ್ರಧಾರರಿಗೆ ಸಮಾನ ಕುರ್ಚಿ ಕೊಡಲು ಆ ಆಚಾರ್ಯರುಗಳ ಶಿಷ್ಯರು ಸಿದ್ಧವಿಲ್ಲ ಎಂದಾಗ ಅವರ ಬುದ್ಧಿಮಟ್ಟ, ಚಿಂತನೆಯ ಆಳ ಏನಿದ್ದೀತು? ಈ ಶ್ರೇಷ್ಟರು ಸತ್ತಾಗ ಎಲ್ಲರಿಗಿಂತಲೂ ತಾವು ಮೇಲಿರಬೇಕು ಎಂದು ಆಕಾಶದಲ್ಲಿ ಏನಾದರೂ ಸಮಾಧಿ ಮಾಡಿಸಿಕೊಂಡಿರುವರೋ ನಮಗೆ ತಿಳಿಯದು.

Digitalized by e-Sahithya Documentation Forum
Sponsored by Sarayu Foundation Trust

‘ಪುಂಡಾಟಿಕೆ’ ಎಂಬ ಪದವನ್ನು ಕೋ. ಚನ್ನಬಸಪ್ಪನವರು ಬಳಸಿದ್ದರಿಂದ ಇದನ್ನು ಪುಷ್ಟೀಕರಿಸಲು ಒಂದೆರಡು ಉದಾಹರಣೆ ಕೊಡುವೆ. ಈಗ 2-3 ವರ್ಷಗಳ ಹಿಂದೆ ಇರಬೇಕು. ಒಂದು ಸಭೆಯಲ್ಲಿ ಆಕಸ್ಮಿಕವಾಗಿ ನಮ್ಮ ಶಿಷ್ಯರೊಬ್ಬರು ಭಾಷಣ ಮಾಡುವ ಪ್ರಸಂಗ ಬಂದಿದೆ. ಬಹಳ ಚೆನ್ನಾಗಿ ಮಾತನಾಡುತ್ತಲೇ ಜನರಿಗೆ ಸಂತೋಷವಾಗಿದೆ. ಬಸವ ಜಯಂತಿ-ರೇಣುಕ ಜಯಂತಿಗಳನ್ನು ಕೂಡಿಯೇ ಮಾಡುತ್ತಿದ್ದ ಆ ವೇದಿಕೆ ಮೇಲೆ ನಮ್ಮ ಶಿಷ್ಯೆ ಮಾತಾಡಿ ಪ್ರಭಾವ ಬೀರುತ್ತಲೇ ಅವರಿಗೆ ಸಂಕಟವಾಗಿದೆ. ‘ರೇಣುಕರ ಬಗ್ಗೆ ಹೇಳಿರಿ’ ಎಂದು ಒತ್ತಾಯ ತಂದಿದ್ದಾರೆ. ಎಂದೂ ಇರದ, ಐತಿಹಾಸಿಕತೆ, ವ್ಯಕ್ತಿತ್ವ, ಸಂದೇಶ ಯಾವುದೂ ಇಲ್ಲದ ರೇಣುಕರ ಬಗ್ಗೆ ಏನು ಹೇಳಬೇಕು ? ‘ಹುಲಿಗಳಾರು ಮೊಲವೊಂದು’ ಎಂಬ ಆ ಜಾಗದಲ್ಲಿ ವಾದಕ್ಕಿಳಿಯುವುದು ಬೇಡ ಎಂದು ಈಕೆ ನಾನು ಯಾವುದರಲ್ಲಿ ಅಧ್ಯಯನ ಮಾಡಿದ್ದೇನೋ ಅದನ್ನು ಹೇಳುವೆ. ಗೊತ್ತಿಲ್ಲದರ ಬಗ್ಗೆ ಹೇಳಲಾರೆ.’ ಎಂದು ಹೇಳಿದಳು. ಬಸವ ಜಯಂತಿಯೆಂದು ಬಸವಣ್ಣನವರ ಬಗ್ಗೆ ಹೇಳುತ್ತಲೇ ಕಿಡಿಕಾರತೊಡಗಿ, ಭಾಷಣ ನಿಲ್ಲಿಸಿದರಂತೆ ? ಅಂದರೆ ಅವರು ಬಸವ ಜಯಂತಿ ಮಾಡಿದ್ದೇಕೆ ? ರೇಣುಕರ ಜಯಂತಿ ಅಷ್ಟೇ ಇಟ್ಟರೆ ಜನ ಸೇರರು, ಬಸವ ಜಯಂತಿ ಎಂದು ಡೋಲು ಬಾರಿಸಿ, ಜನರನ್ನು ಆಕರ್ಷಿಸಿ, ನಂತರ ರೇಣುಕರ ಬಗ್ಗೆ ಹೇಳಲು, ಹೇಳಿಸಲು. ಸಭೆ ಮುಗಿಯುತ್ತಿದ್ದಂತೆಯೇ “ನೀವು ರೇಣುಕರ ಬಗ್ಗೆ ಏಕೆ ಹೇಳಲಿಲ್ಲ ?” ಎಂದು ಜಗಳ ತೆಗೆದಿದ್ದಾರೆ. “ಹೌದು ನಾವು ನಮಗೆ ಗೊತ್ತಿಲ್ಲದರ ಬಗ್ಗೆ ಹೇಳುವುದಿಲ್ಲ.” ಎಂದು ಉತ್ತರಿಸುತ್ತಲೇ ಕೋಪದಿಂದ ಕೂಗಾಡಿ ರೇಗಾಡಿ ಕೈಬಿಟ್ಟಿದ್ದಾರೆ. ಅಲ್ಲಿಗೆ ಮುಗಿಯಿತೇ ? ಮುಂದೆ ಒಂದು ತಾಸಿನ ನಂತರ ಬೆಂಗಳೂರಿನ ವೀರಶೈವ ಸಮಾಜದ ಒಬ್ಬ ಗಣ್ಯ ವರ್ತಕರಿಂದ ಫೋನ್ ಬಂದಿತು. ನನ್ನನ್ನು ಕರೆದರು. ಸಹಜವಾಗಿ ಫೋನ್ ಎತ್ತಿದೆ. ಫೋನ್‌ನಲ್ಲಿ ಕಿಡಿಕಾರಿ,

“ಏನ್ರೀ ನಿಮ್ಮ ಶಿಷ್ಯರಿಗೆ ಇದನ್ನೇ ಕಲಿಸಿರುವುದು ?” ಎಂದು ಕೇಳಿದರು.

“ಏಕ್ರೀ ಏನಂದರು ?”

“ನಮಗೆ ಗೊತ್ತಿಲ್ಲ....ಎಂದರು ; ರೇಣುಕರ ಬಗ್ಗೆ ವೀರಶೈವಳಾಗಿ ಗೊತ್ತಿಲ್ಲವೆ?” ಎಂದು ಕನಲಿದರು.

“ನಮ್ಮ ಶಿಷ್ಯೆ, ಪಾಪ, ತಪ್ಪು ಮಾಡಿದ್ದಾಳೆ. ನಾನೇನಾರ ಆಗಿದ್ದರೆ ಗೊತ್ತಿಲ್ಲ ಎನ್ನುತ್ತಿರಲಿಲ್ಲ. ಎಂದೂ ಇಲ್ಲದ ಕಾಲ್ಪನಿಕ ವ್ಯಕ್ತಿ ಬಗ್ಗೆ ಏನು ಹೇಳುವುದು ಎನ್ನುತ್ತಿದ್ದೆ” ಎಂದು ಹೇಳಿದೆ. ಅವರ ಸಿಟ್ಟು ಇನ್ನೂ ನೆತ್ತಿಗೇರಿತು.

(54ನೇ ಪುಟದಿಂದ ಮುಂದುವರಿದಿದೆ)

ವಿಶ್ವಧರ್ಮ ಪ್ರವಚನ

ಭಾಗ - ೨

- ಮಾತಾಜಿ

ಅಧ್ಯಾಯ - ೨೦

(1991ರ ಜುಲೈ-ಆಗಸ್ಟ್ ಸಂಚಿಕೆಯಿಂದ ಮುಂದುವರಿದುದು)

ಧರ್ಮ ಪ್ರಚಾರದ ಅಗತ್ಯವಿದೆಯೆ ?

ಕೆಲವರು ಒಂದು ವಿಲಕ್ಷಣವಾದವನ್ನು ಮುಂದಿಡುತ್ತಾರೆ “ಧರ್ಮವು ಆಚರಿಸತಕ್ಕದೇ ವಿನಾ ಪ್ರಚಾರ ಮಾಡತಕ್ಕದ್ದಲ್ಲ.” ಎಂದು. ಪ್ರಚಾರ ಮಾಡಿ ಧರ್ಮದ ಸತ್ವ-ಮಹತ್ವ ತಿಳಿಸದಿದ್ದರೆ ಜನರು ಆಕರ್ಷಿತರಾಗುವುದೆಂತು ? ವೈದಿಕ ಮತ್ತು ಯಹೂದ್ಯ ಧರ್ಮಗಳು ಎಲ್ಲರಿಗೂ ಧರ್ಮದ ಬಾಗಿಲನ್ನು ತೆರೆಯದಿರುವುದರಿಂದ ಅವು ಈ ತತ್ತ್ವವನ್ನು ಪ್ರತಿಪಾದಿಸುತ್ತವೆ. ಈ ಎರಡು ಧರ್ಮಗಳ ಪ್ರಕಾರ ಹುಟ್ಟಿನಿಂದ, ತಾಯಿ ತಂದೆಯರ ಮೂಲಕವಾಗಿಯೇ ಧರ್ಮ ಬರುವುದರಿಂದ, ಮನೆಯಲ್ಲಿ ಹಿರಿಯರು ಆಚರಿಸುವುದನ್ನು ನೋಡಿ ಕಿರಿಯರು ಕಲಿಯುತ್ತಾರೆ. ಇದಕ್ಕೆ ಪ್ರಚಾರದ ಅಗತ್ಯವಿರದು ಎಂದವರ ಪ್ರತಿಪಾದನೆ.

ಆದರೆ, ಯಹೂದಿ ಧರ್ಮದ ಲೋಪದೋಷ ನಿವಾರಣೆಗೆ ಹುಟ್ಟಿಕೊಂಡ ಕ್ರೈಸ್ತ, ಇಸ್ಲಾಂಗಳು, ಭಾರತದಲ್ಲಿ ವೈದಿಕ ಧರ್ಮದ ದೋಷ ನಿವಾರಣೆಗೆ ಹುಟ್ಟಿಕೊಂಡ ಬೌದ್ಧ, ಜೈನ, ಲಿಂಗಾಯತ, ಸಿಖ್ ಧರ್ಮಗಳು ಮಿಶನರಿ ಧರ್ಮಗಳು, ಅವುಗಳು ಧರ್ಮದ ಬಾಗಿಲನ್ನು ಎಲ್ಲರಿಗೂ ಮುಕ್ತವಾಗಿ ತೆರೆದು, ಎಲ್ಲರಿಗೂ ಧರ್ಮ ಸಂಸ್ಕಾರವನ್ನು ಕೊಡಬೇಕು ಎನ್ನುತ್ತವೆ.

ಜಗತ್ತಿನಲ್ಲಿ ಯಾವುದಾದರೂ ಒಂದು ತತ್ತ್ವ ವಸ್ತು ಇದೆ ಎಂದು ತಿಳಿಯಬೇಕಾದರೆ ಪ್ರಚಾರ ಅತ್ಯಗತ್ಯ. ಒಂದು ಹೂವು ಸುವಾಸನೆ ಬೀರಿ ದುಂಬಿಗಳನ್ನು ತನ್ನೆಡೆಗೆ ಆಕರ್ಷಿಸುತ್ತದೆ. ಅದೇ ರೀತಿ ಧರ್ಮದ ಕಡೆಗೆ ಮನಸ್ಸು ಒಲಿಯಬೇಕಾದರೆ ಧಾರ್ಮಿಕ ನೇತಾರರು ಹಲವಾರು ಪ್ರಯತ್ನಗಳನ್ನು ಮಾಡಬೇಕಾಗುತ್ತದೆ.

ಮನುಷ್ಯನಿಗೆ ಒಳ್ಳೆಯದು ಯಾವುದು, ಕೆಟ್ಟದ್ದು ಯಾವುದು ? ಅನುಸರಿಸಬೇಕಾದ್ದು ಯಾವುದು, ಅನುಸರಣೆಯಿಂದ ದೂರವಿರಬೇಕಾದ್ದು ಯಾವುದು ಎಂಬ ಬಗ್ಗೆ ತಿಳುವಳಿಕೆ ಹುಟ್ಟಿಸದಿದ್ದರೆ, ಅವನು ಆಯ್ಕೆಯಲ್ಲಿ ತಪ್ಪು ಮಾಡಬಹುದು. ಈಗಂತೂ ಇದು ಜಾಹಿರಾತಿನ ಜಗತ್ತು. ಅತಿ ಹೆಚ್ಚು ಪ್ರಚಾರದಲ್ಲಿರುವ ವಸ್ತುವಿಗೆ ಮನುಷ್ಯ ಮಾರುಹೋಗುವನು. ಧರ್ಮವು ಪ್ರಚಾರಗೊಳ್ಳದೆ ಇದ್ದರೆ ಬಹಳ ಪ್ರಚಾರದಲ್ಲಿರುವ ಸಿಗರೇಟು-ಸಾರಾಯಿಗಳಿಗೇ ಮನುಷ್ಯ ಬಲಿ

Digitalized by e-Sahithya Documentation Forum
Sponsored by Sarayu Foundation Trust

ಯಾಗುವನು. ಅತ್ಯುತ್ತಮ ಕಸ್ತೂರಿಯನ್ನು ಮಡಿಕೆಯಲ್ಲಿ ಕಳಾಹೀನವಾಗಿಟ್ಟು, ಕಲಬೆರಕೆ ಕಸ್ತೂರಿಯನ್ನು ಅಂದವಾದ ಬಾಟಲಿಯಲ್ಲಿ ಹಾಕಿಟ್ಟರೆ, ಮನುಷ್ಯನ ಮನಸ್ಸು ಎಳಸುವುದು ಅಂದವಾದ ಬಾಟಲಿಯ ವಸ್ತುವಿಗೆ ತಾನೆ ? ಹಾಗೆ ಧರ್ಮವು ಮಡಿಕೆಯಲ್ಲಿಟ್ಟ ತಾಜಾ ಕಸ್ತೂರಿಯಾದಿ ಅನೀತಿಯೇ ಅಂದಗೊಳಿಸಲ್ಪಟ್ಟ ಆಕರ್ಷಣೀಯ ವಸ್ತುವಾಗುತ್ತದೆ.

ನೈತಿಕ ಶಿಕ್ಷಣ

ಒಂದು ದೊಡ್ಡ ನೀರಿನ ರೆಸರ್ವಾಯಿರ್ ಇದೆ ಎಂದುಕೊಳ್ಳಿರಿ. ಅದರಲ್ಲಿ ತುಂಬಿಸಿರುವ ನೀರು ಅತ್ಯಂತ ಕೊಳಕಾಗಿದೆ. ನಾವು ಬರೀ ನಲ್ಲಿಗಳನ್ನು ಬದಲು ಮಾಡಿ, ಒಮ್ಮೆ ಕಬ್ಬಿಣದ, ಒಮ್ಮೆ ಬೆಳ್ಳಿಯ, ಒಮ್ಮೆ ಹಿತ್ತಾಳೆಯ, ಒಮ್ಮೆ ಬಂಗಾರದ ನಲ್ಲಿಗಳನ್ನು ಹಾಕುತ್ತ ಹೋದರೆ ನೀರಿನ ಗುಣಮಟ್ಟ ಬದಲಾಗುವುದೆ ? ಮತ್ತು ತಳದಲ್ಲಿ ರಾಡಿ ಗಟ್ಟಿಗೊಂಡು ನಿಂತಿದ್ದರೆ ಪುನಃ ಹೊಸ ನೀರು ತುಂಬಿಸಿದರೂ ಅದೂ ಕೊಳಕಾಗುವುದಷ್ಟೆ ಹಾಗೆಯೇ ಜನರ ಮನಸ್ಸನ್ನು ಪರಿವರ್ತಿಸದೆ, ಅವರನ್ನು ತ್ಯಾಗಕ್ಕೆ ಅಣಿ ಮಾಡದೆ, ಅವರಲ್ಲಿ ಸರಳತೆ-ರಾಷ್ಟ್ರಾಭಿಮಾನ ಮುಂತಾದುವನ್ನು ಬೆಳೆಸದೆ ಹೋದರೆ ಯಾವ ಪ್ರಗತಿಯೂ ಸಾಧ್ಯವಿಲ್ಲ. ಸಮಾಜ (ರಾಷ್ಟ್ರ) ಅನ್ನುವ ಟ್ಯಾಂಕಿಗೆ, ಆದರ್ಶಹೀನ ಜನರನ್ನು ತುಂಬಿ, ರಾಜಕೀಯ ಪಾರ್ಟಿಗಳೆಂಬ ನಲ್ಲಿಗಳನ್ನು ಬದಲು ಮಾಡಿದರೆ ಏನು ಪ್ರಯೋಜನ ? ಎಲ್ಲ ಪಾರ್ಟಿಗಳಲ್ಲೂ ಅವರೇ ಇರುವರು. ಮೊದಲು ಜನಾಂಗ ನಿರ್ಮಾಣದ ಕಾರ್ಯ ಆಗಬೇಕು. ಅದನ್ನು ಮಾಡುವ ನೀತಿ ಭೋಧಕರು ತಯಾರಾಗಬೇಕು. ಇದುವೇ ಜಂಗಮನ ಕಾಯಕ.

ಅಧ್ಯಾಯ – ೨೧

ಭಂಡಾರಿ ಪದವಿ-ಅನುಭವ ಮಂಟಪ ಸ್ಥಾಪನೆ

ಕಲ್ಯಾಣವು ಚಾಲುಕ್ಯರ ರಾಜಧಾನಿ; ಆಗ ಅಧಿಕಾರದಲ್ಲಿದ್ದ ತೈಲಪನು ವಿಷಯಾಸಕ್ತನು, ಸ್ತ್ರೀ-ಮದ್ಯ ಪ್ರೇಮಿಯೂ ಆಗಿ ರಾಜ್ಯದ ಆಡಳಿತದಲ್ಲಿ, ಪ್ರಜಾ ಕಲ್ಯಾಣದಲ್ಲಿ ಆಸಕ್ತಿಯನ್ನು ಕಳೆದುಕೊಂಡಿರುವನು. ಅನೇಕ ಬಾರಿ ಶತ್ರುಗಳಿಂದ ಆಕ್ರಮಣ ನಡೆದಾಗ, ತನ್ನ ರಾಜ್ಯದ ಮಹಾಮಂಡಲೇಶ್ವರನಾದ ಮತ್ತು ಸಂಬಂಧಿಯೂ ಆದ ಬಿಜ್ಜಳನ ನೆರವನ್ನು ಪಡೆಯುತ್ತಿರುವನು. ಬಿಜ್ಜಳನು ಮಂಗಳ ವೇಡೆಯನ್ನು ತನ್ನ ಕೇಂದ್ರವನ್ನಾಗಿ ಮಾಡಿಕೊಂಡು, ಚಕ್ರವರ್ತಿ ತೈಲಪನು ಆಹ್ವಾನಿಸಿದಾಗಲೆಲ್ಲ ನೆರವಿಗೆ ಬರುತ್ತಿದ್ದನು. ದೂರದಲ್ಲಿ ಇದ್ದರೆ ತಕ್ಷಣ ನೆರವಿಗೆ ಬರಲು ಆಗದು, ರಾಜಧಾನಿಗೇ ಬರುವುದು ಲೇಸು ಎಂಬ ತೈಲಪನ ಸೂಚನೆ ಬಿಜ್ಜಳನು ತನ್ನ ವಾಸಸ್ಥಳವನ್ನು ಮಂಗಳ ವೇಡೆಯಿಂದ ಕಲ್ಯಾಣಕ್ಕೆ ಬದಲಿಸಲು ಪ್ರೇರಣೆ ನೀಡುತ್ತದೆ,

ಬಿಜ್ಜಳನ ಆಪ್ತ ಸಚಿವರು, ಹಿತೈಷಿಯೂ, ಪ್ರಧಾನಿಯೂ ಆಗಿದ್ದ ಬಲದೇವ ಮಂತ್ರಿಗಳೂ ತಮ್ಮ ಪರಿವಾರದೊಡನೆ ಕಲ್ಯಾಣಕ್ಕೆ ಬರುತ್ತಾರೆ.

ದಿನದಿನಕ್ಕೂ ರಾಜಕಾರಣದಲ್ಲಿ ಆಸಕ್ತಿ ಕಳೆದುಕೊಂಡ ತೈಲಪ ಚಕ್ರವರ್ತಿಯನ್ನು ಬೆಟ್ಟದ ಮೇಲಿನ ಕೋಟೆಯಲ್ಲಿದ್ದ ಅರಮನೆಯಲ್ಲಿ ಗೃಹ ಬಂಧನದಲ್ಲಿ ಇರಿಸಿ, ಬಿಜ್ಜಳ ಮಹಾರಾಜನು ಆಳ್ವಿಕೆಯನ್ನು ಕೈಗೆ ತೆಗೆದುಕೊಂಡ. ಹೀಗಾಗಿ ಮಂಗಳ ವೇಡೆಯಿಂದ ಬಲದೇವ ಮಂತ್ರಿಗಳ ಪರಿವಾರವೂ ಕಲ್ಯಾಣಕ್ಕೆ ಬರುವ ಪ್ರಸಂಗ ಒದಗುತ್ತದೆ,

ಬಸವಣ್ಣನವರು ಕಲ್ಯಾಣಕ್ಕೆ ವಿಕ್ರಮನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿಯಂದು, ಸೋಮವಾರ ಬೆಳಗಿನ ಸಮಯದಲ್ಲಿ ಕಲ್ಯಾಣ ಪಟ್ಟಣವನ್ನು ಪ್ರವೇಶಿಸುತ್ತಾರೆ.

ದೇವಲಿಪಿ ಓದಿದ ಪವಾಡ

ಬಿಜ್ಜಳನು ಅಧಿಕಾರ ಗ್ರಹಣ ಮಾಡಿದ ಬಳಿಕ, ಮುಖ್ಯ ಸ್ಥಳಗಳಲ್ಲಿ ತನ್ನ ವಿಶ್ವಾಸಿಕರನ್ನಿರಿಸುವುದು ಅತ್ಯಂತ ಸಹಜವೆ. ಕೆಲವು ದಿವಸಗಳಲ್ಲಿಯೇ ಬೊಕ್ಕಸದ ಭಂಡಾರಿ ಸಿದ್ಧರಸರ ನಿಧನದಿಂದ ಆ ಸ್ಥಾನ ತೆರವಾಗಿರುವುದು ಅವನನ್ನು ಚಿಂತೆಗೆ ಈಡು ಮಾಡಿದೆ, ಇಂಥದೊಂದು ಸನ್ನಿವೇಶದಲ್ಲಿ ಒಂದು ಪ್ರಸಂಗ ಜರುಗುತ್ತದೆ. ಅದುವೆ ಒಂದು ವಿಶೇಷ ಲಿಪಿಯನ್ನು ಓದಿದುದು. ಅದನ್ನು ಒಂದು ಪವಾಡವನ್ನಾಗಿ ಕವಿಗಳು ಬಣ್ಣಿಸುವರು. ಬಸವ ಪುರಾಣಗಳಲ್ಲಿ ಈ ದೇವಲಿಪಿ ಓದಿದ ಪವಾಡದ ವರ್ಣನೆ ಬಂದಿರುವುದೇ ಅಲ್ಲದೆ, ವಚನಗಳಲ್ಲಿಯೂ ಉಕ್ತವಾಗಿದೆ.

ಹರನಟ್ಟಿದಾಗ್ರಹ ನಿಗ್ರಹದ ಬೆಸನ ಗುರುನಿರೂಪವೆಂದು ಕೈಕೊಂಡು
ಕರುಣಿ ಬಸವಣ್ಣ ಕೈಲಾಸದಿಂದ
ಗುರುಲಿಂಗಜಂಗಮಕ್ಕೆ ಭಕ್ತಿಯ ಮಾಡಬೇಕೆಂದು
ಏಳುನೂರೆಪ್ಪತ್ತು ಅಮರಗಣಂಗಳು ಸಹಿತ
ಮರ್ತ್ಯಲೋಕಕ್ಕೈ ತಂದನಯ್ಯಾ
ಶಿವ ಸಮಯಕ್ಕಾಧಾರವಾದನಯ್ಯಾ ಬಸವಣ್ಣನು
ಲೋಕಾಧಿಲೋಕಂಗಳಿಗೆ ಪರಮಗುರುವಾದನಯ್ಯಾ ಬಸವಣ್ಣನು
ಜಡರುಗಳ ಮನದ ಕತ್ತಲೆಯ ಕಳೆಯಲೆಂದು
ಕಟ್ಟಿತ್ತು ಕಲ್ಯಾಣದಲ್ಲಿ ಮಹಾಮಠವು
ಪರಮನಟ್ಟಿದ ಓಲೆ ಬಂದಿಳಿಯಿತ್ತು, ಬಿಜ್ಜಳನ ಸಿಂಹಾಸನದ ಮುಂದೆ
ಅದ ತಂದು ಓದಿದಡೆ ಸೃಷ್ಟಿಯ ಸೇನಬೋವರಿಗೆ ತಿಳಿಯದು
ಛಪ್ಪನ್ನ ದೇಶದ ಭಾಷೆಯ ಲಿಪಿ ಮುನ್ನವಲ್ಲ

Digitalized by e-Sahithya Documentation Forum
Sponsored by Sarayu Foundation Trust

ಇದನೋದಿದವರಿಗೆ ಆನೆ, ಸೇನೆ, ಕುದುರೆ ಭಂಡಾರ
ಅರವತ್ತಾರು ಕರಣಿಕರಿಗೆ ಮುಖ್ಯನಂ ಮಾಡುವೆನೆಂದು
ಬಿಜ್ಜಳ ಭಾಷೆಯ ಕೊಡುತ್ತಿರಲು
ಹರ ಸಿರೂಪವ ಶಿರದ ಮೇಲಿಟ್ಟು ಶಿವಶರಣೆಂದು
ಬಸವಣ್ಣನೋದಿ ಮೆಟ್ಟಿ ತೆಗೆಸಿದನಯ್ಯ
ಅರವತ್ತಾರುಕೋಟಿ ವಸ್ತುವ ಅರಮನೆಗೆ
ರಾಜ್ಯಕ್ಕೆ ಅರಮನೆಗೆ ಒಡೆಯನಾಗಿ
ಹರಗಣಂಗಳಿಗೆ ಗತಿಮತಿ ಚೈತನ್ಯನಾಗಿ
ಕೂಡಲ ಚೆನ್ನ ಸಂಗಯ್ಯನಲ್ಲಿ
ಅಂಡಜದೊಳಗಿದ್ದು ಶಿವನ ಭಂಡಾರಿಯಾದನಯ್ಯಾ
ಎನ್ನ ತಂದೆ ಪೂರ್ವಾಚಾರಿ ಸಂಗನ ಬಸವಣ್ಣನು

– ಚ.ಬ.ವ. ೬೭೭

ಚನ್ನಬಸವಣ್ಣನವರ ವಚನದಲ್ಲಿ ಬಿಜ್ಜಳನ ಸಿಂಹಾಸನದ ಮುಂದೆ ಓಲೆ ಬಂದುದು, ಬೇರೆ ಯಾರಿಗೂ ಓದಲು ಆಗದಾಗ ಬಸವಣ್ಣ ಓದಿದ್ದು, 66 ಕೋಟಿ ವಸ್ತುಗಳ ತೆಗೆಸಿ ಕೊಟ್ಟುದು, ಅತ್ಯಂತ ಪ್ರಭಾವಶಾಲಿ ಹುದ್ದೆಯನ್ನು ಅಲಂಕರಿಸಿದ್ದು ಪ್ರಸ್ತಾಪವಾಗಿದೆ.

ಈ ಘಟನೆಯಿಂದಾಗಿ ಬಸವಣ್ಣನವರು ಎಲ್ಲರ ಗಮನಕ್ಕೆ ಬಂದರು, ಮುಖ್ಯವಾಗಿ ರಾಜನಿಗೆ ಅವರ ಪ್ರತಿಭೆ ತಿಳಿಯಿತು. ಕರಣಿಕನ ಕಾಯಕದಿಂದ ಅರ್ಥಮಂತ್ರಿಯ ಸ್ಥಾನಕ್ಕೆ ಏರಿದರು. ಈ ಅನಿರೀಕ್ಷಿತ ಆನಂದದ ಘಟನೆಯನ್ನು "ಇದು ದೇವರ ಲೀಲೆ, ಅವನ ಸಂಕಲ್ಪದಂತೆ ಈ ಪ್ರಸಂಗ ನಡೆದಿದೆ" ಎಂದು ಬಸವಣ್ಣನವರು ಉದ್ಗರಿಸಿದುದು, ಪುರಾಣಗಳನ್ನು ರಚಿಸುವವರಿಗೆ ಪ್ರೇರಣೆ ಕೊಟ್ಟು ಕೈಲಾಸದಿಂದ ಈ ಓಲೆ ಬಂದು ಬೀಳುವಂತೆ ಮಾಡಲು ಪ್ರೇರಣೆ ನೀಡಿದೆ.

ಬಿಜ್ಜಳ ಮಹಾರಾಜನು ಕೊಳವೆಯೊಂದರಲ್ಲಿ ಸುತ್ತಿಡಲ್ಪಟ್ಟ ಆ ಸ್ವರ್ಣ ಪಟವನ್ನು ಆಸ್ಥಾನಕ್ಕೆ ತಂದು ಪ್ರಧಾನಿ ಬಲದೇವ ಮಂತ್ರಿಗಳಿಗೆ ತೋರಿಸಿ ಇದನ್ನು ಓದುವಿರಾ ? ಎನ್ನುವನು. ಅವರು ತಮಗೆ ಆಗದೆ ಇತರ ಸಭಾಸದರಿಗೆ ಕೊಡುವನು,

ನಾರಾಯಣ ಕ್ರಮಿತರು ನೋಡಿ ಹೇಳಂವರು, "ಇದೇನೋ ವಿಚಿತ್ರ ಲಿಪಿಯಾಗಿದೆ, ಯಾವುದೋ ಪೈಶಾಚಿಕ ಭಾಷೆ; ಪ್ರಯತ್ನಿಸುವುದರಲ್ಲಿ ಅರ್ಥವೇ ಇಲ್ಲ" ಎನ್ನುವರು, ಕೊಂಡೆಯ ಮಂಚಣ್ಣ ನೋಡಿ, "ತಾಮ್ರದಿಂದಲೇ ಮಾಡಬಹುದಾದ್ದಕ್ಕೆ ಯಾರೋ ಬಂಗಾರವನ್ನು ಬಳಸಿ ಅನ್ಯಾಯ ಮಾಡಿದ್ದಾರೆ." ಎನ್ನುವನು. ಬಿಜ್ಜಳನು ತುಸು ಕೋಪಗೊಂಡು ಹೇಳುವನು, "ನಾವು ಕುತೂಹಲಿತರಾಗಿರುವುದು ಪಟದೊಳಗಿರುವ ವಿಷಯದ ಬಗೆಗೇ ವಿನಾ ಮಾಡಿರುವ ಲೋಹದ ಬಗೆಗಲ್ಲ" ಎಂದು. ಆಗ ಬಲದೇವ ಮಂತ್ರಿಗಳು ತಮ್ಮ ಅಳಿಯನ ಹೆಸರನ್ನು ಪ್ರಸ್ತಾಪಿಸಿ ಆತನಿಗೆ ಬಹಳಷ್ಟು ಲಿಪಿಗಳ ಜ್ಞಾನವಿದೆ, ಏಕೆ ಪ್ರಯತ್ನಿಸಬಾರದು ? ಎಂದು ಸೂಚಿಸುವರು, ಬಿಜ್ಜಳನು ಕರಣಸಾಲೆಯಲ್ಲಿ ಕಾಯಕ ಮಗ್ನರಾಗಿದ್ದ ಬಸವಣ್ಣನವರಿಗೆ ಹೇಳಿ ಕಳಿಸುವನು. ಅವರು ಬಂದಾಗ ಸ್ವರ್ಣಪತ್ರವೊಂದರ ವಿಷಯ ತಿಳಿಸಿ, ಓದುವಿರಾ ಎನ್ನುವನು, ಗುರು ಬಸವಣ್ಣನವರು ಪರಮಾತ್ಮನನ್ನು ನೆನೆಯುವರು. ಇದು ಅವರ ಬದುಕಿನಲ್ಲಿ ಒಂದು ಅಪೂರ್ವ ಪ್ರಸಂಗ; ಅವರ ಸತ್ವಪರೀಕ್ಷೆ. ಅನನ್ಯ ಶರಣಾಗತಿಯಿಂದ ದೇವನಲ್ಲಿ ಬಿನ್ನವಿಸುವರು.

ಎನ್ನ ವಾಮಕ್ಷೇಮ ನಿಮ್ಮದಯ್ಯಾ
ಎನ್ನ ಹಾನಿವೃದ್ಧಿ ನಿಮ್ಮದಯ್ಯಾ
ಎನ್ನ ಮಾನಾಪಮಾನ ನಿಮ್ಮದಯ್ಯಾ
ಬಳ್ಳಿಗೆ ಕಾಯಿ ದಿಮ್ಮಿತ್ತೇ ಅಯ್ಯಾ
ಕೂಡಲ ಸಂಗಮದೇವಾ ?

ದೇವನೇ, ಎನ್ನ ಹಿತ–ಅಹಿತಗಳು ನಿನ್ನನ್ನೇ ಕೂಡಿವೆ. ನನ್ನ ಪ್ರಗತಿ-ವಿಗತಿ, ಕೀರ್ತಿ-ಅಪಕೀರ್ತಿ ನಿನ್ನ ಕೈಲಿವೆ. ಬಳ್ಳಿಗೆ ಕಾಯಿ ಹೇಗೆ ಭಾರವಲ್ಲವೋ ಹಾಗೆ ನನ್ನ ಬದುಕು ನಿನಗೆ ಹೊರೆಯಲ್ಲ,"

ನಿಜಕ್ಕೂ ಬಸವಣ್ಣನವರು ಓದುವುದರಲ್ಲಿ ಯಶಸ್ವಿಯಾಗುವರು, ಬರೀ ಓದಿದ್ದು ಮಾತ್ರವಲ್ಲ, ತ್ರಿಭುವನಮಲ್ಲ ಪೆರ್ಮಾಡಿ ವಿಕ್ರಮಾದಿತ್ಯರು ತಮ್ಮ ಆಳ್ವಿಕೆ ಸುವರ್ಣ ಯುಗವನ್ನು ನಿರ್ಮಾಣಮಾಡಿದಾಗ ಕೂಡಿಟ್ಟಿದ್ದ 66 ಕೋಟಿ ದ್ರವ್ಯವನ್ನು ಭೂಮಿಯಿಂದ ತೆಗೆಸಿಕೊಟ್ಟರು, ಬಿಜ್ಜಳನ ಸಂತೋಷವು ಹೇಳತೀರದಷ್ಟು. ಏಕೆಂದರೆ ಚಾಲುಕ್ಯದೊರೆ ತೈಲಪನ ವಿಷಯಾಸಕ್ತಿ, ರಾಜ್ಯಾಡಳಿತದ ನಿರಾಸಕ್ತಿಯಿಂದಾಗಿ ದೇಶದ ಆರ್ಥಿಕ ಪರಿಸ್ಥಿತಿ ಗಂಭೀರವಾಗಿತ್ತು. ಹೀಗಾಗಿ ಈ ನಿಧಿ ದೇಶದ ಅರ್ಥವ್ಯವಸ್ಥೆಗೆ ಪುನಶ್ಚೇತನ ನೀಡುತ್ತಿತ್ತು.

Digitalized by e-Sahithya Documentation Forum
Sponsored by Sarayu Foundation Trust

ಈ ನಿಧಿಯನ್ನು ಸದುಪಯೋಗ ಮಾಡಲು ಬಸವಣ್ಣನವರೇ ಸೂಕ್ತ ಯೋಜಕರು ಎಂದು ಬಿಜ್ಜಳನು ಅವರನ್ನು ಭಂಡಾರಿಯನ್ನಾಗಿ (ಅರ್ಥ ಮಂತ್ರಿಯನ್ನಾಗಿ) ಮಾಡುವನು. ಅಂದಿನ ಕಾಯಕಕ್ಕೆ ಕರಣಿಕರಾಗಿ ಹೋಗಿದ್ದ ಬಸವಣ್ಣನವರು, ಈ ವಿಶೇಷ ಪ್ರಸಂಗದಿಂದಾಗಿ ಅರ್ಥಮಂತ್ರಿಯಾಗಿ ಮನೆಗೆ ಬರುವಾಗ ಆನೆ, ಸೇನೆ, ಕುದುರೆ, ಭಂಡಾರದೊಡನೆ ಮನೆಗೆ ಬಂದಾಗ ಎಲ್ಲರಿಗೂ ಆನಂದಾಶ್ಚರ್ಯ. ವಿಶೇಷ ದೂತರಿಂದ ಸುದ್ದಿ ತಿಳಿದು, ತಲೆಬಾಗಿಲಲ್ಲೇ ಸ್ವಾಗತಿಸಲು ಅಕ್ಕನಾಗಲಾಂಬಿಕೆ, ನೀಲಾಂಬಿಕೆಯರು ನಿಂತಿದ್ದರು.

"ಬಸವಣ್ಣಾ, ಎಂಥಾ ಪ್ರತಿಭಾವಂತ ! ನಿರೀಕ್ಷೆಗೆ ಮೀರಿದ ಪ್ರಗತಿ ನಿನ್ನದು" ಎಂದು ಅಕ್ಕನು ವಾತ್ಸಲ್ಯ–ಅಭಿಮಾನಗಳಿಂದಾಗಿ ನುಡಿದಾಗ ಅತ್ಯಂತ ವಿನೀತರಾಗಿ ಹೇಳುವರು; "ಅಕ್ಕ, ಇದೆಲ್ಲ ನಾನು ಪಡೆದುದೇ ದೇವನು ಕರುಣಿಸಿದ್ದು ! ಅವನು ಕರುಣಿಸಿದರೆ ಕೊರಡು ಕೊನರುವುದು, ಬರಡು ಹಯನಾಗುವುದು, ವಿಷವು ಅಮೃತವಾಗುವುದು. ಸಕಲ ಪಡಿಪದಾರ್ಥಗಳು ಬಯಸುವ ಮೊದಲೇ ಬಳಿಗೆ ಸಾರುವುವು.

ಹರನು ಕರುಣಿಸಿ ಕೊಡುವ ಕಾಲಕ್ಕೆ ಸಿರಿಯು–ಸಂಪದವು ಮಹಾಪೂರವಾಗಿ ಬರುವುದು. ರಾತ್ರಿಯೆಲ್ಲ ಮಳೆಸುರಿದು ಹಿಂದಿನ ಒಣಗಿನಿಂತಿದ್ದ ಕೆರೆ ಮರುದಿನ ತುಂಬಿ ತುಳುಕುವಂತೆ ಆಗುವುದು, ಪರಿವಾರ, ಪರಿಚಾರಕರು ಎಲ್ಲ ದೊರೆಯುವುದು, ಇವೆಲ್ಲ ದೊರೆತವು ಎಂಬ ಸಂಭ್ರಮದಲ್ಲಿ 'ನಾನೇ ಗಳಿಸಿದೆ' ಎಂಬ ಹಮ್ಮು ಉಂಟಾದರೆ ಆಗ ಹರವಿಯ ತುಂಬ ಹಾಲು ತುಂಬಿ ಒಂದು ಕಲ್ಲು ಎಸೆದಂತೆ ಆಗುವುದು."

ಹೀಗೆ ದೊರೆತ ಅಧಿಕಾರವನ್ನು ದೇವನ ಪ್ರಸಾದವೆಂದೇ ಬಸವಣ್ಣನವರು ಸ್ವೀಕರಿಸಿದರು.

ಅನುಭವ ಮಂಟಪದ ಸ್ಥಾಪನೆ

ಚನ್ನಬಸವಣ್ಣನವರ ವಚನದ ಪ್ರಕಾರ ವಿಶೇಷ ಲಿಪಿಯನ್ನು ಓದುವ ಹೊತ್ತಿಗೆ ಆಗಲೇ ಮಹಾಮಠವು ಕಟ್ಟಲ್ಪಟ್ಟಿತ್ತು ಎಂಬುದು ಮನವರಿಕೆಯಾಗುತ್ತದೆ. ಕಾಲಜ್ಞಾನ ವಚನಗಳ ಪ್ರಕಾರ ಕಲ್ಯಾಣಕ್ಕೆ ಧರ್ಮಪಿತರು ಬಂದು 9 ವರ್ಷಗಳ ನಂತರ ಅನುಭವ ಮಂಟಪ ಆಗಿದೆ. ಆದರೆ ಧರ್ಮಪ್ರಚಾರ ಕಾರ್ಯವು ಮೊದಲೇ ಆರಂಭವಾಗಿದೆ.

ಅನುಭವ ಮಂಟಪದ ಐತಿಹಾಸಿಕತೆ

ಕೆಲವು ಮತ್ಸರಿಗರು, ಗುರುಬಸವಣ್ಣನವರ ಅಸಾಮಾನ್ಯ ವ್ಯಕ್ತಿತ್ವ, ಅದ್ಭುತ ಸಿದ್ಧಿ ಕಂಡು ಹೊಟ್ಟೆಯುರಿ ಪಡುವವರು ಮತ್ತು ಅವರ ಸಮಾನತಾ ತತ್ತ್ವವನ್ನು

ಇಷ್ಟಪಡದವರು 'ಅನುಭವ ಮಂಟಪ ಇರಲೇ ಇಲ್ಲ; ಶರಣರು ವಚನಗಳ ರೂಪದಲ್ಲಿ ಸಂವಾದ ಮಾಡಲೇ ಇಲ್ಲ. ನಂತರದಲ್ಲಿ ಕುಳಿತು ಕೆಲವರು ಇವೆಲ್ಲ ಕಲ್ಪಿಸಿದ್ದಾರೆ.' ಎಂದು ಸಂದೇಹಿಸುವರು.

ಅನುಭವ ಮಂಟಪ ಒಂದು ಕಟ್ಟಡವೇ ? ಅದು ಇತ್ತೆ ? ಎಂಬುದು ತೀರಾ ಅಪ್ರಸ್ತುತ. ಅನುಭವ ಗೋಷ್ಠಿ ಒಂದು ಚಟುವಟಿಕೆ, ಅದನ್ನು ಕಟ್ಟಡದಲ್ಲೇ ಮಾಡಿರಬಹುದು; ಗಿಡದ ಕೆಳಗೂ ಮಾಡಿರಬಹುದು. ಗಣಮೇಳಾಪ, ಶರಣರ ಗೋಷ್ಠಿ ಲಿಂಗವಂತ ಧರ್ಮೀಯನ ಆಚರಣೆಗಳಲ್ಲಿ ಮುಖ್ಯ ಕಟ್ಟಳೆ ಎಂದಾಗ ಎಲ್ಲಿಯಾದರೂ ಮಾಡಿರಲೇ ಬೇಕಲ್ಲ. ಅನುಭವ ಮಂಟಪ ಎಂಬ ಕಟ್ಟಡದಲ್ಲಿ ಕುಳಿತು ಮಾಡಿದರೇ ಅದು ಅನುಭವ ಗೋಷ್ಠಿ ಏನಲ್ಲ. ಅನುಭವ ಗೋಷ್ಠಿ ಮಾಡಿದ ತಾಣ ಅನುಭವ ಮಂಟಪ.

ಬಹಳಷ್ಟು ಜೇನ್ನೊಣಗಳು ಹಾರಾಡುತ್ತಿದ್ದರೆ ಅಲ್ಲಿ ಜೇಂಗೂಡ ಇದೆ ಎಂದ್ಯ ಊಹಿಸುತ್ತೇವೆ. ಬಹಳ ಜನ ಬರೀ ಬಿಂದಿಗೆಗಳನ್ನು ಹೊತ್ತುಕೊಂಡು ಹೋಗ್ತಿದ್ದರೆ, ಪುನಃ ತುಂಬಿದ ಬಿಂದಿಗೆಗಳನ್ನು ಹೊತ್ತು ತರುತ್ತಿದ್ದರೆ ಅಲ್ಲೆಲ್ಲೋ ಜಲರಾಶಿ, ಭಾವಿಯೋ, ಕೊಳವೋ ಇದೆಯೆಂದು ಊಹಿಸುತ್ತೇವೆ. ಹಾಗೆ ಅಸಂಖ್ಯಾತ ಶರಣರು ನಾಡಿನ ಮೂಲೆ ಮೂಲೆಯಿಂದ ಧಾವಿಸಬೇಕಾದರೆ ಅಲ್ಲಿ ವಿಶೇಷವಾದುದೇನೋ ಇರಲೇಬೇಕು.

ಅನುಭಾವಿಗಳು-ದಾರ್ಶನಿಕರು ಬರೆದ ಸಾಹಿತ್ಯ ನೈಸರ್ಗಿಕವಾಗಿ ಅರಳಿದ ಹೂವಿನಂತಿದ್ದರೆ, ಉದ್ದೇಶಪೂರ್ವಕವಾಗಿ ಕುಳಿತು ಬರೆಯುವ ಪಂಡಿತರ ಸಾಹಿತ್ಯ ಕಾಗದದ ಹೂವಿನಂತೆ. ವಚನ ವಾಙ್ಮಯದ ಆಳ–ಹರಹುಗಳನ್ನು ನೋಡಿದರೆ ಆದು ಹೃದಯದ ಆಳದಿಂದ ಬಂದುದು, ಮೇಲಾಗಿ ಮತ್ತೆ ಯಾರೋ ಕುಳಿತು ಬರೆಯುವುದಾದರೆ ಅವರು ಅಂಥ ಅಮೂಲ್ಯ ಸಾಹಿತ್ಯವನ್ನು ರಚಿಸಿದ ಕೀರ್ತಿಯನ್ನು ತಾವು ಹೊಂದಲು ಬಯಸುವರೇ ವಿನಾ. ತಾವು ಬರೆದು ಇನ್ನೊಬ್ಬರ ಕೀರ್ತಿಯನ್ನೇಕೆ ಬೆಳೆಸುವರು? ವಿಷಯದ ವೈವಿಧ್ಯತೆ ಮತ್ತು ವಿಸ್ತಾರದ ದೃಷ್ಟಿಯಿಂದಲೂ ವಚನಗಳು ಆಗಾಗ, ಸುತ್ತಲಿನ ಪರಿಸರದೊಡನೆ ಮಂಥನವಾಗಿ ಸ್ಫುರಿಸಿದ ಆಲೋಚನೆಗಳೇ ವಿನಾ ಕುಳಿತು ಬರೆದ, ನಿಯಂತ್ರಿತ ಕಾಲುವೆಯ ನೀರಿನಂತಲ್ಲ.

ಅಯ್ಯಾ. ಭಕ್ತಿಗೆ ಬೀಡಾದುದು ಕಲ್ಯಾಣ ಮೂವತ್ತಾರು ವರ್ಷ
ಅಯ್ಯಾ, ಅನುಭವಕ್ಕೆ ಶಿವಸದನವಾದುದು ಇಪ್ಪತ್ತೇಳು ವರ್ಷ

Digitalized by e-Sahithya Documentation Forum
Sponsored by Sarayu Foundation Trust

ಅಯ್ಯಾ, ಹಿಂದಿನಂತನುಭವ ಹಿಂದಿನಂತೆ ಭಕ್ತಿಯಿಲ್ಲ –
ಮೂರುಮಾಸದೊಳಗಾಗಿ,
ಇಲ್ಲಿ ಆಡಲು ಭಯವಿಲ್ಲ ಕೇಳಯ್ಯಾ ಕೂಡಲ ಸಂಗಮ ದೇವಯ್ಯಾ

ಬ. ಷ, ವ, ೧೧೬೬

ಬಹುಶಃ ಗಡಿಪಾರನ್ನು ಹೊಂದಿ, ಶರಣರಿಂದ ಬೀಳ್ಕೊಳ್ಳುವಾಗ ಧರ್ಮಪಿತರು ಆಡಿರಬಹುದಾದ ಈ ಮಾತುಗಳನ್ನು ಗಮನಿಸಿ, ಶ್ರೀಗುರುವು ವಿಕ್ರಮನಾಮ ಸಂವತ್ಸರದ ಶ್ರಾವಣಮಾಸದಲ್ಲಿ ಕಲ್ಯಾಣವನ್ನು ಪ್ರವೇಶಿಸಿದರು, ರಕ್ಷಸನಾಮ ಸಂವತ್ಸರ ಫಾಲ್ಗುಣ ಮಾಸದ ದ್ವಾದಶಿ ದಿವಸ ಕಲ್ಯಾಣವನ್ನು ಬಿಟ್ಟರು. ಈ 36 ವರ್ಷ ಕಲ್ಯಾಣವು ಭಕ್ತಿಗೆ ಬೀಡಾಗಿದ್ದಿತು, ಮುಂದೆ 9 ವರ್ಷಗಳ ಬಳಿಕ ಅನುಭವ ಮಂಟಪ ರಚನೆಯಾಗಿ ಅನುಭವಗೋಷ್ಠಿ ನಡೆಯಿತು. ಅವರು ಕಲ್ಯಾಣವನ್ನು ಬಿಟ್ಟ 3 ತಿಂಗಳೊಳಗೆ ಆಗಬಾರದ ಅನಾಹುತಗಳು ನಡೆದು ಹೋದವು,

ಶ್ರೀ ಸಿದ್ಧರಾಮೇಶ್ವರರು ಹೇಳುವರು

ಕಪಿಲ ಸಿದ್ಧ ಮಲ್ಲಿಕಾರ್ಜುನಾ
ನಿಮ್ಮ ಸಂಗನ ಬಸವಣ್ಣ ಬಂದು ಮರ್ತ್ಯದಲ್ಲಿ
ಮಹಾಮನೆಯ ಕಟ್ಟಿದರೆ
ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತ್ತು
ಆ ಮನೆಗೆ ತಲೆಬಾಗಿ ಹೊಕ್ಕವರೆಲ್ಲರೂ
ನಿಜಲಿಂಗ ಪದವಿಯ ಪಡೆದರು,

ಈ ಮಹಾಮನೆಯಲ್ಲಿ ಅನುಭವ ಗೋಷ್ಠಿ ನಡೆಯುತ್ತಿದ್ದ ಭಾಗವೇ ಅನುಭವ ಮಂಟಪ,

ಅನುಭವ ಮಂಟಪ - ಮಾದರಿ ಸಂಸ್ಥೆ

ಜಾತಿವರ್ಣವರ್ಗರಹಿತ ಆದರೆ ಧರ್ಮ ಸಹಿತವಾದ ಕಲ್ಯಾಣ ರಾಜ್ಯವನ್ನು ಕಟ್ಟಲು ಒಂದು ಸಾಧನವನ್ನಾಗಿ ಧರ್ಮಪಿತರು ಅನುಭವ ಮಂಟಪವನ್ನು ಕಟ್ಟಿದರು. ಅನುಭವ ಮಂಟಪ ದೇವಾಲಯವಲ್ಲ. ದೇವಾಲಯಗಳು ದೇವರನ್ನು ನಾಲ್ಕು ಗೋಡೆಗಳ ಮಧ್ಯೆ ಬಂಧಿಸಿದರೆ, ಅನುಭವ ಮಂಟಪ ನಾಲ್ಕು ಗೋಡೆಗಳ ಮಧ್ಯೆ ಇದ್ದ ದೇವರನ್ನು ಬಂಧ ಮುಕ್ತಗೊಳಿಸಿತು. ದೇವಾಲಯಗಳು ಕೆಲವರಿಗೆ ದರ್ಶನಾವಕಾಶ, ಪೂಜಾಹಕ್ಕು ನೀಡಿದರೆ ಮತ್ತೆ ಕೆಲವರನ್ನು ಈ ಸೌಲಭ್ಯಗಳಿಂದ ವಂಚಿಸಿ

ದವು. ಆದರೆ ಅನುಭವ ಮಂಟಪ ಕೆಲವರ ಕಪಿಮುಷ್ಟಿಯಲ್ಲಿದ್ದ ಧರ್ಮ ದೇವರನ್ನು ಎಲ್ಲರ ಸಂಪತ್ತನ್ನಾಗಿ ಮಾಡಲು ಹೋರಾಡಿತು.

ಧರ್ಮ–ದೇವರು-ಸಂಸ್ಕಾರ ಎಲ್ಲ ಮಾನವರ ಹಕ್ಕುಗಳು ಎಂದು ಧರ್ಮಪಿತರು ಸ್ವತಃ ಧರ್ಮಪ್ರಚಾರ ಕೈಗೊಂಡರು; ಅವರ ಕುಟುಂಬ, ಪರಿವಾರ, ಅವರಿಂದ ತರಬೇತಿ ಹೊಂದಿದ ಜಂಗಮರು ಪ್ರಚಾರ ಕೈಗೊಂಡು, ಬಯಸಿದವರಿಗೆ ದೀಕ್ಷಾ ಸಂಸ್ಕಾರ ನೀಡಿದರು. ಹೀಗೆ ದೀಕ್ಷಿತರಾದವರನ್ನೆಲ್ಲ ಒಂದು ಕಡೆ ಸಮಾವೇಶಗೊಳಿಸಿ, ಸಂಸ್ಕರಿಸುವುದು ಮತ್ತು ದೀಕ್ಷಿತರಾದವರು ಪರಸ್ಪರ ಭೇದವಿಲ್ಲದೆ, ಪೂರ್ವಾಶ್ರಮವನ್ನು ಎತ್ತಿ ಆಡದೆ ಸಮಾನಭಾವದಿಂದ ಬೆರೆತು, ಸಹಪಂಕ್ತಿ ಭೋಜನ ಮಾಡಿ, ಸಹೋದರತ್ವ ಪ್ರದರ್ಶಿಸಲೆಂದು ಅನುಭವ ಮಂಟಪ ರೂಪುಗೊಂಡಿತು.

"ಶರಣ ಸಮಾಜ" ಒಂದು ತತ್ತ್ವದ ನೆಲೆಗಟ್ಟಿನ ಮೇಲೆ ರೂಪುಗೊಂಡ ಪಾಕ, ಇದರಲ್ಲಿರುವ ಎಲ್ಲ ವಸ್ತುಗಳು ಪರಿಪಾಕಗೊಂಡು ಸಮರಸವಾಗಬೇಕು," ಎಂದು ಮಂಟಪವು ಕೆಲಸ ಮಾಡಿತು, ಮಾರುಕಟ್ಟೆಯಿಂದ ನಾವು ಅಕ್ಕಿ, ಬೇಳೆ, ಉಪ್ಪು, ಕಾರ. ಕಾಯಿಪಲ್ಲೆ ಎಲ್ಲ ತರುತ್ತೇವೆ ಎಂದುಕೊಳ್ಳಿರಿ. ಆಗ ಉಗ್ರಾಣದಲ್ಲಿ ಎಲ್ಲವೂ ಪ್ರತ್ಯೇಕವಾಗಿ ಇರುತ್ತವೆ, ಈ ಸ್ಥಿತಿಯಲ್ಲಿರುವ ಅದನ್ನು ತರಕಾರಿ ಅನ್ನ ಎಂದು ನಾವು ಕರೆಯುವುದಿಲ್ಲ, ಒಂದು ಪಾತ್ರೆಯಲ್ಲಿ ಹಾಕಿ ಈ ವಸ್ತುಗಳನ್ನೆಲ್ಲ ಕುದಿಸಿದಾಗ ಅದು ಸ್ವಾದ ಸಹಿತವಾದ ತರಕಾರಿ ಅನ್ನವಾಗುವುದು. ಅದೇ ರೀತಿ ಹಿಂದೂ ಸಮಾಜದ ವಿವಿಧ ವರ್ಣ ಜಾತಿಗಳವರು ಪ್ರತ್ಯೇಕವಾಗಿ ಬದುಕುತ್ತ ಸಮರಸವಾಗದೆ ಇರುವುದನ್ನು ಗಮನಿಸಿದ ಬಸವಣ್ಣನವರು ಅನುಭವ ಮಂಟಪ ಎಂಬ ಪಾತ್ರೆಯಲ್ಲಿ ಎಲ್ಲ ಜಾತಿಮತ ಪಂಥಗಳಿಂದ ಬಂದ ಮುಮುಕ್ಷುಗಳನ್ನು ಸೇರಿಸಿ, ಶಿವಾನುಭವ ಸಂಸ್ಕಾರ ಎಂಬ ಚಿದಗ್ನಿಯನ್ನು ನೀಡಿ ಪರಿಪಾಕಗೊಳಿಸಿ ಶರಣ ಸಮಾಜ ಎನ್ನುವುದನ್ನು ರಚನೆ ಮಾಡಿದರು.

ಒಬ್ಬ ಲಿಂಗಾಯತ ಧರ್ಮಾನುಯಾಯಿಯ ಅನುಯಾಯಿತ್ವ ನಾಲ್ಕು ನಂಬಿಕೆ–ಆಚರಣೆಗಳಿಂದ ಪರಿಪೂರ್ಣವಾಗುತ್ತದೆ, ಗುರುಸ್ವಾಯತ, ಲಿಂಗಸ್ವಾಯತ, ಜಂಗಮ ಸ್ವಾಯತ, ಪ್ರಸಾದ ಸ್ವಾಯತ, ಇದನ್ನು ಅಲ್ಲಮ ಪ್ರಭುದೇವರು ಸ್ಪಷ್ಟಪಡಿಸಿದ್ದಾರೆ,

೧. **ಬಸವಾಯತ :** ಧರ್ಮಗುರುವೇ ಒಂದು ಸಮಾಜದ ಮೇಟೀಗೂಟವಿದ್ದಂತೆ, ಧರ್ಮಗುರುವಿನಲ್ಲಿ ಶ್ರದ್ಧೆಯನ್ನಿರಿಸಿಕೊಳ್ಳದ ಯಾವ ಸಮಾಜವೂ ವ್ಯವಸ್ಥಿತವಾಗಿ ಸಾಗದು. ಧರ್ಮಗುರುವಿನ ಜೀವನ, ಸಾಧನೆ, ಸಂದೇಶಗಳು ಅನುಯಾಯಿಗೆ ದಿಕ್ಸೂಚಿಯಿದ್ದಂತೆ,ಆದ್ದರಿಂದ ಗುರುಸ್ವಾಯತವಾಗಬೇಕು ಅಂದರೆ ಬಸವಾಯತನಾಗಬೇಕು.

Digitalized by e-Sahithya Documentation Forum
Sponsored by Sarayu Foundation Trust

೨. **ಲಿಂಗಾಯತ :** ಬಸವ ಗುರುವು ಧಾರ್ಮಿಕ ಸಮಾನತೆಯ ಸಾಧನವಾಗಿಯೂ ವಿಶ್ವಾತ್ಮನನ್ನು ವಿಶ್ವದಾಕಾರದಲ್ಲಿ ಪೂಜಿಸಲು ಅನುವಾಗುವಂತೆಯೂ ಕೊಟ್ಟ ಚುಳುಕಾದ ದೇವ ಇಷ್ಟಲಿಂಗವನ್ನು ಶರೀರದ ಮೇಲೆ ಸಂಬಂಧಿಸಿಕೊಂಡು ಲಿಂಗಾಯತನಾಗಬೇಕು.

೩. **ಗಣಾಯತ :** ಮುಂದಿನದೇ ಜಂಗಮ ಸ್ವಾಯತ, ಅಂದರೆ ಒಂದು ವಿಶಿಷ್ಟ ತತ್ತ್ವಕ್ಕೆ ಬದ್ಧರಾಗಿ, ಗಣಲಾಂಛನವಾದ ಇಷ್ಟಲಿಂಗವನ್ನು ಧರಿಸಿಕೊಂಡು ಧರ್ಮಬಂಧುಗಳಾದವರ ಒಡನಾಟದಲ್ಲಿ ಸೇರಬೇಕು. ಲಿಂಗಾಯತ ಧರ್ಮ ವ್ಯಷ್ಟಿ ಧರ್ಮವಲ್ಲ ಸಮಷ್ಟಿ ಧರ್ಮ, ಕೂಡಿ ಬಾಳಬೇಕೆಂಬುದನ್ನು ಒತ್ತಿ ಒತ್ತಿ ಹೇಳುವ ಧರ್ಮ.

ಕಾಗೆ ಒಂದಗುಳ ಕಂಡಡೆ ಕರೆಯದೇ
ತನ್ನ ಬಳಗವೆಲ್ಲವ ?
ಕೋಳಿ ಒಂದು ಕುಟುಕ ಕಂಡಡೆ ಕೂಗಿ ಕರೆಯದೇ
ತನ್ನ ಕುಲವನೆಲ್ಲವ ?
ಶಿವಭಕ್ತನಾಗಿ ಭಕ್ತಿಪಕ್ಷ ವಿಲ್ಲದಿದ್ದರೆ
ಆ ಕಾಗೆ ಕೋಳಿಯಿಂದ ಕರಕಷ್ಟ, ಕೂಡಲ ಸಂಗಮ ದೇವಾ

ಕಾಗೆ ಕೋಳಿಯಿಂದ ತಮಗೆ ದೊರೆತುದನ್ನು ಹಂಚಿ ತಿನ್ನುವವು ಎಂದಾಗ ದೇವಸಾಕ್ಷಿಯಾಗಿ ಕೂಡಿದ ಶಿವಭಕ್ತ ಕೂಡಿ ಬದುಕಲು ಕಲಿಯಬಾರದೆ? ಹಂಚಿ ತಿನ್ನಬಾರದೆ?

ಎಷ್ಟೇ ದೊಡ್ಡ ವ್ಯಕ್ತಿಯಾಗಲಿ ಅವನು ಜಂಗಮ ಸ್ವಾಯತವಾಗಿ ಅಂದರೆ ಗಣಾಯತನಾಗಿ ಬದುಕಬೇಕು, ಹಾಗೆ ಆಗಬೇಕಾದರೆ ಅವನು ತತ್ತ್ವನಿಷ್ಠನಾಗಿರಲೇಬೇಕಾಗುತ್ತದೆ, ಇಲ್ಲವಾದರೆ ಅವನಿಗೆ ಗಣದ ಸದಸ್ಯತ್ವ ಗಣದಲ್ಲಿ ಸ್ಥಾನ (ಗಣ ಪದವಿ) ಲಭ್ಯವಾಗದು.

ಅಷ್ಟಮಿ ನವಮಿ ಎಂಬ ಕಲ್ಪಿತವೇಕೊ ಶರಣಂಗೆ
ತಪ್ಪಿತ್ತು **ಗಣಪದವಿ** ! ಲಿಂಗಕ್ಕೆ ದೂರ, ಜಂಗಮಕ್ಕೆ ದೂರ
ಒಬ್ಬರಿಗಾಳಾಗಿ ಒಬ್ಬರನೋಲೈಸುವ
ನಿರ್ಬುದ್ಧಿ ಮನುಜರನೇನೆಂಬೆ
ಕೂಡಲ ಸಂಗಮದೇವಾ ? (ಬ, ಷ, ವ, ೬೧೪)

೪. ದುರ್ಗಾಷ್ಟಮಿ, ಮಹಾನವಮಿ, ಘಟ್ಟ ಕೂಡಿಸುವುದು ಮುಂತಾದವು ಶರಣನಿಗಿಲ್ಲ, ಲಿಂಗಾಯತನು ಆಚರಿಸಿದರೆ ಅವನನ್ನು ಸಮಾಜದಿಂದ ಹೊರಗಿಡಬೇಕು, ಏಕೆಂದರೆ ಗಣಪದವಿ ತಪ್ಪುವುದು. ದೇವರಿಗೂ ಬೇಡವಾಗುವನು.

(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು)

ಬಸವ ಧರ್ಮ : ಸ್ವತಂತ್ರ ಅಸ್ತಿತ್ವಕ್ಕಾಗಿ ಹೊಸ ಚಿಂತನೆ

'ಅಖಿಲ ಭಾರತ ವೀರಶೈವ ಮಹಾಸಭಾ' ಎಂಬ ಹೆಸರಿನಲ್ಲಿ ನಡೆಯುತ್ತಿರುವ ಈ ಬೃಹತ್ ಸಮ್ಮೇಳನದಲ್ಲಿ ಭಾಗವಹಿಸುತ್ತಿರುವ ಧರ್ಮಾಭಿಮಾನಿ, ಪ್ರಜ್ಞಾವಂತ ಲಿಂಗಾಯತರ ಮುಂದೆ ಚಿಂತನೆಗಾಗಿ ಹಾಗೂ ಆ ದಿಶೆಯಲ್ಲಿ ಕ್ರಿಯಾಶೀಲರಾಗುವುದಕ್ಕಾಗಿ ನಾವು ಕೆಲವು ಅನಿಸಿಕೆಗಳನ್ನು ತಮ್ಮ ಮುಂದಿಡಬಯಸುತ್ತೇವೆ.

ಈ ಸಮ್ಮೇಳನದ ಹೆಸರೇ ಸೂಚಿಸಿದಂತೆ ಇದು 'ಅಖಿಲ ಭಾರತ ವೀರಶೈವ ಮಹಾಸಭೆಯ' ಸಮ್ಮೇಳನ, ಆದರೆ ಇಲ್ಲಿ ನಾವು ಒಂದು ಅತ್ಯಂತ ಗಂಭೀರವಾದ ಹಾಗೂ ಗಹನವಾದ ವಿಷಯದ ಬಗ್ಗೆ ಗಮನಹರಿಸಬೇಕಾಗಿದೆ. ನಾವು 'ವೀರಶೈವರು' ಎಂದು ಒಪ್ಪಿಕೊಂಡ ಕ್ಷಣವೇ ನಮ್ಮನ್ನು ನಾವೇ ಹಲವಾರು ಗೊಂದಲಗಳಲ್ಲಿ ಹಾಗೂ ಒಂದು ರೀತಿಯಲ್ಲಿ ಅವಮಾನಕ್ಕೂ ಗುರಿಮಾಡಿಕೊಳ್ಳುತ್ತಿದ್ದೇವೆ.

'ವೀರಶೈವ' ಹಾಗೂ 'ಲಿಂಗಾಯತ' ಎಂಬ ಶಬ್ದಗಳನ್ನು ನಾವು ಅತ್ಯಂತ ಹಗುರವಾಗಿ ಹಾಗೂ ಒಂದೇ ಅರ್ಥದಲ್ಲಿ ಬಳಸುತ್ತ ಬಂದಿದ್ದೇವೆ. ಆದರೆ ಈಗ ಈ ಶಬ್ದಗಳು ಹಾಗೂ ಅವುಗಳ ಹಿಂದಿರುವ ಇತಿಹಾಸದ ಬಗ್ಗೆ ಗಂಭೀರವಾಗಿ ಚಿಂತನೆ ಮಾಡುವ ಕಾಲ ಬಂದಿದೆ. 'ವೈಷ್ಣವ', 'ಶೈವ'ದಂತೆಯೆ ಸಾವಿರಾರು ವರ್ಷಗಳ ಹಿಂದೆಯೇ 'ವೀರಶೈವ' ಹೆಸರಿನಲ್ಲಿ ಹಿಂದೂ ಧರ್ಮದ ಉಪಶಾಖೆಯಾಗಿ ವೀರಶೈವ ಧರ್ಮ ಅಸ್ತಿತ್ವಕ್ಕೆ ಬಂದುದನ್ನು ಹಾಗೂ ಈ 'ವೀರಶೈವ' ಉಪಶಾಖೆಯ ಸಂಸ್ಥಾಪಕರು ಪಂಚಾಚಾರ್ಯರು* ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಆದರೆ ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಪ್ರಮಥರ ನೇತೃತ್ವದಲ್ಲಿ ನಡೆದ ಕಾಯಕ ಜೀವಿಗಳ ಅಂದರೆ ಸಮಾಜದಲ್ಲಿ ಆಗಲೂ, ಈಗಲೂ ತುಳಿತಕ್ಕೆ, ಶೋಷಣೆಗೆ ಒಳಗಾಗಿ 'ಕೀಳು ಕುಲದವರು' ಎಂಬ ಹಣೆಪಟ್ಟಿ ಹಚ್ಚಿಕೊಂಡ ಜನತೆಯ ಚಳುವಳಿಯ ಫಲಶೃತಿಯಾಗಿ ಹುಟ್ಟಿದ ಧರ್ಮ 'ಲಿಂಗಾಯತ ಧರ್ಮ'. ಈ ಧರ್ಮಕ್ಕೆ ಹಿಂದೂ ಧರ್ಮದ ಶಾಖೆಯಾದ 'ವೀರಶೈವರು' ಬಹು ಸಂಖ್ಯೆಯಲ್ಲಿ ಕೂಡಿಕೊಂಡಿದ್ದರಿಂದ 'ವೀರಶೈವ' ಪದದ ನಂಟು ಅಂದಿನಿಂದಲೂ ಅಂಟಿಕೊಂಡು ಬಂದಿದೆ. ಯಾವುದೇ ಪೂರ್ವಗ್ರಹಪೀಡಿತ ದೃಷ್ಟಿಯಿಲ್ಲದೇ ವಿಚಾರಿಸಿದರೆ, 'ಲಿಂಗಾಯತ ಧರ್ಮ' ಹನ್ನೆರಡನೆಯ ಶತಮಾನದಲ್ಲಿ ಜೈನರ ಜಡತ್ವ, ಹಿಂದೂಗಳ ಧಾರ್ಮಿಕ, ಸಾಮಾಜಿಕ ಹಾಗೂ ಆರ್ಥಿಕ ದಬ್ಬಾಳಿಕೆ ಹಾಗೂ ಶೋಷಣೆಯ ವಿರುದ್ಧ ಸಿಡಿದೆದ್ದು ಬಂತು

---

*ರೇಣುಕಾದಿ ಪಂಚಾಚಾರ್ಯರದು ಶುದ್ಧ ಮತ್ತು ಅಬದ್ಧ ಕಲ್ಪನೆಯೇ ಹೊರತು ಅವರು ಐತಿಹಾಸಿಕ ವ್ಯಕ್ತಿಗಳಲ್ಲ ಎಂಬುದನ್ನು ಈ ಲೇಖನದ ಪ್ರತಿಪಾದಕರು ಮನಗಣಬೇಕು. —ಮಾತಾಜಿ

Digitalized by e-Sahithya Documentation Forum
Sponsored by Sarayu Foundation Trust

ಶರಣರ, ಹೊಸದೊಂದು ಸಿದ್ಧಾಂತ ಕಾರ್ಯಕ್ರಮ ಹಾಗೂ ಶೋಷಣೆ, ದಬ್ಬಾಳಿಕೆ, ಅಸಮಾನತೆಗಳಿಗೆ ಎಡೆ ಇಲ್ಲದ ಹೊಸ ಧರ್ಮವೇ ಹೊರತು ಹಿಂದೂ ಧರ್ಮದ ಒಂದು ಜಾತಿ ಅಥವಾ ಉಪಶಾಖೆಯಲ್ಲ.

ಇದಕ್ಕೆ ಸಾಕ್ಷಿಯಾಗಿ ನಾವು 'ಲಿಂಗಾಯತ ಧರ್ಮ'ದ ಮೂಲಭೂತ ಧ್ಯೇಯಗಳಾದ 'ಜಾತಿರಹಿತ ಸಮಾಜವಾದಿ ಸಮಾಜ ನಿರ್ಮಾಣ, ಸ್ತ್ರೀಯರಿಗೆ ಪುರುಷರಷ್ಟೇ ಸ್ವಾತಂತ್ರ್ಯ. ಪುರೋಹಿತಶಾಹಿಯ ನಿರ್ಮೂಲನ, ಮೂಢನಂಬಿಕೆಯ ಫಲವಾದ 'ಹಲವಾರು ದೇವರುಗಳ' ಪೂಜೆಯ ನಿರಾಕರಣೆ, ಅಲ್ಲದೆ ಪಂಚ ಸೂತಕಗಳಿಲ್ಲದ, ಏಕದೇವೋಪಾಸನೆಯ, ಪ್ರತಿಯೊಂದು ವಿಚಾರವನ್ನೂ ವೈಜ್ಞಾನಿಕ ವಿಚಾರವಾದದ ಒರೆಗಲ್ಲಿಗೆ ಹಚ್ಚಿ ನೋಡುವ ಒಂದು ನೂತನ ಕ್ರಾಂತಿಕಾರಿ ಧರ್ಮವೇ ಹೊರತು 'ಹಿಂದೂ'ಧರ್ಮಕ್ಕೂ 'ಲಿಂಗಾಯತ'ಧರ್ಮಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲ,

ಇಲ್ಲಿ ಇನ್ನೂ ಗಮನಿಸಬೇಕಾದ ಅಂಶವೆಂದರೆ ಲಿಂಗಾಯತರ ಸಂಸ್ಕಾರಗಳು ಹಾಗೂ ಆಚರಣೆಗಳು 'ಹಿಂದೂ' ಧರ್ಮದ ಚೌಕಟ್ಟಿಗೆ ಯಾವುದೇ ರೀತಿಯಿಂದ ಹೊಂದಿಕೊಳ್ಳದೇ ಇರುವುದು. ಹಿಂದೂಗಳ ಅಂತ್ಯಸಂಸ್ಕಾರಕ್ಕೂ ಲಿಂಗಾಯತರ ಅಂತ್ಯಸಂಸ್ಕಾರಕ್ಕೂ ಇರುವ ಭೇದವನ್ನು ಇಲ್ಲಿ ಪ್ರಮುಖವಾಗಿ ಉದಾಹರಿಸಬಹುದು. ಅಲ್ಲದೇ ಲಿಂಗಾಯತ ಧರ್ಮದಲ್ಲಿ ಮೂರ್ತಿಪೂಜೆ ಅಥವಾ ಇನ್ನೊಬ್ಬರ ಮುಂಖಾಂತರ ಪೂಜೆ ಮಾಡಿಸುವ ಆಚರಣೆಗಳು ಶರಣರಿಂದ ಅತ್ಯಂತ ಕಟುವಾದ ಶಬ್ದಗಳಲ್ಲಿ ಖಂಡನೆಗೆ ಗುರಿಯಾಗಿವೆ. ಪಟ್ಟಿಮಾಡುತ್ತಾ ಹೋದರೆ 'ಹಿಂದೂ' ಧರ್ಮದ ಹಾಗೂ 'ಲಿಂಗಾಯತ' ಧರ್ಮದ ನಡುವಿನ ಕಂದಕ ಎಷ್ಟು ಆಳವೆಂಬುದೂ ಇನ್ನೂ ಹೆಚ್ಚು ವೇದ್ಯವಾಗುತ್ತದೆ. ಅಲ್ಲದೇ ಹಿಂದೂ ಧರ್ಮದ ಪ್ರಮುಖ ಅಸ್ತಿಭಾರವಾದ 'ವರ್ಣಾಶ್ರಮ'ದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರ–ಈ ನಾಲ್ಕು ಪ್ರವರ್ಗಗಳಲ್ಲಿ ಮೊದಲಿನ ಮೂರರಲ್ಲಿ ಸ್ಥಾನವಿಲ್ಲದ ನಾವು ನಾಲ್ಕನೆಯ ಶೂದ್ರ ವರ್ಗದಲ್ಲಿ ಸೇರಿಸಲ್ಪಡುತ್ತೇವೆ. ಅಂದಾಕ್ಷಣ 'ವಿಷ್ಣು'ವಿನ ಬಾಯಿಂದ ಹುಟ್ಟಿದ ಬ್ರಾಹ್ಮಣರು, ತೋಳುಗಳಿಂದ ಹುಟ್ಟಿದ ಕ್ಷತ್ರಿಯರು, ಹೊಟ್ಟೆಯಿಂದ ಹುಟ್ಟಿದ ವೈಶ್ಯರು ಇವರೆಲ್ಲರ ಕೆಳಗೆ ಅಂದರೆ ವಿಷ್ಣುವಿನ ಕಾಲುಗಳಿಂದ ಹುಟ್ಟಿದ ಶೂದ್ರರಾಗುತ್ತೇವೆ. ಈಗ ನಾವು ಸ್ವಾಭಿಮಾನಿ, ಸ್ವತಂತ್ರ, ಯಾವುದೇ ಜಾತಿಯ ಸೋಂಕಿಲ್ಲದ ಹಾಗೂ ಯಾವುದೇ ಜಾತಿಯವರಿಗೂ ಸರಾಗವಾಗಿ ಪ್ರವೇಶಕ್ಕೆ ಅವಕಾಶವಿರುವ 'ಲಿಂಗಾಯತ' ಧರ್ಮೀಯರಾಗಬೇಕೋ ಅಥವಾ ವೀರಶೈವ'ರೆಂದು ಕರೆದುಕೊಂಡು 'ಹಿಂದೂ'ಗಳಾಗಿ ಅವಮಾನದ ಸ್ಥಾನದಲ್ಲಿರಬೇಕೋ ಎಂಬುದನ್ನು ನಿರ್ಧರಿಸಬೇಕಾಗಿದೆ.

ಬ್ರಾಹ್ಮಣ್ಯವೇ ಜೀವಾಳವಾದ ಹಿಂದೂ ಧರ್ಮದ ಸಂಕೋಲೆಗಳಿಂದ ಬಿಡುಗಡೆಯಾಗುವುದೇ ತುಳಿತಕ್ಕೆ ಒಳಗಾದ ಜನತೆಯ ಸಾಂಸ್ಕೃತಿಕ ವಿಮೋಚನೆಯ ಮೊದಲ ಹೆಜ್ಜೆ. ಜಗತ್ತಿನ ಕೆಲವೇ ಶ್ರೇಷ್ಠ ಮಾನವೀಯ ಧರ್ಮಗಳಲ್ಲಿ ಒಂದಾದ ಲಿಂಗಾಯತ ಧರ್ಮವನ್ನು ಹಿಂದೂ ಧರ್ಮದ ಬಾಲಂಗೋಚಿಯೆನ್ನುವಂತೆ ಪ್ರತಿಪಾದಿಸುವ ದುಷ್ಟ ಕೋಮುವಾದಿಗಳ ಧಾರ್ಮಿಕ ರಾಜಕಾರಣದ ಕುತಂತ್ರವನ್ನು ಬಯಲಿಗೆಳೆಯುವದು ಪ್ರತಿಯೊಬ್ಬ ಪ್ರಜ್ಞಾವಂತ ಲಿಂಗಾಯತನ ಪವಿತ್ರ ಕರ್ತವ್ಯವಾಗಿದೆ. ಮಣ್ಣುಗೂಡುತ್ತಿರುವ ಬಸವ ಚಳುವಳಿಯ ಮಾನವೀಯ ಆಶಯಗಳನ್ನು, ಸಮಾನತೆಯ ಮೌಲ್ಯಗಳನ್ನು ಹಿಂದೂ ಸಾಮ್ರಾಜ್ಯಶಾಹಿಗಳ ದಾಳಿಯಿಂದ ರಕ್ಷಿಸುವುದು ಪ್ರತಿಯೊಬ್ಬ ಬಸವಾಭಿಮಾನಿಯ ತುರ್ತು ಕರ್ತವ್ಯವಾಗಿದೆ.

ವರ್ಣಾಶ್ರಮ ಧರ್ಮದ ಆಧಾರದ ಮೇಲೆ ನಿಂತ ಹಿಂದೂ ಧರ್ಮದ ಕಪಿಮುಷ್ಟಿಯಿಂದ ಹೊರಬಂದು ಹನ್ನೆರಡನೆಯ ಶತಮಾನದಲ್ಲಿ ಸಮಾನತೆಯ ಮೌಲ್ಯಗಳ ಆಧಾರದ ಮೇಲೆ, ವರ್ಣವ್ಯವಸ್ಥೆಯ ವಿರುದ್ಧ ತಿರುಗಿ ಬಿದ್ದ ಶರಣ ವ್ಯವಸ್ಥೆಯ ಮಹೋನ್ನತ ಚಿಂತನೆ ಮತ್ತು 'ಮಾನವ ಕುಲವೊಂದೇ' 'ಕಾಯಕವೇ ಕೈಲಾಸ' ಎಂಬ ಸಂದೇಶಗಳನ್ನು ಜಗತ್ತಿಗೆ ಸಾರಿ ಹೇಳುವ ಜವಾಬ್ದಾರಿ ಈ ಚಾರಿತ್ರಿಕ ಸಮ್ಮೇಳನದ ಮೇಲಿದೆ.

ಮೇಲಿನ ವಿಚಾರಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ತಮ್ಮ ಅವಗಾಹನೆಗೆ ಹನ್ನೆರಡನೆಯ ಶತಮಾನದ ಶರಣರ ಕೆಲವು ಆಯ್ದು ವಚನಗಳನ್ನು ತಮಗೆ ಮುಂದಿಡುತ್ತಿದ್ದೇವೆ.

ವೀರಣ್ಣ ದೇಸಾಯಿ
ಮಾಜಿ ಮಹಾನಗರಸಭೆ ಸದಸ್ಯ
ಧಾರವಾಡ

ಬಿ. ಆರ್. ಪಾಟೀಲ
ಉಪಸಭಾಪತಿಗಳು
ವಿಧಾನ ಪರಿಷತ್ತು, ಕರ್ನಾಟಕ ರಾಜ್ಯ

ನೀಲಕಂಠ ಅಸೂಟಿ
ನಿರ್ದೇಶಕರು
ಹಾಲು ಉತ್ಪಾದಕರ ಒಕ್ಕೂಟ
ಹುಬ್ಬಳ್ಳಿ

ಅಪ್ಪಾ ಸಾಹೇಬ ಯರನಾಳ
ಬಿಜಾಪುರ

ಪಿ. ಮಲ್ಲೇಶ್
ಮೈಸೂರು

Digitalized by e-Sahithya Documentation Forum
Sponsored by Sarayu Foundation Trust

ದೇವರ ಕಲ್ಪನೆ

ತಾಯಿ ತಂದೆಯಿಲ್ಲದ ಕಂದಾ, ನಿನಗೆ ನೀನೇ ಹುಟ್ಟಿದೆಯಲ್ಲಾ !
ನಿನ್ನ ಪರಿಣಾಮವೇ ನಿನಗೆ ಪ್ರಾಣ ತೃಪ್ತಿಯಾಗಿರ್ದೆಯಲ್ಲಾ !
ಭೇದಕರಿಗೆ ಅಭೇದ್ಯವಾಗಿ ನಿನ್ನ ನೀನೇ ಬೆಳಗುತ್ತಿರ್ದೆಯಲ್ಲಾ !
ನಿನ್ನ ಚಾರಿತ್ರ್ಯ ನಿನಗೆ ಸಹಜ ಗೂಹೇಶ್ವರಾ.

ಊರೊಳಗೊಬ್ಬ ದೇವ, ಮಡುವಿನಲೊಬ್ಬ ದೇವ.
ಅಡವಿಯಲೊಬ್ಬ ದೇವ, ಮಡಿಲಲೊಬ್ಬ ದೇವ,
ನೀರುನೀರ ಕೂಡಿ, ಬಯಲು ಬಯಲ ಕೂಡಿ,
ನರನೆಂಬ ದೇವ ತಾ ನಿರಾಳವೋ !
ಲಿಂಗವೆಂಬುದೊಂದು ಅನಂತದ ಹೆಸರು
ಗೂಹೇಶ್ವರನೆಂಬಂದದೇನೋ ?

ಅನು ನೀನೆಂಬುದು ತಾನಿಲ್ಲ, ತಾನರಿದ ಬಳಿಕ ಮತ್ತೇನೂ ಇಲ್ಲ.
ಇಲ್ಲದ ಇಲ್ಲವೆಯೆಲ್ಲಿಂದ ಬಪ್ಪುದೋ ? ಅನುವನರಿದು
ತನುವ ಮರೆದು ಭಾವರಹಿತ ಗೂಹೇಶ್ವರ,

ಅರಿದವರಿದೆವೆಂಬಿರಿ ! ಅರಿದ ಪರಿಯೆಂತು ಹೇಳಿರೇ ?
ಅರಿದರರಿದೆವೆಂಬರೇ ? ಅರಿಯಬಾರದ ಘನವನರಿದವರು
ಅರಿಯದಂತಪ್ಪರು ಗೂಹೇಶ್ವರಾ,

ಸಕಲ ವಿಸ್ತಾರದೊಳಗೆಲ್ಲ ಲಿಂಗವ ತೋರಿದ, ಆ ಲಿಂಗದೊಳಗೆ
ಎನ್ನ ತೋರಿದ. ಎನ್ನೊಳಗೆ ತನ್ನ ತೋರಿದ ಮಹಾಗುರುವಿಂಗೆ
ನಮೋ ನಮಃ ಎಂಬೆನಯ್ಯ ಅಖಂಡೇಶ್ವರಾ !

ಪೃಥ್ವಿಗೆ ಹುಟ್ಟಿದ ಶಿಲೆ, ಕಲ್ಲು ಕುಟಿಗಂಗೆ ಹುಟ್ಟಿದ ಮೂರುತಿ
ಮಂತ್ರಕ್ಕೆ ಲಿಂಗವಾಯಿತ್ತಲ್ಲಾ ! ಈ ಮೂವರಿಗೆ ಹುಟ್ಟಿದ
ಮಗನ ಲಿಂಗವೆಂದು ಕೈವಿಡಿದ ಅಚ್ಚ ವ್ರತಗೇಡಿಗಳನೇನೆಂಬೆ ಗೂಹೇಶ್ವರಾ ?

ಮೊಲೆ ಮುಡಿ ಬಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬಂದರೆ
ಗಂಡೆಂಬರು. ನಡುವೆ ಸುಳಿವಾತನು ಗಂಡೂ ಅಲ್ಲ, ಹೆಣ್ಣೂ ಅಲ್ಲ ಕಾಣಾ
ರಾಮನಾಥಾ,

ಕಲ್ಲ ಮನೆಯ ಮಾಡಿ ಕಲ್ಲ ದೇವರ ಮಾಡಿ, ಆ ಕಲ್ಲ ಕಲ್ಲು
ಮೇಲೆ ಕೆಡೆದರೆ ದೇವರೆತ್ತ ಹೋದರೋ ? ಲಿಂಗಪ್ರತಿಷ್ಠೆಯ
ಮಾಡಿದವಂಗೆ ನಾಯಕ ನರಕ ಗೂಹೇಶ್ವರಾ,

ಮಠವೇಕೋ ಪರ್ವತವೇಕೋ, ಜನವೇಕೋ ನಿರ್ಜನವೇಕೋ
ಚಿತ್ತ ಸಮಾಧಾನವುಳ್ಳ ಶರಣಂಗೆ ? ಮತ್ತೆ ಹೊರಗೂ ಚಿಂತೆ
ಧ್ಯಾನ ಮೌನ ಜಪತಪವೇಕೋ ತನ್ನ ತಾನರಿದ ಶರಣಂಗೆ ಗೂಹೇಶ್ವರಾ ?

ಪೃಥ್ವಿಯೊಳಗಿಲ್ಲ, ಆಕಾಶದೊಳಗಿಲ್ಲ, ಚತುರ್ದಶ
ಭುವನಾದಿ ಭುವನಂಗಳೊಳಗೆಯೂ ಇಲ್ಲ ; ಹೊರಗೆಯೂ ಇಲ್ಲ !
ಏನಾಯಿತ್ತೆಂದರಿಯೆನಯ್ಯ ! ಗೂಹೇಶ್ವರ, ಅಂದೂ ಇಲ್ಲ
ಇಂದೂ ಇಲ್ಲ, ಎಂದೂ ಇಲ್ಲ.
ಅಂಧಕರಿಗೆ ಜೀವವಿದ್ದಡೆ ಕಣ್ಣಿಂದಲೇ ಕಂಡು
ನಡೆಯಬಲ್ಲನೇ ? ನೀ ಸತಿಯಾಗಿ, ನಾ ಪತಿಯಾಗಿ ಉಭಯ
ಪ್ರಾಣ ಏಕರೂಪಾಗಿ, ಯೋಗದ ಅಂಗನೆ, ಅಮರೇಶ್ವರ

ಧನ ಸಂಗ್ರಹ ವಿರುದ್ಧ/ಕಾಯಕ/ಸಮಾಜವಾದ

ಹೊನ್ನಿನೊಳಗೊರೆಯ, ಸೀರೆಯೊಳಗೊಂದೆಳೆಯ, ಇಂದಿಗೆ ನಾಳಿಂಗೆ
ಬೇಕೆಂದೆನಾದರೆ, ನಿಮ್ಮಾಣೆ ! ನಿಮ್ಮ ಪುರಾತನರಾಣೆ !
ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ ಕೂಡಲ ಸಂಗಮದೇವಾ

ಕಾಯಕದಲಿ ನಿರುತನಾದಡೆ, ಗುರುದರುಶನವಾದಡೂ ಮರೆಯಬೇಕು ;
ಲಿಂಗ ಪೂಜೆಯಾದಡೂ ಮರೆಯಬೇಕು. ಜಂಗಮ ಮುಂದಿದ್ದರೂ
ಹಂಗು ಹರಿಯಬೇಕು, ಕಾಯಕವೇ ಕೈಲಾಸವಾದ ಕಾರಣ,
ಅಮರೇಶ್ವರ ಲಿಂಗವಾಯಿತ್ತಾದರೂ ಕಾಯಕದೊಳಗು.

ಮನಶುದ್ಧ ವಿಲ್ಲದವಂಗೆ ದ್ರವ್ಯದ ಬಡತನವಲ್ಲದೇ
ಚಿತ್ತ ಶುದ್ಧದಲ್ಲಿ ಕಾಯಕವ ಮಾಡುವಲ್ಲಿ, ಸದ್ ಭಕ್ತರಿಗೆ-
ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು.
ಮಾರಯ್ಯಪ್ರಿಯ ಅಮರೇಶ್ವರಲಿಂಗದ ಸೇವೆಯುಳ್ಳನ್ನಕ್ಕ.

ಎನ್ನ ತನು, ಎನ್ನ ಧನ, ಎನ್ನ ಮನೆ, ಎನ್ನ ಸತಿ ಸುತರೆಂಬ
ಮನಕ್ಕೆ ಈಶ್ವರ ಭಕ್ತಿ ಭಿನ್ನವಾಯಿತ್ತು ನೋಡಾ !
ತನ್ನ ಮರೆದು ಇದಿರನರಿದು, ಒಡವೆಯಾತಂಗೆ ಒಡವೆಯ
ಒಪ್ಪಿಸಿದೊಡೆ ಕೂಡಿಕೊಂಡಿರ್ಪನು ನೋಡಾ ನಮ್ಮ ಅಖಂಡೇಶ್ವರನು !

Digitalized by e-Sahithya Documentation Forum
Sponsored by Sarayu Foundation Trust

ಸತ್ಯ ಶುದ್ಧ ಕಾಯಕದಿಂದ ಬಂದ ದ್ರವ್ಯದಲ್ಲಿ ಚಿತ್ತ ವಿಚ್ಛಂದವಾಗದಿರಬೇಕು. ನೇಮದ ಕೂಲಿಯಿಂದಿನ ನಿತ್ಯನೇಮದಲ್ಲಿ ಸಂದಿರಬೇಕು. ನೇಮದ ಕೂಲಿಯ ಬಿಟ್ಟು, ಹೇಮದಾಸೆಗೆ ಕಾಮಿಸಿ ದ್ರವ್ಯವ ಹಿಡಿದರೆ, ತಾ ಮಾಡುವ ಸೇವೆ ನಷ್ಟವಯ್ಯಾ ! ನಿನ್ನಾಸೆಯ ವೇಷದ ಪಾಶಕ್ಕೆ ನೀನೇ ಹೋಗು, ನನಗೆ ನನ್ನ ಜಂಗಮದ ಪ್ರಸಾದದಾಗೆ ಚಂದೇಶ್ವರ ಲಿಂಗಕ್ಕೆ ಪ್ರಾಣವಯ್ಯ.

ಹಣ ಬಂಗಾರ ವಸ್ತ್ರ ಕಪ್ಪದ ಬಟ್ಟನೆ ಬಿದ್ದಿರಲು, ಕಂಡು ಕಾತರಿಸಿ ಕೈಮುಟ್ಟಿ ಎತ್ತದ ಭಾಷೆ, ಕೊಟ್ಟೊಡೆ ಮುಟ್ಟದ ಭಾಷೆ. ಪರಧನ ಪರಸತಿಗೆ ಅಳುಪದ ಭಾಷೆ. ಇಂತು ಇದಕ್ಕಳುಪಿದೆನಾದೊಡೆ ಸೌರಾಷ್ಟ್ರ ಸೋಮೇಶ್ವರಾ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ !

ಒಡನಿರ್ದ ಸತಿಯೆಂದು ನಂಬಿರ್ದೆನಯ್ಯ
ಕೈ ಹಿಡಿದ ಸತಿಯೆಂದು ನೆಚ್ಚಿರ್ದೆನಯ್ಯಾ
ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದಡೆ
ಆ ಕೂಡಲ ಸಂಗಮನಲ್ಲದೇ ಮತ್ತಾರೂ ಅಲ್ಲ
ತೆಗೆದು ಕೊಡಲೆ ಚಂಡಾಲಗಿತ್ತಿ
ನಮ್ಮಯ್ಯನ ಕೈ ನೊಂದಾವು,

ಕಾಯಕದ ಕಲ್ಪನೆ

ಗುರುವಾದರೂ ಕಾಯಕದಿಂದವೇ ಜೀವನ್ಮುಕ್ತಿ
ಲಿಂಗವಾದರೂ ಕಾಯಕದಿಂದವೇ ಶಿಲೆಯ ಕಂರುಹಂ ಹರಿವುದು
ಜಂಗಮವಾದರೂ ಕಾಯಕದಿಂದಲೇ ವೇಷವ ಪಾಶ ಹರಿವುದು
ಗುರುವಾದರೂ ಚರಸೇವೆಯ ಮಾಡಬೇಕು
ಲಿಂಗವಾದರೂ ಚರಸೇವೆಯ ಮಾಡಬೇಕು
ಜಂಗಮವಾದರೂ ಚರಸೇವೆಯ ಮಾಡಬೇಕು.
ಇದು ಚಂದೇಶ್ವರ ಲಿಂಗದ ಅರಿವು ಕೇಳಾ ಪ್ರಭುವೇ.

ಅಸಿಯಾಗಲಿ ಕೃಷಿಯಾಗಲಿ ಯಾಚಕ ಮಣ್ಣು ಮಸಿಯಾಗಲಿ
ಮಾಡುವಲ್ಲಿ ಹುಸಿಯಿಲ್ಲದಿರಬೇಕು. ಅದು ಅಸಮಾಕ್ಷನ ಬರವು,
ಪಶುಪತಿಯ ಇರುವು, ಐಘಟಿದೂರ ರಾಮೇಶ್ವರ ಲಿಂಗವು ತಾನೇ.

ಕಾಯಕದಲ್ಲಿ ನಿರುತನಾದರೆ, ಗುರು ದರುಶನವಾದುದೂ ಮರೆಯಬೇಕು
ಲಿಂಗಪೂಜೆಯಾದಡೂ ಮರೆಯಬೇಕು ; ಜಂಗಮ ಮುಂದಿದ್ದರೂ
ಹಂಗು ಹರಿಯಬೇಕು. ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು,

ಜಾತಿಪದ್ಧತಿ

ದೇವಸಹಿತ ಭಕ್ತ ಮನೆಗೆ ಬಂದರೆ ಕಾಯಕವಾವುದೆಂದು
ಬೆಸಗೊಂಡರೆ, ನಿಮ್ಮಾಣೆ, ನಿಮ್ಮ ಪುರಾತನರಾಣೆ, ತಲೆದಂಡ !
ತಲೆದಂಡ !! ಕೂಡಲ ಸಂಗಮ ದೇವಾ, ಭಕ್ತರ ಕುಲವನರಸಿದರೆ
ನಿಮ್ಮ ರಾಣಿವಾಸದಾಣೆ !

ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ
ಸಾಲಿಗನಾದ ವೇದವನೋದಿ ಹಾರುವನಾದ ! ಕರ್ಣದಲ್ಲಿ
ಜನಿಸಿದವರುಂಟೆ ಜಗದೊಳಗೆ ? ಇದು ಕಾರಣ
ಕೂಡಲ ಸಂಗಮದೇವಾ, ಲಿಂಗಸ್ಥಲವನರಿದವನೇ ಕುಲಜನು.

ಕಪ್ಪನ ಮನೆಯಲ್ಲಿ ಸೃಷ್ಟಿಗೀಶ್ವರನುಂಬಾಗ, ಎತ್ತ ಹೋದವೋ
ನಿಮ್ಮ ಶಾಸ್ತ್ರಂಗಳು ? ಕಿತ್ತ ಮುಚ್ಚಳು ಬೇಡಂಗೆ ತೆರೆವಾಗ,
ಇಕ್ಕಿದ ಜನಿವಾರ ಬೀಯವಾದವು ! ಮುಕ್ಕುಳಿಸಿದ ನೀರ
ತಂದೆರೆದಡೆ ಎತ್ತಲಿದ್ದವು ನಿಮ್ಮ ವೇದಂಗಳು ?
ನಿಮ್ಮ ದುಃಖ ಬೇಡೆಂದಾತ ಅಂಬಿಗ ಚೌಡಯ್ಯ.

ದಾಸೀಪುತ್ರನಾಗಲಿ ವೇಶ್ಯಾಪುತ್ರನಾಗಲಿ, ಶಿವದೀಕ್ಷೆಯಾದ ಬಳಿಕ ಸಾಕ್ಷಾತು ಶಿವನೆಂದು ವಂದಿಸಿ ಪೂಜಿಸಿ ಪಾದೋದಕ ಪ್ರಸಾದವ ಕೊಂಬುದೇ ಯೋಗ್ಯ. ಹೀಗಲ್ಲದೆ ಉದಾಸೀನವ ಮಾಡಿ ಬಿಡುವವರಿಗೆ ಪಂಚಮಹಾಪಾತಕ, ನರಕ ಕಾಣಾ ಕೂಡಲಸಂಗಮದೇವಾ.

ಎಂತಹನಾದರೇನು, ಲಿಂಗ ಮುಟ್ಟಿದವನೇ ಕೀಳು ಜಾತಿ, ಕುಲವಹುದು ತಪ್ಪದು ಲಿಂಗ ಮುಟ್ಟಲೊಡನೆ, ಹೊನ್ನಹುದು ತಪ್ಪದು ಪರುಷ ಮುಟ್ಟಲೊಡನೆ, ಕೂಡಲಸಂಗಮದೇವನೊಲ್ಲ ಸರ್ವಸಂದೇಹಿಗಳ.

ಸೆಟ್ಟಿಯೆಂದೆಂಬೆನೆ ಸಿರಿಯಾಳನ ? ಮಡಿವಾಳನೆಂದೆಂಬೆನೆ ಮಾಚಯ್ಯನ ?
ಡೋಹಾರನೆಂದೆಂಬೆನೆ ಕಕ್ಕಯ್ಯನ ? ಮಾದಾರನೆಂದೆಂಬೆನೆ ಚೆನ್ನಯ್ಯನ ? ಆನು
ಹಾರುವನೆಂದರೆ ಕೂಡಲಸಂಗಯ್ಯ ನಗುವನಯ್ಯಾ !

Digitalized by e-Sahithya Documentation Forum
Sponsored by Sarayu Foundation Trust

ವೇದ, ಮಂತ್ರ ಮುಂತಾದವುಗಳ ಬಗ್ಗೆ ಮೂಢನಂಬಿಕೆಗಳು.

ಅಜಾತನಗೊಲಿಸದೊಡೆ ಅದೇತರ ಮಂತ್ರ
ಅದೇತರಾಗಮ ಹೇಳಿರೋ ?
ಅದಾವ ಮುಖದಲ್ಲಿ ಲಿಂಗ ಬಂದಿಪ್ಪದೋ ?
ರೂಪಿಲ್ಲದಾತ ನಿಮ್ಮ ಮಾತಿಂಗೆ ಬಪ್ಪನೇ ?
ಅದೇತರ ಮಾತೆಂದನಂಬಿಗರ ಚೌಡಯ್ಯ.

ವೇದಗಳ ಹಿಂದೆ ಹರಿಯದಿರು ಹರಿಯದಿರು
ಶಾಸ್ತ್ರಂಗಳ ಹಿಂದೆ ಸುಳಿಯದಿರು ಸುಳಿಯದಿರು
ಪುರಾಣಗಳ ಹಿಂದೆ ಬಳಸದಿರು, ಬಳಸದಿರು.
ಆಗಮಂಗಳ ಹಿಂದೆ ತೊಳಲದಿರು, ತೊಳಲದಿರು.
ಸೌರಾಷ್ಟ್ರ ಸೋಮೇಶ್ವರನ ಕೈಹಿಡಿದು,
ಶಬ್ದ ಜಾಲಂಗಳಿಗೆ ಬಳಲದಿರು ಬಳಲದಿರು.
ವೇದಶಾಸ್ತ್ರ ಪುರಾಣಾಗಮಂಗಳೆಲ್ಲ ಕೊಟ್ಟಣವ ಕುಟ್ಟುತ್ತ
ನುಚ್ಚು ತೌಡು ಕಾಣಿಭೋ ಇವ ಕುಟ್ಟಲೇಕೆ ?
ಅತ್ತಲಿತ್ತ ಹರಿವ ಮನದ ಶಿರವನರಿದಡೆ
ಬಚ್ಚ ಬರಿಯ ಬಯಲು ಚನ್ನಮಲ್ಲಿಕಾರ್ಜುನ,
ವೇದ ವಿಪ್ರರ ಬೋಧೆ ಶಾಸ್ತ್ರ ಸಂತೆಯ ಮಾತು
ಪುರಾಣ ಪುಂಡರ ಗೋಷ್ಠಿ ಆಗಮ ಅನೃತದ ನುಡಿ
ತರ್ಕ ವ್ಯಾಕರಣ ಕವಿತ್ವ ಪ್ರೌಢಿಮೆ,
ಇದು ಕಾರಣ ತನ್ನೊಳಗನರಿದ ಅನುಭವದಿಂದ
ಘನವಿಲ್ಲೆಂದ ಕಲಿದೇವರ ದೇವ.

ಗಂಗಾದೇವಿ ಮುಂಡೆಯಾದಳು. ಗೌರಿದೇವಿ ಓಲೆಯ ಕಳೆದಳು
ಚಂದ್ರ ಸೂರ್ಯರಿಬ್ಬರೂ ನೀರಿಳಿದರಲ್ಲಾ !
ವಾಯುದೇವ ವಿಮಾನವ ಹೊತ್ತ
ವಾಸುದೇವ ತಳೆಗೊಳ್ಳಿಯನಿರಿದ
ಅಲ್ಲಿಂದತ್ತ ಗುಹೇಶ್ವರ ಸತ್ತನೆಂಬ ಸುದ್ದಿ.

ನೆಲವೊಂದೆ ಹೊಲಗೇರಿ ಶಿವಾಲಯಕ್ಕೆ,
ಜಲವೊಂದೇ ಶೌಚಾಚಮನಕ್ಕೆ
ಕುಲವೊಂದೇ ತನ್ನ ತಾನರಿದವಂಗೆ

ಫಲವೊಂದೆ ಷಡುದರುಶನ ಮುಕ್ತಿಗೆ
ನಿಲವೊಂದೆ, ಕೂಡಲಸಂಗಮದೇವಾ ನಿಮ್ಮನರಿದವಂಗೆ.

ನಿಷ್ಠೆಯುಳ್ಳಾತಂಗೆ ನಿತ್ಯನೇಮದ ಹಂಗೇಕೋ ?
ಅರಿವುಳ್ಳಾತಂಗೆ ಅಗ್ಗವಣಿಯ ಹಂಗೇಕೋ ?
ಮನಶುದ್ಧವುಳ್ಳಾತಂಗೆ ಮಂತ್ರದ ಹಂಗೇಕೋ ?
ಭಾವ ಶುದ್ಧವುಳ್ಳಾತಂಗೆ ಪುಷ್ಪದ ಹಂಗೇಕೋ ?
ಕೂಡಲ ಚೆನ್ನಯ್ಯ ನಿಮ್ಮನರಿದಾತಂಗೆ ಇದಿರಿಟ್ಟರಿಯಬೇಕೆಂಬ ಹಂಗೇಕೋ ?

ಅಚ್ಚಶಿವೈಕ್ಯಂಗೆ ಹೊತ್ತಾರೆ, ಅಮವಾಸ್ಯೆ, ಮಟ್ಟ ಮಧ್ಯಾಹ್ನ.
ಸಂಕ್ರಾಂತಿ ಮತ್ತೆ ಅಸ್ತಮಾನ ಪೌರ್ಣಿಮೆ, ಎಂಬುವಿಲ್ಲ.
ಭಕ್ತನ ಮನೆಯಂಗಣವೇ ವಾರಣಾಸಿ ಕಾಣಾ ರಾಮನಾಥಾ.

ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯಾ ; ರಾಶಿಕೂಟ
ಋಣಸಂಬಂಧವುಂಟೆಂದು ಹೇಳಿರಯ್ಯಾ ; ಚಂದ್ರಬಲ ತಾರಾಬಲವುಂಟೆಂದು
ಹೇಳಿರಯ್ಯ ; ನಾಳಿನ ದಿನಕಿಂದಿನ ಲೇಸೆಂದು ಹೇಳಿರಯ್ಯಾ;
ಕೂಡಲಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯಾ !

ಪುರೋಹಿತಶಾಹಿಯ ವಿರುದ್ಧ

ಹಸಿವಾಪೊಡುಂಬುದನು, ಸತಿಯ ಸಂಭೋಗವನು ಆನಾಗಿ
ನೀ ಮಾಡೆಂಬುವರುಂಟೇ ?
ಮಾಡುವುದು, ಮಾಡುವುದು ಮನಮುಟ್ಟಿ,
ಮಾಡುವುದು, ಮಾಡುವುದು ತನುಮುಟ್ಟಿ,
ತನುಮುಟ್ಟಿ, ಮನಮುಟ್ಟದಿರ್ದಡೆ ಕೂಡಲಸಂಗಮದೇವನೇತರಲ್ಲಿಯೂ ಮೆಚ್ಚ !

ಅಪ್ಯಾಯನಕ್ಕೆ ನೀಡುವೆ. ಲಾಂಛನಕ್ಕೆ ಶರಣೆಂಬೆ ;
ಲಾಂಛನಕ್ಕೆ ತಕ್ಕ ಆಚರಣೆಯಿಲ್ಲದಿದ್ದರೆ ಕೂಡಲಸಂಗಮದೇವಾ
ನೀ ಸಾಕ್ಷಿಯಾಗಿ 'ಚೀ' ಎಂಬೆ!

ವೇಷಕ್ಕಂಜುವೆ, ಹೋಷಕ್ಕೆ ಹೇಸುವೆ.
ಈಶ್ವರನಾಗಿ ಎನ್ನಕಯ್ಯಲ್ಲಿ ಆರಾಧಿಸಿಕೊಳ್ಳಲೊಲ್ಲದೆ,
ಹದಿನೆಂಟು ಜಾತಿಯ ಹೇಸಿಕೆಯ ಕೂಳ ತಿಂಬುವರ-
ನೇನೆಂಬೆನಯ್ಯ ರಾಮನಾಥಾ ?

ಮಂಡೆಯ ಬೋಳಿಸಿಕೊಂಡು ನುಡಿದು. ಗೋಷ್ಠಿಯ ಕಟ್ಟಿದರೇನು ?
ಕಂಡ ಕಂಡವರಿಗೆ ಕೈಯೊಡ್ಡಿ ಬೇಡುವ ಭಂಡರನೊಲ್ಲ ನಮ್ಮ ರಾಮನಾಥ,

Digitalized by e-Sahithya Documentation Forum
Sponsored by Sarayu Foundation Trust

ಅರ್ಘ್ಯವಣಿ ಪತ್ರ ಧೂಪದೀಪ ನಿವಾಳಿಯಲ್ಲಿ ಪೂಜಿಸಿ ಪೂಜಿಸಿ
ಬಳಲುತ್ತೈದಾರೆ ! ಏನೆಂದರಿಯರು ಎಂತೆಂದರಿಯರು, 'ಜನಮರುಳೋ
ಜಾತ್ರೆ ಮರುಳೋ' ಎಂಬಂತೆ ಎಲ್ಲರೂ ಪೂಜಿಸಿ, ಏನನೂ
ಕಾಣದೇ ಲಯವಾಗಿ ಹೋದರು ಗುಹೇಶ್ವರಾ.

ಸರ್ವಜ್ಞಾನಿಗಳಾಗಿಯಚ್ಚುಗಬಡುವಡೆ, ಹಬ್ಬಿದ ಪಾಪದ ಫಲವ–
ನುಂಬಡೆ, ಒಬ್ಬುಳವನೆ ಬಿತ್ತಿ ಒಬ್ಬುಳವನೆ ಬೆಳೆವಡೆ, ಕಬ್ಬುನ ಹುಳಿವಡಿನ್ನೇವೆ
ರಾಮನಾಥಾ ?

ಗುರುವೆಂದೆಂಬೆನೆ ? ಹಲಬರ ಮಗ. ಲಿಂಗವೆಂದೆಂಬೆನೆ ? ಕಲ್ಲುಕುಟಿಗನ ಮಗ.
ಪ್ರಸಾದವೆಂದೆಂಬೆನೆ ?
ಒಕ್ಕಲಿಗನ ಮಗ, ಪಾದತೀರ್ಥವೆಂದೆಂಬೆನೆ ? ದೇವೇಂದ್ರನ ಮಗ, ಈಸುವನು
ಹಿಡಿಯಲಿಲ್ಲ,
ಬಿಡಲಿಲ್ಲ, ತನ್ನೊಳಗೆ ನೋಡೆಂದಾತ ನಮ್ಮ ಅಂಬಿಗರ ಚೌಡಯ್ಯನು,

— o —

ಅಮೋಘ ಧ್ವನಿಸುರುಳಿಗಳು

– ಡಿ. ಬಿ. ಕೊಳ್ಳಿ, ಬೈಲಹೊಂಗಲ

ಪರಮ ಪೂಜ್ಯ ಮಹಾಜಗದ್ಗುರು ಶ್ರೀ ಶ್ರೀ ಶ್ರೀ ಲಿಂಗಾನಂದ ಸ್ವಾಮಿಗಳು
ಬಸವ ಧರ್ಮ ಪೀಠ, ಕೂಡಲ ಸಂಗಮ,

ಈ ಪದವಿಗೇ ತಾವು ಮಿಗಿಲಾದವರು, ಎಂದರೂ ತಪ್ಪಿಲ್ಲಾ. "ಇಷ್ಟಲಿಂಗದ ಅವಶ್ಯಕತೆ" "ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತ" ಕ್ಯಾಸೆಟ್‌ಗಳು. ಒಂದೇ ಎರಡೆ, ಇದೊಂದು ಅಗಾಧವಾದ ಕೆಲಸ ಆಗಿದೆ, ಬೆಳಿಗ್ಗೆ 4-30 ಅಥವಾ 5ಕ್ಕೆ ಕೆಸೆಟ್ ಹಾಕಿ ವಿಷಯ ಕೇಳುತ್ತ ಹೊದ್ದುಕೊಂಡು ಬೆಚ್ಚಗೆ ಮಲಗಿದರೆ ಸ್ವರ್ಗಸುಖ, ಏನು ಸುಂದರ ಪ್ರತಿಪಾದನೆ, ಎಷ್ಟೊಂದು ನಿರರ್ಗಳವಾದ ಮಾತುಗಳು, ಕ್ಯಾಸೆಟ್ ಪ್ರಾರಂಭದಿಂದ ಹಿಡಿದು ಮುಕ್ತಾಯದವರೆಗೂ ಕೇಳಿದರೆ ಎಲ್ಲಿಯೂ ಒಂದು ಸ್ಥಳದಲ್ಲಿ ಸಹಿತ ಡಬಲ್ ಶಬ್ದ ಅಥವಾ "ಆs ಆs"ಗಳು ಸಿಕ್ಕಾವೆಯೋ, ಇಲ್ಲವೇ ಇಲ್ಲಾ. ಎಂಥಹ ಅಸ್ಖಲಿತ ವಾಣಿ. ಜಾಣ ಕೇಳುಗನಿದ್ದರೆ ಈ ಶೈಲಿಗೆ ಬೆರಗಾಗುತ್ತಾನೆ. ಜೋಗ ಜಲಪಾತ ದಿಂದ ತುಂಬಿ ಹರಿಯುವಾಗ ರೋರರ, ರಾಕೆಟ್‌ಗಳು ಒಂದೇಸಮನೆ ಧಾರಾಕಾರವಾಗಿ ಸುರಿಯುವಂತೆ ತಮ್ಮ ಮುಖಾರವಿಂದದಿಂದ ಸುಂದರ ಶಬ್ದಗಳು ಸುರಿಯುತ್ತಿರು ವುದನ್ನು ಕೇಳುತ್ತಿದ್ದರೆ ಬುದ್ಧಿವಂತರು ಮಂತ್ರ ಮುಗ್ಧರಾಗುತ್ತಾರೆ. ನಿಜಕ್ಕೂ

ತಾವು ವಾಚಸ್ಪತಿ, ಬೃಹಸ್ಪತಿ. ಆಧುನಿಕ ಬಸವಣ್ಣನಿಗೆ ಅಲ್ಲದೆ ಇನ್ನಾರಿಗೆ ಈ ರೀತಿಯ ಪರಿಪೂರ್ಣತೆ ಸಾಧ್ಯ !!

ಪೂಜ್ಯ ಮಾತಾಜಿಯವರೆ ನಂಬರ ಒಂದು ಎಂದು ಮನಸ್ಸು ಒಳಗೊಳಗೆ ಕದ್ದುಮುಚ್ಚಿ ಅಂತರಾತ್ಮಕ್ಕೆ ಹೇಳುತ್ತಿತ್ತು. ಆದರೆ ಬೆಳಗಿನ ಶಾಂತ ವಾತಾವರಣದಲ್ಲಿ ಅಪ್ಪಾಜಿಯವರ ಅಮೃತ ವಾಣಿಯನ್ನು ಕೇಳಬೇಕು ಅದೇ ಸ್ವರ್ಗ. ಮಾತಾಜಿ ಯವರದೇನು ಕಮ್ಮಿಯೇ! ಅವರ ವಿದ್ವತ್ತರವಾದ ಮಾತುಗಳನ್ನು ಆ ಕಂಚಿನ ಕಂಠ ದಿಂದ ಕೇಳುತ್ತಿದ್ದರೆ ಕೇಳುಗನಿಗೆ ಆನಂದದಲ್ಲಿ ಪರವಶನಾಗದೆ ಬೇರೆ ಗತಿಯೇ ಇಲ್ಲ, ಅವರ ಮಾತಿನ ಮೋಡಿ ಒಂದು ಕ್ಲೋರೋಫಾಮ್.

ಯಾವುದು ಹೆಚ್ಚು ಯಾವುದು ಕಮ್ಮಿ ತಿಳಿಯಲಸಾಧ್ಯ. ಅಂತೂ ಅಪ್ಪಾಜಿ ಆಧುನಿಕ ಬಸವಣ್ಣ ಮಾತಾಜಿ ಅಕ್ಕಮಹಾದೇವಿ–ಎಷ್ಟು ಸುಂದರ ಈ ಮಾತು, ಈ ಗುರುದ್ವಯರನ್ನು ಪಡೆದ ಇಂದಿನ ಜನಾಂಗವೇ ಧನ್ಯ, ಬೀಜದಲ್ಲಿ ಮರವೋ ಮರ ದಲ್ಲಿ ಬೀಜವೋ ? ಬೀಜ ಮೊದಲೋ ಅಥವಾ ಮರ ಮೊದಲೋ ? ಯಾರಿಗೆ ಹೇಳಲು ಸಾಧ್ಯ !! ಹೀಗಿದೆ ಮಾತಾಜಿ ಮತ್ತು ಅಪ್ಪಾಜಿ ಅವರ ಶ್ರೇಷ್ಠತೆ.

ಈ ಅಲ್ಪಮತಿಯಾದ ನನಗೆ ತಮ್ಮಿರುವಿಕೆಯನ್ನು ಚೆನ್ನಾಗಿ ಅಷ್ಟು ಸಮರ್ಪಕ ವಾಗಿ ಸುಂದರವಾಗಿ ವರ್ಣಿಸಲು ಸಮರ್ಥನಾದುದಕ್ಕೆ ಬಹಳೇ ಕೆಡಕು ಎನಿಸುತ್ತದೆ, ಹಿಂದಿನ ಕಾಲದ ಹೇಳಿಕೆಗಳಲ್ಲಿ ಅನ್ನುತ್ತಿದ್ದಂತೆ - ಸಾವಿರ ನಾಲಗೆಯ ಆದಿಶೇಷನಿಗೆ ಸಾಧ್ಯವಲ್ಲದೆ ನನ್ನಂತಹ ಪಾಮರನಿಂದ ಅಸಾಧ್ಯವಾದದ್ದು.

ಕಾಲೇಜ್ ಜೀವನ ಒಂದು ನೆನಪು

ಅಪ್ಪಾಜಿ, ತಾವು ಕಾಲೇಜ ವಿದ್ಯಾರ್ಥಿಗಳಿದ್ದಾಗ ಸ್ವಾಮಿ ವಿವೇಕಾನಂದ ಮಹಾಪುರುಷರ ಫೋಟೋದ ಮುಂದೆ ನಿಂತು ಈ ಸ್ವಾಮೀಜಿ ಧರಿಸಿದ ಡ್ರೆಸ್ಸ ಕಾಷಾಯ ಬಣ್ಣದ ಬಗಲ ಕಸಿಯ ಭಗವಾ ನಿಲುವಂಗಿ ಆ ಕಾವಿಯ ಬಣ್ಣದ ವಿವೇಕಾನಂದರ ಶೈಲಿಯಲ್ಲಿ ಸುತ್ತಿದ ಟರ್ಬನ್ನು ಮತ್ತು ಆ ಅದೇ ಬಣ್ಣದ ಲುಂಗಿ ತಮಗೆ ಬಹಳ ಸೇರುತ್ತಿತ್ತಂತೆ. ಅಪ್ಪಾಜಿ ತಾವು ಹಾಗೆ ಅನ್ನುವದನ್ನು ಅನೇಕಸಲ ಕೇಳಿದ ನಿಮ್ಮ ಕ್ಲಾಸ್‌ಮೇಟ ಅವರನ್ನು ಮೊನ್ನೆ ಶರಣ ಮೇಳಕ್ಕೆ ಕರಕೊಂಡು ಬಂದಿದ್ದೆ. ತಮ್ಮನ್ನು ಕಂಡು ಬೆರಗಾದರು, ತಮ್ಮ ಚರಣಕ್ಕೆ ಶರಣಾದರು, ಸ್ವಾಮಿ ವಿವೇಕಾನಂದರ ಯಾವ ಫೋಟೊದಲ್ಲಿಯ ಡ್ರೆಸ್ಸಿಗೆ ಅಪ್ಪಾಜಿ ತಾವು ಮರುಳಾಗಿ ದ್ದಿರೋ ಅದೇ ಡ್ರೆಸ್ಸಿನಲ್ಲಿ (ಅಂದಿನ ತಮ್ಮ ಜೊತೆಗಿದ್ದ ಇವರು) ತಮ್ಮನ್ನು ಕಂಡು ತನ್ನ ತಪ್ಪನ್ನು ಒಪ್ಪಿಕೊಂಡರು–ಮತ್ತು ದೂರದಲ್ಲಿದ್ದು ಏನನ್ನೂ ಕಂಡರಿಯದ ನಾವು ಹಾಗೆ ಟೀಕೆ ಮಾಡಿ ಪಾಪ ಕಟ್ಟಿಕೊಂಡಿದ್ದೇವೆ ಎಂದು ಒಪ್ಪಿಕೊಂಡರು.

Digitalized by e-Sahithya Documentation Forum
Sponsored by Sarayu Foundation Trust

ಅವರನ್ನು ಒತ್ತಾಯದಿಂದ ನಾನು ಕರೆದುಕೊಂಡು ಬಂದಿದ್ದೆ. ಅವರ ತಲೆಯಲ್ಲಿಯ ಕಲ್ಮಶವೆಲ್ಲ ಓಡಿತು. ಅಷ್ಟೇ ಏಕೆ ಇಲ್ಲಿಯ ಈ ಕೂಡಲ ಸಂಗಮದಲ್ಲಿ ಮಾಡಿದ ಅಗಾಧವಾದ ಕೆಲಸ ನೋಡಿ ಬೆರಗಾದರು,

ಒಂದು ಪತ್ರ

ರಾಮಣ್ಣ, ಎಸ್. ನೆರಕಿ
ಗ್ರಂಥಪಾಲರು
ಕುಂದರಗಿ
ತಾ – ಬೀಳಗಿ, ಜಿ - ಬಿಜಾಪುರ

ಪೂಜ್ಯರೇ,

ತಾವು ಗೊಡ್ಡು ಸಂಪ್ರದಾಯದಿಂದೊಡಗೂಡಿದ ಪುರೋಹಿತಶಾಹಿಗೆ ಸೆಡ್ಡು ಹೊಡೆದು ನಿಂತಿರುವುದು ನಮಗೆ ಹೆಮ್ಮೆಯ ವಿಷಯ. ವಿಶ್ವಗುರು ಬಸವಣ್ಣ ನಮಗೆ ಆದರ್ಶವಾದರೆ ನೀವು ನಮಗೆ ಸ್ಫೂರ್ತಿಯ ಸೆಲೆ. ಪರಶಿವನ ಪ್ರತಿಸೃಷ್ಟಿ ಬಸವಣ್ಣ. ಈ ಸಮಾಜ ಸುಧಾರಣೆ ಮಾಡುವುದು ಸುಲಭವಲ್ಲ, ಈ ನಮ್ಮ ಜನಾಂಗಕ್ಕೆ ತಮ್ಮಂತಹ ಪ್ರಗತಿಪರ ವಿಚಾರಧಾರೆಯುವರು ಹೆಚ್ಚಾಗಿ ಆಗಿ ಬಂದಿಲ್ಲ. ಇವರಿಗೆ ಹೊಕ್ಕಳಿನಿಂದ ಹಾವು ತೆಗೆಯುವವರು, ಪೆಟ್ರೋಲ್ ಇಲ್ಲದೇ ಕೇವಲ ಮಾತಿನಿಂದ ಗಾಡಿ ಓಡಿಸುವವರು ಬಹಳ ಮೆಚ್ಚಿಕೆಯಾಗಿದ್ದಾರೆ. ಇವರ ಮೂಢತನಕ್ಕೆ ಯಾರೇನು ಮಾಡುವದು? ತಾವು ದಯವಿಟ್ಟು ಶ್ರೀಮಂತರ ಕೈಗೊಂಬೆಯಾಗಬೇಡಿರಿ. ಪ್ರಗತಿ ನಿಧಾನವಾಗಿ ಆದರೂ ಅಡ್ಡಿ ಇಲ್ಲ, ನಿಮ್ಮ ಸಾಹಿತ್ಯದಿಂದ ನಾವು ಪ್ರಭಾವಿತರಾಗಿದ್ದೇವೆ. ನಿಮಗೆ ನಮ್ಮ ಬೆಂಬಲವಿದೆ. ನೀವು ಪ್ರತಿಯೊಂದು ವಿಷಯವನ್ನೂ ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ನಿಲ್ಲಿಸಿದ್ದೀರಿ. ನಿಮಗೆ ಉತ್ತಮ ಭವಿಷ್ಯವಿದೆ. ಯಾವುದೇ ಪ್ರಸಂಗದಲ್ಲಿ ನೀವು ಹಿಂಜರಿಯದಿರಿ. ಮೊದಲು ನಿಮ್ಮ ಬಗ್ಗೆ ಕೆಲವರು ನಮಗೆ ತಪ್ಪು ಅಭಿಪ್ರಾಯ ಕೊಟ್ಟಿದ್ದರು. ನಂತರ ತಿಕ್ಕದಂಗ ಬಂಗಾರ ಹೊಳೆಯಲಿಕ್ಕೆ ಹತ್ತಿತು,

– ರಾಮಣ್ಣ ನೆರಕಿ

ದಾಸೋಹ ನಿಧಿಗೆ 1111-00 ರೂ. ಸಲ್ಲಿಸಿದವರು

(ಜನವರಿ-ಫೆಬ್ರವರಿ 1992 ರಿಂದ ಮುಂದುವರಿದುದು)

ಕ್ರಮ ಸಂಖ್ಯೆ	ಹೆಸರು–ಊರು	
	ಶರಣರುಗಳಾದ	
890	ಬಿ. ಎಸ್. ಪಾಟೀಲ, ಬೆಂಗಳೂರು	
891	ಎನ್. ರಾಜೇಶ್ವರಿ, ಬೆಂಗಳೂರು	
892	ಮಲ್ಲಿಕಾರ್ಜುನ ಉಳ್ಳಿಗೇರಿ, ಬೆಂಗಳೂರು	
893	ಶಂಕರಪ್ಪ, ಬೆಂಗಳೂರು	
894	ಓಳ್ಳಮ್ಮ ಜಿ. ಎಂ. ನಂದೀಶಪ್ಪ, ಬೆಂಗಳೂರು	
895	ಸದಾಶಿವಪ್ಪ-ಪ್ರಭಯ್ಯ, ಬೆಂಗಳೂರು	
896	ಹೆಚ್. ಎಸ್, ಗಂಗಲಕ್ಷ್ಮಮ್ಮ ಕೃಷ್ಣಪ್ಪ, ಬೆಂಗಳೂರು	
897	ಮಲ್ಲಿನಾಥ ಮಾಳಜಿ, ಬೆಂಗಳೂರು	
898	ಲೀಲಾವತಿ ಶಿವರುದ್ರೇಗೌಡರು, ಬೆಂಗಳೂರು	
899	ಟಿ. ಎಂ. ಮಂಜುನಾಥ, ತಿಪಟೂರು	
900	ಸಿ. ಎಸ್. ಕಾಂತರಾಜು, ತಿಪಟೂರು	
901	ಪಾರ್ವತಿ ಸುನಂದಮೂರ್ತಿ. ಬೆಂಗಳೂರು	
902	ಸಿ. ವಿರೂಪಾಕ್ಷಯ್ಯ, ಬೆಂಗಳೂರು	
903	ವಿ. ಶ್ರೀಕಂಠಕುಮಾರ್. ಬೆಂಗಳೂರು	
904	ಎ. ನಂಜುಂಡಪ್ಪ, ಬೆಂಗಳೂರು	
905	ಬಿ. ಎಸ್. ರುದ್ರಪ್ಪ, ಬಿದರೆ	
906	ಶ್ರೀಶೈಲಪ್ಪ ಈಶ್ವರಪ್ಪ ಶೆಟ್ಟರು, ಹುಬ್ಬಳ್ಳಿ	
907	ಕಲ್ಲಿನಾಥ ಚನ್ನಪ್ಪ ಕೊಂಡಗುಳಿ, ಭೈರೀದೇವರ ಕೊಪ್ಪ	
908	ಎಲ್ಲಮ್ಮ ಸುಣಗಾರ	ಹುಬ್ಬಳ್ಳಿ
909	ಫಕೀರಪ್ಪ ನಿಸ್ಸೀಮಪ್ಪ ಹುನಗುಂದ	,,
910	ಸಿದ್ಧಪ್ಪ ಮುದುಕಪ್ಪ ಅಂಗಡಿ	,,
911	ಲಕ್ಷ್ಮೀದೇವಿ ಎಸ್. ಶಿರೋಳ	,,
912	ಶಿವಪುತ್ರಪ್ಪ ಶಂಕರೆಪ್ಪ ಹೊಸಮನಿ	,,
913	ಬಸವಂತವ್ವ ಹನುಮಂತಪ್ಪ, ಬಳ್ಳಾರಿ	
914	ಹೆಚ್. ಸಿದ್ಧಲಿಂಗಪ್ಪ	,,
915	ಲಿಂಗರಾಜ ಶಿವಪ್ಪ ಇಂಗಳಳ್ಳಿ	,,
916	ಬಸವರಾಜ ಈಶ್ವರಪ್ಪ ಮುನವಳ್ಳಿ	,,
917	ಯಲ್ಲಪ್ಪ ರಾಮಚಂದ್ರ ಸಾ ಪೂಜಾರಿ	,,
918	ಗುರುರಾಜ ಶ್ರೀಶೈಲಪ್ಪ ಸೋಳಸಿ	,,
919	ಶಿವಪ್ಪ. ಕೆ, ಪಾಗದ.	,,
920	ವೀರವ್ವ ಬಸವಣ್ಣೆಪ್ಪ ಮೆಣಸಿನಕಾಯಿ	,,
921	ಹೆಚ್. ಶಶಿಕಲಾ ಚನ್ನಬಸಪ್ಪ	,,

Digitalized by e-Sahithya Documentation Forum
Sponsored by Sarayu Foundation Trust

922 ಕಾಡಯ್ಯ ಗುರುಸಿದ್ಧಯ್ಯ ಹಿರೇಮಠ ಹುಬ್ಬಳ್ಳಿ
923 ಸುಶೀಲಮ್ಮ ಬಿ. ಬಸವರಾಜಪ್ಪ ದೇವಲತ್ತಿ "
924 ಚಂದ್ರಶೇಖರಪ್ಪ ಜಿ. ಲಕ್ಕುಂಡಿ "
925 ಬಡಪ್ಪ ಸಂಗಪ್ಪ ಕಿಲಗೇರಿ ಹಿರೇಹೊನ್ನಳ್ಳಿ "
926 ಮಾರುತಿ ಎಲೆಕ್ಟ್ರಿಕ್ ಕಂಪನಿ "
927 ವಿರುಪಾಕ್ಷಪ್ಪ ನೂರೊಂದಪ್ಪ ಚಪ್ಪಳಗಾವಿ "
928 ಎಸ್.ಸಿ, ಶೆಟ್ಟರ್ ಮತ್ತು ಮಕ್ಕಳು (5000 ರೂ) "
929 ಮಲ್ಲಿಕಾರ್ಜುನಪ್ಪ ಮಹಾಲಿಂಗಪ್ಪ ಗುಡ್ಡದ "
930 ಮಹಾದೇವಪ್ಪ ಬಸವಣ್ಣೆಪ್ಪ ಲಾಳಸಂಗಿ "
931 ಬಸವಣ್ಣೆಯ್ಯ ಮಡಿವಾಳಯ್ಯ ಹಿರೇಮಠ "
932 ಬಿ. ಎನ್. ಅಂಗಡಿ, ಹೊಸೂರು "
933 ಫಕೀರಪ್ಪ ಬಸಪ್ಪ ಕಲ್ಯಾಣಶೆಟ್ಟರ "
934 ಅಕ್ಕಮಹಾದೇವಿ ಆರ್. ಹೆಚ್, ತೋಳನವರು "
935 ಬಸವರಾಜ ರುದ್ರಪ್ಪ ಯಡವಣ್ಣವರ "
936 ಶರಣಮ್ಮ ಚನ್ನಮಲ್ಲಪ್ಪ ಎಲ್ಲಟ್ಟಿ "
937 ಆರ್. ಬಿ. ಪಾಟೀಲ, ಹತ್ತರಗಿ "
938 ಬಸವರಾಜ ಎಂ. ತಡಸಿ "
939 ಪ್ರೊ. ನಿರ್ಮಲಾ ಪಟ್ಟಣಶೆಟ್ಟಿ "
940 ಬಸೆಟ್ಟೆಪ್ಪ ರುದ್ರಪ್ಪ ಕಾಡಪ್ಪನವರ "
941 ದ್ಯಾಮಪ್ಪ ಮಲ್ಲೇಶಪ್ಪ ಬಡಿಗೇರ "
942 ಚನ್ನಪ್ಪ ಸೋಮಪ್ಪ ಹಡಗಲಿ "
943 ಚನ್ನಬಸವನಗೌಡ ಲಿಂಗನಗೌಡ ಪಾಟೀಲ "
944 ಶಿವಮೂರ್ತೆಪ್ಪ ಪರಪ್ಪ ಕವಳಿ "
945 ಚನ್ನಯ್ಯ ವೀರಯ್ಯ ಸಾಲೀಮಠ "
946 ವಿ. ಬಿ. ಬೂದಪ್ಪನವರ "
947 ಗುಪ್ತ ಕಾಣಿಕೆ "
948 ಗುರುಸಿದ್ಧಪ್ಪ ಬಸಪ್ಪ ಮೆಣಸಿನಕಾಯಿ
949 ಗಂಗಾಧರ ಸಣ್ಣತಮ್ಮಪ್ಪ ದೊಡ್ಡಮನಿ "
950 ಜಿ. ವಿ. ಸವಣೂರು "
951 ಡಾ॥ ಆನಂದ ವಿ. ಮೆಡ್ಲೇರಿ "
"

952 ಶಿವಲಿಂಗಪ್ಪ ಮ್ಯಾಗೇರಿ ಹುಬ್ಬಳ್ಳಿ
953 ವೀರಭದ್ರಪ್ಪ ಗುರಪ್ಪ ಕುಂಬಾರ "
954 ಪ್ರಭುಸಂಗಪ್ಪ ಅಂಗಡಿ "
955 ಪಿ. ಜಿ. ಡಂಬಳ "
956 ಅನ್ನದಾನಪ್ಪ ಗುರುಪಾದಪ್ಪ ಯಳಮಲಿ "
957 ಪರಪ್ಪ ಚನ್ನಮಲ್ಲಪ್ಪ ಮಟ್ಟಿ "
958 ಬಸಪ್ಪ ಅಳ್ಳಪ್ಪ ಕೋಳಿವಾಡ "
959 ಮುರುಗೆಯ್ಯ ಗುರುಪಾದಯ್ಯ ಸಾಲೀಮಠ "
960 ಶ್ಯಾಮಲಾ ಗಿಲಗಂಚಿ "
961 ಜಿ. ಹೆಚ್. ಪಾಟೀಲ "
962 ಅನಂತ್ ಗಿಫ್ಟ್ ಎಂಟರ್ ಪ್ರೈಸಸ್ "
963 ಈಶ್ವರಪ್ಪ ಗುರುಪಾದಪ್ಪ ಹೊಂಡಣ್ಣನವರ್ "
964 ಶಾಂತಮ್ಮ ವೀರಭದ್ರಯ್ಯ ಪಂಚಾಂಗಮಠ "
965 ಎ. ಎಸ್. ಸೂರ್ಯಕಾಂತ, "
966 ಕುಮಾರಿ ರೇವತಿ ಚನ್ನಪ್ಪ ಜಯರಾಮ "
967 ಶಿವಪ್ಪ ಗುರುಸಿದ್ಧಪ್ಪ ಬೆಣಗಿ "
968 ವೀರಭದ್ರಪ್ಪ ಬಸಪ್ಪ ನಂದಿ "
969 ಅದೃಶ್ಯಪ್ಪ ಗುರಪ್ಪ, ಬೆಳಗಾಂವಿ
970 ಬಸವಂತಪ್ಪ ದ್ಯಾಮಪ್ಪ ಕೊಪ್ಪದ "
971 ಯುವರಾಜ ಪುಟ್ಟಸ್ವಾಮಿಗೌಡ ಕೊಗೋಡ ಹೊಸಗಬ್ಬೂರು
972 ಪ್ರಕಾಶ ಮಡಿವಾಳಯ್ಯ ಸಾಂಬ್ರಾಣಿ ಹುಬ್ಬಳ್ಳಿ
973 ವೀರಭದ್ರಪ್ಪ ಬ. ಪಾಟೀಲ "
974 ಹು–ಧಾ ಮಹಾನಗರ ಸಭೆ ಅಧಿಕಾರಿ ವರ್ಗದಲ್ಲಿ ಸಂಗ್ರಹಣೆ "
975 ಎಸ್. ಎಸ್. ಶೆಟ್ಟರ್ "
976 ವೀರನಗೌಡ ಗುರನಗೌಡ ಪಾಟೀಲ "
977 ಪಾಲ್ ವಿಲಿಯಂಮ್ಸ್ ಸುಮಂತಕೋಟೆ "
978 ಗೌವರ್ನಮೆಂಟ್ ಎಂಪ್ಲಾಯೀಸ್ ಅಸೋಸಿಯೇಷನ್, ಹುಬ್ಬಳ್ಳಿ
979 ವನಜಾಕ್ಷಮ್ಮ ನಂಜುಂಡಯ್ಯ. ಬೆಂಗಳೂರು
980 ಸಿ. ಎಂ. ಚಂದ್ರಶೇಖರ್. ಚಿಕ್ಕಬಳ್ಳಾಪುರ
981 ಸಿ. ಅಣ್ಣಯ್ಯಪ್ಪ, ಕೆ.ಜಿ.ಎಫ್.

Digitalized by e-Sahithya Documentation Forum
Sponsored by Sarayu Foundation Trust

ಧರ್ಮಪ್ರಚಾರಕಾ ನಿಧಿ ಮತ್ತು ಅಭಿನಂದನ ಸಮಾರಂಭ ನಿರ್ವಹಣೆಗೆ ಕೊಟ್ಟವರು

ಶರಣರುಗಳಾದ ;

1,	ಜಿ. ಜಿ. ದೊಡ್ಡವಾಡ, ಧಾರವಾಡ [ಪೂಜ್ಯ ಗುರುಗಳ ಅಭಿನಂದನ ಸಮಾರಂಭದಲ್ಲಿ]	10001	00
2.	ಟಿ.ಎಂ. ಮಗದುಮ್,ಅಧ್ಯಕ್ಷರು,ಅ.ಭಾ.ವೀ.ಮ.ಬೆಂಗಳೂರು	2555	00
3,	ಶಿವಪುತ್ರಪ್ಪ ಶಂಕರಪ್ಪ ಹೊಸಮನಿ, ಹುಬ್ಬಳ್ಳಿ	2001	00
4.	ಮಲ್ಲಿಕಾರ್ಜುನ ಚನ್ನಬಸವಯ್ಯ ಗುರುಸ್ಥಳಮಠ, ಧಾರವಾಡ (ಕಾರ್ಯಕ್ರಮ ನಿರ್ವಹಣೆಗೆ)	1001	00
5.	ಧರ್ಮಪ್ರಚಾರ ನಿಧಿಗೆ	1001	00
6.	ಶಕುಂತಲಾ ಎಸ್. ಪುಟ್ಟಸಿದ್ಧಪ್ಪ. ಬೆಂಗಳೂರು	1001	00
7.	ನಾಗರತ್ನಮ್ಮ ಕೆ, ಆರ್, ಸೋಮಶೇಖರ್, ಬೆಂಗಳೂರು	1001	00
8,	ಸಾಹುಕಾರ್ ವೀರಣ್ಣ, ಮಟಮಾರಿ	1001	00
9.	ಪೊನ್ನಮ್ಮ ಚಂಗಪ್ಪ ಬೆಂಗಳೂರು	1001	00
10.	ಎಲ್. ಗುರುಸ್ವಾಮಿ. ಬೆಂಗಳೂರು	1001	00
11,	ನಿರ್ಮಲಾ ರಾಜಶೇಖರ. ಬೆಂಗಳೂರು	501	00
12.	ಜಯಶ್ರೀ ಶಿವಪುರ, ಹೊಂಬರಡಿ (ಪ್ರಸಾದ ಬಟ್ಟಲು)	501	00
13.	ಡಾ॥ ಬಸವರಾಜ ಆಲೂರು, ಗದಗ	501	00
14.	ಗೌರಮ್ಮ ಮಾದಪ್ಪ, ಬೆಂಗಳೂರು	1001	00
15,	ಮಹಾರಾಷ್ಟ್ರ ಲಿಂಗಾಯತ ಎಜುಕೇಷನ್ ಸೊಸೈಟಿ, ಬಾಂಬೆ	601	00

* ಈಗಾಗಲೇ ದಾನಿಗಳ ಯಾದಿ ದೊಡ್ಡದಾಗಿರುವುದರಿಂದ ಪೂಜಾ ನಿಧಿಯ ಯಾದಿ ಪ್ರಕಟಿಸಿಲ್ಲ,

* ಶರಣ ಮೇಳಕ್ಕೆ 501 ರೂ.ಗಳಿಂದ ಮೇಲೆ ದೇಣಿಗೆ ಕೊಟ್ಟವರ ಹೆಸರು ಮುಂದಿನ ತಿಂಗಳ ಕಲ್ಯಾಣ ಕಿರಣದಲ್ಲಿ ಪ್ರಕಟಿಸಲಾಗುವುದು.

* ಶರಣ ಮೇಳ ಸಮಯದಲ್ಲಿ ಒತ್ತಡ ಬಹಳವಿರುತ್ತಿದ್ದು, ಸದ್ಭಕ್ತರು ವೇದಿಕೆಯ ಮೇಲಿರುವಾಗ, ಕೌಂಟರಿನಲ್ಲಿ ಬೇರೆ ಕೆಲಸದಲ್ಲಿ ಮಗ್ನವಾಗಿರುವಾಗ ಕಾಣಿಕೆ ಕೊಡುವುದುಂಟು. ಆದ್ದರಿಂದ ಅವರ ದೇಣಿಗೆ ಮುಟ್ಟಿದ ಬಗ್ಗೆ ಖಚಿತ ಪಡಿಸಲು ಈ ಯಾದಿಯನ್ನು ಪ್ರಕಟಿಸಲಾಗುವುದು. ಗಮನಿಸಿ, ತಮ್ಮ ಹೆಸರು ಮುದ್ರಣಗೊಂಡಿಲ್ಲದಿದ್ದರೆ ಪತ್ರ ಬರೆದು ನಮ್ಮ ಗಮನಕ್ಕೆ ತರಬೇಕು.

ವಿಶ್ವಗುರು, ಮಂತ್ರಪುರುಷ ಬಸವಣ್ಣನವರು ಈ ಎಲ್ಲ ಶರಣ ಬಂಧುಗಳಿಗೆ ಆಯುರಾರೋಗ್ಯ ಭಾಗ್ಯ ಸಕಲ ಸಂಪದವನ್ನು ಕೊಡಲೆಂದು ಹಾರೈಸುತ್ತೇವೆ.

—ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ

ಕಲ್ಯಾಣ ಕಿರಣ ಮಾಸ ಪತ್ರಿಕೆಗೆ 300 ರೂ. ಕೊಟ್ಟು ಆಜೀವ ಸದಸ್ಯರಾದವರ ಯಾದಿ

ಚಂದಾ ಸಂಖ್ಯೆ	ಹೆಸರು	ಊರು
	ಶರಣರುಗಳಾದ	
3623	ಈಶ್ವರಪ್ಪ ಬಸಪ್ಪ ಬೊರಕನವರ	ಬೈಲಹೊಂಗಲ
3624	ಕುರುಬರ ಹುಲಿಗೆಪ್ಪ	ಮಟಮಾರಿ
3625	ಬಿ. ಎಸ್. ಜಯಚಂದ್ರ	ಮಲ್ಲೇಶ್ವರಂ
3626	ಮಹಾಂತಪ್ಪ ಬಸವಣ್ಣೆಪ್ಪ ನಂದೂರು	ಪಟ್ಟಣ (ಗುಲಬರ್ಗ ಜಿಲ್ಲೆ)
3627	ಸೂಗಣ್ಣ ತಂದೆ ಸಿದ್ಧಣ್ಣ ಎಲಿಗಟ್ಟಿ	ಕಲಬುರ್ಗಿ
3628	ಕಮಲಮ್ಮ ರವೀಂದ್ರ ಶಾಬಾದಿ	ಬ್ರಹ್ಮಪುರ
3629	ಸಿದ್ರಾಮಪ್ಪ ಬಾಲಪ್ಪಗೋಳ	ಗುಲಬರ್ಗ
3630	ಶಿವಾನಂದ ಭದ್ರಶೆಟ್ಟಿ,	„
3631	ಚನ್ನಬಸಯ್ಯ ಸಿ. ಎನ್. ಮಠ್	ಬ್ರಹ್ಮಪುರ
3632	ಬಸವನಗೌಡ ಶಿವನಗೌಡ ಪಾಟೀಲ	ಗುಲಬರ್ಗ
3633	ಬಸವರಾಜ ಬಂಡೆಪ್ಪ ಕಲಬುರ್ಗಿ	ಜಮಗಾ (ಬಿ)
3634	ಸೋ. ದಾ. ವಿರುಪಾಕ್ಷಗೌಡ	ಅಮರಾವತಿ
3635	ವಿಶ್ವನಾಥ ಕಾಮಶೆಟ್ಟಿ	ಗುಲಬರ್ಗ
3636	ಪ್ರಭುದೇವ ಶಿವಶರಣಪ್ಪ ಕಲಬುರ್ಗಿ	ಫರಹತಾಬಾದ್
3637	ಗಂಗಾಂಬಿಕೆ ವೀರಭದ್ರಪ್ಪ ಪಾರಶೆಟ್ಟಿ	ಬಸವೇಶ್ವರನಗರ
3638	ಶಂಕರಪ್ಪ ಕಲ್ಲಪ್ಪ ಪಡಶೆಟ್ಟಿ	ಗೊಬ್ಬೂರ (ಬಿ)
3639	ದೇವೇಂದ್ರಪ್ಪ ಮತ್ತು ಕಂಪನಿ	ಗುಲಬರ್ಗ
3640	ತುಕಾರಾಮ ಕಲ್ಲಪ್ಪಾ ಭಜಂಕಾರ್ಶಿ	ಬ್ರಹ್ಮಪುರ
3641	ದೇವೇಂದ್ರಪ್ಪ ಭೀಮ ಶಾ. ಬನ್ನೂರ	ಬ್ರಹ್ಮಪುರ
3642	ಡಾ॥ ಎ. ಎಸ್. ಧಾರವಾಡ	ಗುಲ್ಬರ್ಗ
3643	ನಾಗಣ್ಣ ಬುಕ್ಕಿಷ್ಟಗಾರ	ಶಹಾಪುರ

Digitalized by e-Sahithya Documentation Forum
Sponsored by Sarayu Foundation Trust

3644	ಎಸ್. ಸಿ. ನಿಗ್ಗುಡಗಿ	ಗುಲಬರ್ಗ
3645	ಶಿವಮೂರ್ತೆಮ್ಮ ಬಿ. ಪಾಟೀಲ	ಮುಕ್ತಂಪುರ
3646	ಮಲ್ಲಿನಾಥ ರೇವೂರೇ,	ಗುಲಬರ್ಗ
3647	ಸಂಗಪ್ಪ ಎಂ, ದಾಬಶೆಟ್ಟಿ	ವಿಠಲನಗರ
3648	ಮಹಾಲಿಂಗಪ್ಪ ಬಿರಾದಾರ ಸಿರಗಾಪುರ್	ಗುಲುಬರ್ಗ
3649	ಶಾಂತಕುಮಾರ ಜಟ್ಟೂರು	ಬಸವೇಶ್ವರನಗರ
3650	ಕಸ್ತೂರಿಬಾಯಿ ವೀರಣ್ಣ, ಬಿ. ರಾಯರಾವು	ಮಹಾವೀರ ನಗರ
3651	ಬಸವರಾಜ ಕೋಟನೂರು ಸರಾಫ	ಗುಲಬರ್ಗ
2652	ಸಂಗಣ್ಣ ಪಟ್ಟಣ	ಗಾಜಿಪುರ
3653	ಬಿ. ಚನ್ನಶೆಟ್ಟಿ	ಗುಲಬರ್ಗ
3654	ಶಿವಶರಣಯ್ಯ ಕಂತಿ	ಶರಣನಗರ
3655	ಸಿ. ವಿ. ಮಾಲಿ ಪಾಟೀಲ	ಗುಲಬರ್ಗ
3656	ವಿ. ಬಿ, ಕಿತ್ತೂರ್	ವಿವೇಕಾನಂದನಗರ (ಧಾರವಾಡ)
3657	ಸಿದ್ಧರಾಮಪ್ಪ ಹೊನ್ನಪ್ಪ ಕರಡಿ	ನಿರ್ಮಲನಗರ
3658	ಅಣ್ಣಾರಾವ್ ಗೌಡ	ಹೊಸ ದೆಹಲಿ
3659	ಗಂಗಮ್ಮ ನಾಗರೆಡ್ಡಿ ಸಾಹುಕಾರ್	ಕೊಯಿವಾರಂ
3660	ಉದಯ ವಿಠಲ	ಬ್ರಹ್ಮಪುರ
3661	ಮಡಿವಾಳಯ್ಯ ಸ್ವಾಮಿ ಅಟ್ಟೂರ	ಶರಣನಗರ
3662	ಡಾ॥ ಬಿ. ಕೆ. ಷಡಕ್ಷರಪ್ಪ	ಬಸವೇಶ್ವರನಗರ
3663	ಹೆಚ್. ಜಿ. ವೀರಭದ್ರನಾಯಕ್	ಹೀರಿಯಾವಳಿ (ಶಿವಮೊಗ್ಗ)
3664	ಶಾರದಬಾಯಿ ಆರ್. ಸರದೇಸಾಯಿ	ಧಾರವಾಡ
3665	ಹೆಚ್. ಮಹದೇವಪ್ಪ	ಹುಬ್ಬಳ್ಳಿ
3666	ಶ್ರೀಶ್ರೀಶ್ರೀ ಪರದೇಶಿಕೇಂದ್ರ ಮಹಾಸ್ವಾಮಿಜಿಯವರು	ರಂಗಾಪುರ
3667	ಕಲ್ಪತರು ವಿಜ್ಞಾನ ಕಾಲೇಜು	ತಿಪಟೂರು
3668	ಎಸ್. ಮಲ್ಲಿಕಾರ್ಜುನಯ್ಯ	ತುರುವಿಕೆರೆ
3669	ಶ್ರೀಮದ್ ರಂಭಾಪುರಿ ಸಿದ್ಧರಾಮ ದೇಶೀಕೇಂದ್ರ ಮಹಾಸ್ವಾಮಿಗಳು	ಆರಸೀಕೆರೆ
3670	ಜಯಣ್ಣ	"
3671	ಶ್ರೀ ಸಂಗಮೇಶ್ವರ ಸೇವಾ ಸಮಿತಿ	ಚೀಳೂರು
3672	ರಾಜಶೇಖರಪ್ಪ	ನಾಗೆರಘಟ್ಟ
3673	ಎ. ಎಸ್, ಮಲ್ಲಯ್ಯ	ತಿಪಟೂರು
3674	ಓಬೆಗೌಡ	ತಿಪಟೂರು
3673	ಎ, ಎಸ್, ಶಿವರುದ್ರಪ್ಪ	ವಿನಾಯಕನಗರ
3676	ಬಿ. ಬಸಣ್ಣ	ತಿಪಟೂರು
3677	ಟಿ. ಸಿ, ಉಮೇಶ್‌ಕುಮಾರ್	"
3678	ನಾಗಮ್ಮ	ಹಳೇ ಪಾಳ್ಯ
3679	ಶ್ರೀ ಅಕ್ಕಮಹಾದೇವಿ ಸಮಾಜ	ತಿಪಟೂರು
3680	ಟಿ. ಜೆ. ಗುರುಮೂರ್ತಿ	"
3681	ವಿಜಯಲಕ್ಷ್ಮಿ ಮಂಜುನಾಥ	"
3682	ಶ್ರೀ ಚಂದ್ರಶೇಖರ ಸ್ವಾಮಿಗಳು	ವಿಠಲಾಪುರ
3683	ವಿದ್ವಾನ್ ಆರ್. ಎಸ್. ಸದಾಶಿವಯ್ಯ	ತಿಪಟೂರು
3684	ಶಿವಮ್ಮ	"
3685	ಪಿ. ಚಿನ್ನಸ್ವಾಮಿ	"
3686	ಕೆ. ಎಂ. ಶಿವಸ್ವಾಮಿ	"
3687	ಲಿಂಗಪ್ಪ	"
3688	ಪಿ. ಮಹೇಶ ಬಿ. ಪುಟ್ಟಣ್ಣ	ಹಡಗೆರಹಳ್ಳಿ
3689	ಎಂ ನಂಜುಂಡಸ್ವಾಮಿ	ಶಾರದಾನಗರ
3690	ಪೂಜ್ಯ ಶ್ರೀ ಜಯಚಂದ್ರಶೇಖರ ಸ್ವಾಮಿಗಳು	ಜ್ಯೋತಿನಗರ
3691	ಕರಿಬಸಪ್ಪ ಮಹಾದೇವಪ್ಪ ಹುಬ್ಬಳ್ಳಿ	ಅಣ್ಣಿಗೇರಿ
3692	ಚಂದ್ರಶೇಖರ ಬಿ, ಪಾಟೀಲ	ನವಲಗುಂದ
3693	ಸಿ, ಎಫ್, ಹೊಂಬಳ	ಲಕ್ಕುಂಡಿ
3694	ಎಸ್. ಬಸವರಾಜ	ಗುಲಬರ್ಗ
3695	ಎಂ, ಟಿ, ಹತ್ತಿ	ನಾರಾಯಣಪುರ(ಯು,ಕೆ,ಪಿ.)
3696	ಅಯ್ಯಪ್ಪ ಡಂಬಳ	ಭೈರವಾಡಗಿ
3697	ನೀಲಮ್ಮ ವೀ, ಪಿ. ಪಾಟೀಲ	ನಾರಾಯಣಪುರ(ಯು.ಕೆ,ಪಿ)
3698	ಭ್ರಮರಾಂಬ ಕೆ. ಚೆನ್ನಪ್ಪಾ	"
3699	ವೈ, ಬಸಪ್ಪ	ನಾರಾಯಣಪುರ(ಯು,ಕೆ,ಪಿ)
3700	ಸಿ, ಎಸ್. ಬಿರಾದಾರ್	"
3701	ಎಸ್, ಜಿ, ದಶಬಲ	"
3702	ಎಂ. ಸಿ, ಬಿರಾದಾರ್	"
3703	ಬಿ, ಎಸ್, ಕುಂಬಾರ್	"
3704	ಕುಮಾರಪ್ಪ ಎನ್,	"

Digitalized by e-Sahithya Documentation Forum
Sponsored by Sarayu Foundation Trust

3705	ಸರಕಾರಿ ಪ್ರೌಢಶಾಲೆ	ನಾರಾಯಣಪುರ(ಯು.ಕೆ.ಪಿ.)
3706	ಅಮರಪ್ಪ ಗುಂಡಪ್ಪಾ ಉಪನಾಳ	”
3707	ಸಿದ್ಧಯ್ಯಸ್ವಾಮಿ ಮಡಿವಾಳರು	ಗಾಜಿಪುರ
3708	ಐ. ಪಿ. ನರಗುಂದ	ಗೋಕಾಕ
3709	ನಿರ್ಮಲಾ ಬಸವರಾಜ ಪಟ್ಟಣ ಶೆಟ್ಟಿ	ಘಟಪ್ರಭಾ
3710	ಬಾಬಾಸಾಹೇಬ್ ಎನ್. ಪಾಟೀಲ	ಗಡಹಿಂಗ್ಲಾಜ್
3711	ವೀರಶೈವ ಕೋ–ಆಪರೇಟಿವ್ ಬ್ಯಾಂಕ್	ಅಕ್ಕಿಪೇಟೆ
3712	ಬಸವಣ್ಣೆಪ್ಪ ಚನ್ನಪ್ಪಗೋಳ	ರಾಜಾಪುರ್
3713	ಸುಭಾಷ್‌ಚಂದ್ರ ಶರಣಪ್ಪ ಮಹಾಂತಗೋಳ	”
3714	ಬಿ. ಚಂದ್ರಕಾಂತ	ಇಂದಿರಾನಗರ
3715	ಪಿ. ಜಿ. ಸುಬ್ಬರಾಂ ಗುಪ್ತ	(ಮಹಂತ ಲೇಔಟ) ಬೆಂಗಳೂರು
3716	ಎನ್. ರಾಜೇಶ್ವರಿ	(ಬಿ.ಎಚ್.ಇ.ಎಲ್.) ಬೆಂಗಳೂರು
3717	ಎಸ್. ಮಾದಪ್ಪ	ಹಲಗೂರು
3718	ಲೀಲಾ	ಮೈಸೂರು
3719	ಟಿ. ಮಲ್ಲಪ್ಪ	ಹೊಳೆಹನಸವಾಡಿ
3720	ಶಿವಗಂಗಮ್ಮ ಟಿ. ಆರ್. ಬಸವರಾಜ್	ಬಸವನಗುಡಿ
3721	ನಿಂಗಮ್ಮ	ಬಳ್ಳಾರಿ
3722	ಡಾ॥ ದಯಾನಂದ ನೂಲಿ	ಘಟಪ್ರಭಾ
3723	ಜಿ. ಎಸ್. ಮದಲಿಯವರ	ಮತ್ತೀಕೆರೆ (ಜಾಲಹಳ್ಳಿ)
3724	ವಿ. ಬಿ. ಭೀಮಶಯನ	ಸಿರಿಗುಪ್ಪ
3725	ಶಿವಪ್ಪ ಮಲ್ಲಪ್ಪ ಕಪ್ಪರದ	ಗದಗ
3726	ಎನ್. ಸಿ. ಮಲ್ಲೇಶ	ಬೆಂಗಳೂರು
3727	ಜಿ. ಪಿ. ಮಲ್ಲಿಕಾರ್ಜುನಪ್ಪ	ರಂಗಸಮುದ್ರ
3728	ಬಿ. ಪಿ. ಬಸವನಗೌಡ	ಬಂದುರು (ಆ.ಪ್ರ)
3729	ಜಿ. ಬಿ. ಸರವಾಡ	ಭಾರತರತ್ನ ಇಂದಿರಾನಗರ (ಸೊಲ್ಲಾಪುರ)
3730	ಸುರೇಶ ಬಿ. ಮಸೂತಿ	ಹುಬ್ಬಳ್ಳಿ
3731	ಗುರುಬಾಯಿ ಶಿವಗೌಡ ಬಿರಾದಾರ ಪಾಟೀಲ	ವಿಹಠುನಗರ
3732	ಬಿ. ಎ. ಕೋಳಿವಾಡ	ಉದಯನಗರ
3733	ವಿರುಪಾಕ್ಷಪ್ಪ ಬಸಪ್ಪ ಬೂದಪ್ಪನವರ	ಹುಬ್ಬಳ್ಳಿ
3734	ಕೆ. ಸಿ. ಕೊಂಡಗುಳಿ	”
3735	ಪರಪ್ಪ ರಾಚಪ್ಪ ಧರಣಿ	”

3736	ಶಿವಪ್ಪ ಗೊಳಪ್ಪ ಹಂಚಿನಾಳ	ನವನಗರ
3737	ಎಚ್. ಸಿದ್ಧಲಿಂಗಪ್ಪಾ	ಹುಬ್ಬಳ್ಳಿ
3738	ಅಕ್ಕಮಹಾದೇವಿ ಬಸವಲಿಂಗಪ್ಪ ಮಾಮಲೆ ಪಟ್ಟಣ ಶಟ್ರು	ಬಂಕಾಪುರ
3739	ಡಾ॥ ಆನಂದ ವಿ. ಮೆಣ್ಲೆರಿ	ಕೇಶ್ವಾಪುರ
3740	ಈಶ್ವರ ವಿರುಪಾಕ್ಷಪ್ಪ ವಂಗಿ	ಅಧ್ಯಾಪಕನಗರ
3741	ಸಿ. ಎಂ. ಚಂದ್ರಶೇಖರ್	ಚಿಕ್ಕಬಳ್ಳಾಪುರ
3742	ಸಿ. ಅಣ್ಣಯ್ಯಪ್ಪ	ಕೆ. ಜಿ. ಎಫ್.
3743	ಸದಾಶಿವಪ್ಪ ಪರಪ್ಪ ಶೆಟ್ಟರು	ಕಮಡೊಳ್ಳಿ
3744	ಮಲ್ಲಪ್ಪ ಪುಲಾರಿ	ಸಂಗಮೇಶನಗರ
3745	ಬಸವಲಿಂಗಪ್ಪ ಶಂಕರಪ್ಪ ಪಡಗಾನೂರ	ಸಿಂಧಗಿ
3746	ನರಸಪ್ಪ ಬಿ. ಮಿಠಾಯಿಗಾರ	ಗುಲಬರ್ಗ
3747	ಡಾ॥ ಜಿ. ಎಸ್. ತಾನವಡೆ	ಬಾದಾಮಿನಗರ
3748	ಮೂರುಸಾವಿರಪ್ಪ ಸಿದ್ಧಲಿಂಗಪ್ಪ ಈಚಗೇರಿ	ಹುಬ್ಬಳ್ಳಿ
3749	ಲಿಂಗರಾಜ ಶಿವಪ್ಪ ಇಂಗಳಹಳ್ಳಿ	”
3750	ಯು. ನಾಗಪ್ಪ	ದೇವಿ ನಗರ
3751	ಸದಾಶಿವ ಗಂಗಪ್ಪ ಬಾಳೆಕಾಯಿ	ಫರಹತಾಬಾದ್
3752	ರಾಷ್ಟ್ರೀಯ ಬಸವ ದಳ	ಲಾಡಗೇರಿ
3753	ಶಶಿಕಲಾ ನಾಗರಾಜ	(ಚಳ್ಳಕೆರೆ) ಗಾಂಧಿನಗರ
3754	ನಾಡಿಗ ಶಿವಾನಂದ	(ಕಾಟನ್‌ಪೇಟೆ) ಬೆಂಗಳೂರು
3755	ಸಿ. ಆರ್. ಅಂಬಿಕಾ	ಬಸವನಗುಡಿ
3756	ಎಸ್. ಕೆ. ನಾಯಕನೂರು	ಸಾರಸ್ವತಪುರ
3757	ಆರ್. ಸಿ. ಅಂಗಡಿ	ಪುಣೆ
3758	ಪ್ರಮೀಳಾತಾಯಿ ಲಿಗಾಡೆ	ಮಂಗಳವಾರ ಪೇಟೆ
3759	ಮಹಾಂತೇಶ ಲಕ್ಷ್ಮಣ ಇಗಳೆ	ಅಥಣಿ
3760	ಎಸ್. ಎಸ್. ಮಶಲ್	ಸೊಲ್ಲಾಪುರ
3761	ಮಡಿವಾಳಪ್ಪ ಜಿ. ಲೋಣಿ	ಮೊರಾರ್ಜಿಪೇಟ್
3762	ಡಾ॥ ವಿ. ಎನ್. ಕಾಡಾದಿ	ಮಂಗಳವಾರ ಪೇಟೆ
3763	ಲೀಲಾವತಿ ರಮೇಶ್ ಮಡಕಿ	ಸೊಲ್ಲಾಪುರ
3764	ಬಸವೇಶ್ವರ ವಿಜ್ಞಾನ, ವಾಣಿಜ್ಯ ಮತ್ತು ಕಲಾ ಕಾಲೇಜು	ಅಕ್ಕಲಕೋಟೆ
3765	ಬಸವರಾಜ್ ಕೆ. ಬಿರಜ್‌ದಾರ್	ಸಿರವಾಲ

Digitalized by e-Sahithya Documentation Forum
Sponsored by Sarayu Foundation Trust

3766 ಬಸವರಾಜ್ ಶರಣಪ್ಪ ತಾನವಡೆ ಸಿರವಾಲ
3767 ಜಗದೇವಿತಾಯಿ
3768 ಶ್ರೀ ನೀಲಕಂಠೇಶ್ವರ ಗನ್ನಿ ಮರ್ಚೆಂಟ್ ಗಂಗಾವತಿ
3769 ಬಸವ ಕಿರಣ. ಮಡಿವಾಳಪ್ಪ ಕೊಂಡಗುಳಿ ಕಗ್ಗೋಡು
3770 ಶಿವಶಂಕರ ಕೆ. ಆರ್. ಪುರಂ
3771 ಎಂ. ಮಲ್ಲೇಶಪ್ಪ ಮಾನ್ವಿ

(ಮುಂದುವರಿಯುವುದು)

ಬಿಜಾಪುರ ನಗರದಲ್ಲಿ ವಿಶ್ವಧರ್ಮ ಪ್ರವಚನ

ಬಸವ ಧರ್ಮದ ಮಹಾಜಗದ್ಗುರು ಪೀಠಾಧೀಶರು, ಅಪೂರ್ವ ವಾಗ್ಮಿಗಳು, ಪ್ರವಚನ ಪಿತಾಮಹರೂ ಆದ ಪೂಜ್ಯಶ್ರೀ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳವರ ವಿಶ್ವಧರ್ಮ ಪ್ರವಚನ ಕಾರ್ಯಕ್ರಮವು ಬಿಜಾಪುರ ನಗರದ ಶ್ರೀ ಸಿದ್ಧೇಶ್ವರ ಹೈಸ್ಕೂಲ್ ಮೈದಾನದಲ್ಲಿ ಅಮೋಘವಾಗಿ ದಿ. 30-3-1992 ರಂದು ಪ್ರಾರಂಭವಾಗಿ ದಿನದಿನಕ್ಕೂ ಅಸಂಖ್ಯಾತರನ್ನು ಆಕರ್ಷಿಸಿ ಬುಧವಾರ ದಿ. 27-5-1992 ರಂದು ಮಂಗಲಗೊಳ್ಳಲಿದೆ, ಮಂಗಲ ಸಮಾರಂಭಕ್ಕೆ ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. 59 ದಿವಸಗಳ ಕಾಲ ಅವ್ಯಾಹತವಾಗಿ ನಡೆದ ಈ ಪ್ರವಚನ ಕಾರ್ಯಕ್ರಮ ಅಮೋಘವಾದ ಪರಿಣಾಮವನ್ನು ಬೀರಿದ್ದು ; ರಾಷ್ಟ್ರೀಯ ಬಸವ ದಳದ ಬಿಜಾಪುರ ಘಟಕವು ಉದ್ಘಾಟಿಸಲ್ಪಟ್ಟಿದೆ.

ಕಲ್ಯಾಣ ಕಿರಣ ಪ್ರಕಟಣೆಯಲ್ಲಿ ವಿಳಂಬ

'ಬಸವ ಕಿರಣ'-ಪೀಠಾರೋಹಣ ವಿಶೇಷ ಸಂಚಿಕೆ ಜನವರಿ-ಫೆಬ್ರವರಿ ಸಂಚಿಕೆಯಾದಿ ಓದುಗರ ಕೈ ಸೇರಿದ ಮೇಲೆ ತೀರಾ ತಡವಾಗಿ ಮಾರ್ಚ್-ಏಪ್ರಿಲ್ ಸಂಚಿಕೆ ಮುದ್ರಣವಾಗುತ್ತಿರುವುದು ಮನಸ್ಸಿಗೆ ಬಹಳ ವ್ಯಥೆಯನ್ನುಂಟುಮಾಡಿದೆ. ಕೆಲಸಗಾರರ ಕೊರತೆಯಿಂದೇ ಮುದ್ರಣಾಲಯವು ನಿಂತುಹೋದುದರಿಂದ ಈ ಪರಿಸ್ಥಿತಿಯುಂಟಾಯಿತು, ಬೇರೆ ಮುದ್ರಣಾಲಯದಲ್ಲಿ ಮುದ್ರಿಸಿ ಕಳಿಸುವಲ್ಲಿ ವಿಳಂಬವಾಗಿದೆ. ಈ ಅನಿಯಮಿತತನ ಇನ್ನೂ ಸ್ವಲ್ಪಕಾಲ ಮುಂದುವರಿಯಲಿದೆ, ಓದುಗರು ಸಹಕರಿಸಬೇಕು.

ಬಹುಶಃ ಜೂನ್ ಮೊದಲವಾರದಲ್ಲಿ ಮುದ್ರಣಾಲಯ ಕೆಲಸವನ್ನು ಆರಂಭಿಸಬಹುದೆಂದು ನಂಬಿದ್ದೇವೆ,

—ಸೋದರಿ ಕಸ್ತೂರಿ

ಬೆಳ್ಳೈತ್ತಿನ ಮರೆಯಲ್ಲಿದ್ದು ಹುಲ್ಲೆಗಂಬ ಬಿಟ್ಟ ವೀರಶೈವ ಮಹಾಧಿವೇಶನ

85 ವರ್ಷದ ಒಂದು ಹುಲಿ (ಸ್ಥಾಪನೆ 1903 ಮೇ ತಿಂಗಳಲ್ಲಿ) ಅಖಿಲ ಭಾರತ ವೀರಶೈವ ಮಹಾಸಭೆ ಒಂದು ದೊಡ್ಡ ಗರ್ಜನೆಯನ್ನು 9 ವರ್ಷಗಳ ಮೇಲೆ ಮಾಡಿದೆ, (ಹಿಂದಿನ ಅಧಿವೇಶನ ನಡೆದುದು ಮೈಸೂರಲ್ಲಿ 1983ರಲ್ಲಿ) ಬೆಳಗಾಂವ ನಗರದಲ್ಲಿ ; 1992ರ ಮೇ 10, 11, 12 ರಂದು–21ನೆಯ ಮಹಾಧಿವೇಶನ ಮಾಡುವುದರ ಮೂಲಕ. ಇನ್ನು ಕೆಲವು ವರ್ಷ ಅದು ನಿಶ್ಚಿಂತವಾಗಿ ನಿದ್ರಿಸಬಹುದು, ಇನ್ನೊಂದು ಮಹಾಧಿವೇಶನ ಮಾಡಲು ಯಾವುದಾದರೂ 'ಊರಿನವರು ಅಣಿಯಾಗುವ ತನಕ. ಮಹಾಧಿವೇಶನದ ಬಗ್ಗೆ ದೀರ್ಘ ಸಿದ್ಧತೆಯೇ ನಡೆದಿತ್ತು ; ಸಮಾಜ ಸಂಘಟನೆ-ಸಂಸ್ಕರಣಕ್ಕಿಂತಲೂ ಕೆಲವರನ್ನು ವೈಭವೀಕರಿಸಲೆಂದೇ ಏರ್ಪಾಡಾದುದು ಎಂಬುದು ಗಾಳಿಸುದ್ದಿ. ಸತ್ಯವನ್ನು ಯಾರು ಬಲ್ಲರು, ಸಂಘಟಕರನ್ನು ಬಿಟ್ಟು ? !

ಕೇವಲ ಶ್ರೀಮಂತರು, ರಾಜಕಾರಣಿಗಳು, ಕೆಲವು ಮಠಾಧಿಪತಿಗಳ ಒಂದು ಹುರಿಯಾಗಿರುವ ವೀರಶೈವ ಮಹಾಸಭೆ ಸಂಘಟಕ ಶಕ್ತಿಯನ್ನು, ಸಕ್ರಿಯವಾಗಿ ಕೆಲಸ ಮಾಡುವ ಕಾರ್ಯಕರ್ತರನ್ನು ಹೊಂದಿಲ್ಲ. ಇದಕ್ಕೆ ಯಾವ ತಾತ್ತ್ವಿಕ ನೆಲೆಗಟ್ಟು ಇಲ್ಲದಿರುವುದರಿಂದ ಇದು ಲಂಗರ ಇಲ್ಲದ ಹಡಗಿನಂತೆ ಓಲಾಡುತ್ತಿರುತ್ತದೆ. ಅಧ್ಯಕ್ಷರು ಯಾವ ಇಸಂ [Ism] ಪ್ರತಿಪಾದಕರೋ ಅದರಂತೆ ದಾರಿ ಹಿಡಿಯುತ್ತದೆ. ಜನಸಾಮಾನ್ಯರ ಸಂಪರ್ಕವನ್ನು ಏರ್ಪಡಿಸಿಕೊಳ್ಳಲು ಯಾವ ಯೋಜನೆಯನ್ನೂ ಹಾಕದ ಈ ಮಹಾಸಭೆ ಫೀಲ್ಡ್ ವರ್ಕ್ ಮಾಡದೆ 8-10 ವರ್ಷಗಳಿಗೊಮ್ಮೆ ನಿದ್ರೆಯಿಂದೆದ್ದು ಗರ್ಜಿಸುತ್ತದೆ. ಆ ನಂತರ ಅದು ಅಲ್ಲೇ, ಸಮಾಜ ಇಲ್ಲೇ. ಸ್ವಾಮಿಗಳ, ರಾಜಕಾರಣಿಗಳ, ಶ್ರೀಮಂತರ ಒಂದು ವೈಭವಯುತ ಪ್ರದರ್ಶನವನ್ನು ನಡೆಸಿಬಿಟ್ಟರೆ ತನ್ನ ಕೆಲಸ ಮುಗಿಯಿತೆಂದು ಅದಕ್ಕೆ ಸಮಾಧಾನ.

ಪ್ರವಾಹದಿಂದ ಯಾರೂ ಎಂದೂ ಬೆಳೆ ತೆಗೆಯಲಾರರು. ಬೆಳೆ ತೆಗೆಯಲು ಜಿಟಜಿಟ ಮಳೆ ಬೇಕು. ಕ್ರೈಸ್ತ, ಮುಸ್ಲಿಂ, ಸಿಖ್ ಮುಂತಾದ ಧರ್ಮಗಳವರು ಕಾಲಮಾನವಿಡೀ ಧರ್ಮಾನುಯಾಯಿಗಳನ್ನು ಧರ್ಮಮಂದಿರಗಳ ಸಂಪರ್ಕದಲ್ಲಿ ಇರಿಸಿಕೊಂಡು ಜೀವಂತ ಸಮಾಜವನ್ನು ಕಟ್ಟಿದ್ದರೆ, ವೀರಶೈವ ಮಹಾಸಭೆ ಎಂದೂ ಜನಸಾಮಾನ್ಯರ ಬಳಿ ತಲುಪಿದ್ದೇ ಇಲ್ಲ ಮತ್ತು ಸಂಪರ್ಕವನ್ನು ಏರ್ಪಡಿಸಿಕೊಳ್ಳಲು ಯಾವ ಪ್ರಯತ್ನವನ್ನೂ ಮಾಡದು.

Digitalized by e-Sahithya Documentation Forum
Sponsored by Sarayu Foundation Trust

ಕ್ರೈಸ್ತರು ಧರ್ಮಸಭೆಗಳನ್ನು ನಡೆಸುತ್ತಾರೆ. ಜಿಲ್ಲಾ ಮಟ್ಟ, ಪ್ರಾಂತೀಯ ಮಟ್ಟ, ದಕ್ಷಿಣ ಭಾರತೀಯ, ಜಾಗತಿಕಮಟ್ಟ ಮುಂತಾಗಿ ಅವರ ಸಮಾಜ-ಸಂಸ್ಕೃತಿಗಳು ಎದುರಿಸುವ ಸಮಸ್ಯೆ ಕುರಿತು ಚಿಂತಿಸುತ್ತಾರೆ. ತಾತ್ತ್ವಿಕ ಸಂದೇಹಗಳ ಬಗ್ಗೆ, ಬದಲಾದ ನಂಬಿಕೆಗಳ ಬಗ್ಗೆ, ಸ್ವಧರ್ಮೀಯರನ್ನು ಆಕರ್ಷಿಸುವ ಬಗ್ಗೆ, ಪರಧರ್ಮೀಯರನ್ನು ಮತಾಂತರಿಸುವ ಬಗ್ಗೆ ರೂಪಿಸಬಹುದಾದ ಯೋಜದೆ, ತರಬೇಕಾದ ತಿದ್ದುಪಡಿ ಮುಂತಾಗಿ ಚಿಂತನೆ ಮಾಡುತ್ತಾರೆ. ನಂತರ ಬಿಷಪ್‌ಗಳು, ಪಾದ್ರಿಗಳು ಆದ ನಿರ್ಣಯಗಳನ್ನು ಕ್ರಮವಾಗಿ ಅನುಷ್ಠಾನಕ್ಕೆ ತರುತ್ತಾರೆ. ಸಮಸ್ಯೆಗಳನ್ನು ಗಂಭೀರವಾಗಿ ಅಧ್ಯಯನ ಮಾಡುತ್ತಾರೆ. ಆಚರಣೆ ಮಾಡಬೇಕಾದ ಸಂಗತಿಗಳ ಬಗ್ಗೆ ಕರೆಕೊಡುತ್ತಾರೆ.

ವೀರಶೈವ ಮಹಾಧಿವೇಶನದಲ್ಲಿ ಅಂತಹ ಪ್ರಾಯೋಗಿಕ, ಗಂಭೀರ ಚಿಂತನಶೀಲರು ಎಷ್ಟು ಮಂದಿ ಬಂದಿರುವರು ? ಧರ್ಮವನ್ನು ಎಂದೆಂದೂ ಪಾಲಿಸದವರು, ಧರ್ಮದ ಬಗ್ಗೆ ಎಂದೂ ಚಿಂತನೆ ಮಾಡದವರು, ಅಧ್ಯಯನ ಮಾಡದವರು, ವೇದಿಕೆಗೆ ಬಂದಾಗ ತಮ್ಮ ಜಾತಿಯ ನೆನಪಾಗಿ ಅಭಿಮಾನ ಉಕ್ಕುವವರು ಏನು ಹೇಳಬಲ್ಲರು ? ಮಹಾಸಭೆಯ ಸಂಘಟಕರಿಗೆ ಸಮಾಜ ಕಳಕಳಿಯುಳ್ಳವರು, ಚಿಂತನಶೀಲರು ಸುತರಾಂ ಬೇಕಾಗಿಲ್ಲ ; ಅವರ ಮುಖಸ್ತುತಿ ಮಾಡಿ ಓಲೈಸುವವರು, ಗೆದ್ದೆತ್ತಿನ ಬಾಲ ಹಿಡಿಯುವವರಷ್ಟೆ ಬೇಕು.

ಮಹಾಸಭಾಧ್ಯಕ್ಷರು ಕೊಡುವ ಸಂದೇಶ ಮುಂದಿನ ಅಧಿವೇಶನದವರೆಗೆ ಜನರು ಮಾಡಬೇಕಾದ ಕಾರ್ಯದ ನೀಲನಕ್ಷೆಯಂತಿರಬೇಕು. ಹೇಗೆ ಗೌವರ್ನರರು ಬಜೆಟ್ ಭಾಷಣ ಮಾಡಿದ ಮೇಲೆ ನಂತರ ಬೇರೆ ಬೇರೆ ಅಂಶಗಳನ್ನು ಕುರಿತು ವಿಧಾನಸಭೆಯಲ್ಲಿ ಸುದೀರ್ಘ ಚರ್ಚೆಯಾಗಿ, ನಿರ್ಣಯಗಳ ಮಂಡನೆಯಾಗುವುದೋ ಹಾಗೆ ನಿರ್ಣಯಗಳಾಗಿ ಜನರು ಅವನ್ನು ಕಾರ್ಯರೂಪಕ್ಕೆ ತರಲು ಸಿದ್ಧರಾಗಬೇಕು. ನಾವು ಹಗಲಿರುಳು, ದಿನದ 24 ಗಂಟೆಯೂ ಧರ್ಮ-ಸಮಾಜಗಳ ಬಗ್ಗೆ ಚಿಂತಿಸುತ್ತೇವೆ ; ಹೆಚ್ಚೇನು ಸಮಾಜದ ಬಗ್ಗೆ ತಲೆಕೆಡಿಸಿಕೊಳ್ಳುತ್ತೇವೆ. ಸಮಾಜ ಬಾಂಧವರು ಸೇರಿದಲ್ಲಿ ಈ ಆಲೋಚನೆಗಳನ್ನು ಸಭೆಯ ಮುಂದಿಡಬೇಕು ಎಂದು ವಿಚಾರ ಮಾಡಿರುತ್ತೇವೆ. ದ್ವೇಷ-ಮದ-ಮತ್ಸರಗಳ ತ್ರಿವೇಣಿ ಸಂಗಮವಾಗಿರುವ ಸಮಾವೇಶ ಸಂಘಟಕರಲ್ಲಿ ನಮ್ಮಂತಹವರು ಬೇಡ. ಕೆಲವರಿಗೆ ನಮ್ಮನ್ನು ಆಹ್ವಾನಿಸುವ ಸೌಜನ್ಯ ಅವರಿಗಿರದು. ನಾವು ಸತ್ಯವಾದಿಗಳು, ಸ್ಪಷ್ಟವಾದಿಗಳು, ಮತ್ತು ಸತ್ಯವನ್ನು ಅಷ್ಟೇ ನಿಖರವಾಗಿ, ತಾರ್ಕಿಕವಾಗಿ, ಆಧಾರ ಸಹಿತವಾಗಿ ಮಂಡಿಸುವವರು ಎಂಬ ಕಾರಣಕ್ಕಾಗಿಯೇ ನಮ್ಮನ್ನು ಅವರು ಆಹ್ವಾನಿಸುವುದಿಲ್ಲ.

ಹಾಗಾದರೆ 'ಪಂಚಾಚಾರ್ಯರೇ ಮತ ಸ್ಥಾಪಕರು' ಎಂದು ಪಂಚ ಪೀಠಾಧೀಶರು ಹೇಳಿಯೋ ಹೇಳುವರು ಎಂದು ಗೊತ್ತಿದ್ದೂ ಪಂಚ ಪೀಠಾಧೀಶರನ್ನು ಕರೆಸಿದ್ದೇಕೆ ? ಸ್ವಾಮಿಗಳವರಲ್ಲಿ ಪೂಜ್ಯರಾದ ಚಿತ್ರದುರ್ಗದ ಜಗದ್ಗುರುಗಳಾದ ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮಿಗಳು ಎಂತಹ ಧೈರ್ಯಶಾಲಿಗಳು ! ಸಮಾವೇಶವನ್ನು ಬಹಿಷ್ಕರಿಸಿದರು. ನಿಜಕ್ಕೂ ಅವರ ಈ ವಿವೇಕಯುತ ನಿರ್ಧಾರವನ್ನು ಮೆಚ್ಚಬೇಕು. ಇಳಕಲ್‌ದ ಶ್ರೀ ಮಹಾಂತ ಸ್ವಾಮೀಜಿಯವರು, ಬೇಲಿಮಠದ ಶ್ರೀ ಶಿವರುದ್ರ ಸ್ವಾಮಿಗಳು ಸ್ಪಷ್ಟವಾಗಿ ಮಹಾಧಿವೇಶನದ ಸಂಘಟಕರ ಧೋರಣೆಯನ್ನು ಖಂಡಿಸಿ; ಧರ್ಮಪಿತ ಬಸವಣ್ಣನವರೇ ಈ ಧರ್ಮದ ಆದ್ಯರು ಎಂಬುದನ್ನು ಸ್ಪಷ್ಟಪಡಿಸಿದರು. ಉಳಿದ ಸ್ವಾಮಿಗಳ ವಾಗ್ಮಿತ್ವ, ಕ್ರಾಂತಿಕಾರಿ ನಿಲುವು ಎಲ್ಲಿ ಹೋಗಿತ್ತೋ ?

ದಿವಾಂಕ 13–5–92ರಂದು ನಿರ್ಣಯಗಳನ್ನು ತೆಗೆದುಕೊಳ್ಳುವಾಗ ಧರ್ಮ ಸ್ಥಾಪಕರು ಯಾರು ಎಂಬ ಬಗ್ಗೆ ಪಂಡಿತರು ಚರ್ಚಿಸಿ ನಿರ್ಧರಿಸಲಿ ಎಂಬ ವಿಷಯವನ್ನು ಶ್ರೀ ಅಣ್ಣಾಸಾಹೇಬ ಪರ್ವತರಾವ್ ಅವರು ಮಂಡಿಸಿ, ಶ್ರೀ ಅಪ್ಪಾಸಾಹೇಬ ಶಿರಕೋಳಿಯವರು ಅನುಮೋದಿಸಿದರಲ್ಲ. ಬಸವಾಭಿಮಾನಿಗಳ ಮೂಗಿಗೆ ತುಪ್ಪ ಸವರಲು ಸಂಘಟಕರು ಇಂಥ ತಿಪ್ಪೇ ಸಾರಿಸುವ ನಿರ್ಣಯ ಕೈಗೊಂಡರು. ಹಾಗಾದರೆ ಮಹಾಧಿವೇಶನ ಸಂಘಟಕರು, ತಾವು ಪಂಡಿತರೂ ಆಗದೆ, ಯಾವುದೇ ನಿರ್ಣಯ ಕೈಗೊಳ್ಳುವವರೂ ಆಗದೆ ಅದೆಂತು ವೀರಶೈವ ಮಹಾಮತ ಸ್ಥಾಪನಾಚಾರ್ಯರು ಎಂದು ಜಾಹಿರಾತಿನಲ್ಲಿ ಪ್ರಕಟಪಡಿಸಿದರು? ಅವರು ಅಧಿಕೃತವಾಗಿ ಪ್ರಕಟಿಸದೆ ಇದ್ದರೆ ಈ ಗೊಂದಲ ಏಳುತ್ತಲೇ ಇರಲಿಲ್ಲ. ಇಂಥ ದ್ವಂದ್ವ ನೀತಿಯ ವೀರಶೈವ ಮಹಾಸಭೆ ಆತ್ಮವಂಚಕತ್ವವನ್ನು ಮಾಡುತ್ತಿದೆ ಎಂದರೆ ಸುಳ್ಳಲ್ಲ.

ಬಸವ ನಾಮದ ಡೋಲು ಬಾರಿಸಿ ಪ್ರೌಢರು, ವಿದ್ಯಾವಂತರೂ, ತತ್ತ್ವನಿಷ್ಠರು ಆದ ಬಸವ ತತ್ತ್ವಾನುಯಾಯಿಗಳನ್ನು ಆಕರ್ಷಿಸಿ, ಅವರಲ್ಲಿ ಪಂಚಾಚಾರ್ಯಾಭಿಮಾನವನ್ನು ತುಂಬಿ ಕಳಿಸುವ ಸಂಚನ್ನೇ ಬೆಳಗಾಂವಿಯ ಮಹಾಧಿವೇಶನ ಸಂಘಟಕರು ಮಾಡಿದ್ದಾರೆಂದರೆ ಸುಳ್ಳಲ್ಲ. ಬೇಲಿಮಠದ ಶ್ರೀಗಳು ಹೇಳಿದಂತೆ ಸಾರು-ಪಲ್ಯಗಳಿಗೆ ಸುವಾಸನೆ ಕೊಡಲು ಕರಿಬೇವು ಬಳಸುವಂತೆ ಬಸವ ನಾಮವನ್ನು ಬಳಸಿ, ಉಣ್ಣುವಾಗ ಕರಿಬೇವನ್ನು ಹೊರಗೆ ತೆಗೆದುಹಾಕುವಂತೆ, ಬಸವ ಭಕ್ತರನ್ನು ಆಕರ್ಷಿಸಿ ನಂತರ 'ನೀನ್ಯಾಕೋ ನಿನ್ನ ಹಂಗ್ಯಾಕೋ' ಎಂದು ಬಸವಣ್ಣನವರನ್ನು ಧರ್ಮ ಗುರು ಸ್ಥಾನದಿಂದ ಹೊರಗಿಡುವ ಧೂರ್ತ ಯೋಜನೆ ಕೆಲವರದು. ಶ್ರೀ ನಿಜಲಿಂಗಪ್ಪ ನವರಂತಹ ಮಹಾನ್ ವ್ಯಕ್ತಿಗಳು, ಶ್ರೀ ಶಂಕರ್‌ದಯಾಳ್ ಶರ್ಮರು, ಬಸವಣ್ಣ

Digitalized by e-Sahithya Documentation Forum
Sponsored by Sarayu Foundation Trust

ನವರನ್ನು ಕುರಿತೇ ಮಾತನಾಡಿದರು. ಹೀಗೆ ಬಸವಣ್ಣನವರು, ಹಂಪೆಯ ಕಡಲೆ ಕಾಳು, ಸಾಸುವೆಕಾಳು ಗಣಪಗಳಂತೆ ವೀರಶೈವ ಮಹಾಸಭೆಯವರು ಎಷ್ಟು ಮರೆಸ ಬೇಕೆಂದರೂ ಮರೆಸಲಾರದಂಥ ವ್ಯಕ್ತಿತ್ವ ಉಳ್ಳವರು.

ಕರಪತ್ರದ ಮೇಲೆ ಬಸವ ಭಾವಚಿತ್ರ, ವಾಲ್‌ಪೋಸ್ಟರಲ್ಲಿ ಬಸವ ಭಾವಚಿತ್ರ, ಬೃಹತ್ ಪತ್ರಿಕಾ ಜಾಹಿರಾತಿನಲ್ಲಿ ಬಸವೇಶ್ವರ ಐಕ್ಯಮಂಟಪ ! ಇನ್ನೇನು ಎಲ್ಲವೂ ಬಸವ ಮಯವಲ್ಲವೆ ? ಎಂದು ಕೆಲವರ ಕಣ್ಣಿಗೆ ಮಂಕುಬೂದಿ ಎರಚಬಹುದು. ಆದರೆ ಸಮಾಜವು ನಿರೀಕ್ಷಿಸುವುದು ಅಡ್ವರ್‌ಟೈಸಿಂಗ್ ಏಜೆಂಟಾಗಿ ಬಸವಣ್ಣನನ್ನು ಅಲ್ಲ ; ಧರ್ಮಗುರುವಾಗಿ, ಮಂತ್ರಪುರುಷನನ್ನಾಗಿ.

ಆಹ್ವಾನ

ಶ್ರೀ ಶರಣ ಬಸಪ್ಪ ಅಪ್ಪಾ ಅವರು ಹತ್ತರೊಳಗೆ ಹನ್ನೊಂದು ಎಂಬಂತೆ ಗುರು ಬಸವಣ್ಣನವರನ್ನು ಪ್ರಸ್ತಾಪಿಸಿ, ಅರವತ್ತುಮೂರು ಪುರಾತನರು, ರೇಣುಕಾದಿ ಪಂಚಾಚಾರ್ಯರು, ಬಸವಾದಿ ಪ್ರಮಥರು, ನೂರೊಂದು ವಿರಕ್ತರು, ತೋಂಟದ ಸಿದ್ಧಲಿಂಗೇಶ್ವರರು, ನಿಜಗುಣ ಶಿವಯೋಗಿ, ಸರ್ವಜ್ಞ ಮುಂತಾದ ಇವರೆಲ್ಲರೂ ವೀರಶೈವರು ಎಂದಿದ್ದಾರೆ. ಇವರ ದೃಷ್ಟಿಯಲ್ಲಿ ಬಸವಣ್ಣ ನಗಣ್ಯರು. ಒಳ್ಳೆಯದು ; ಈಗೊಂದು ಪ್ರಯೋಗ ಮಾಡೋಣ. ಲಿಂಗಾಯತ ಧರ್ಮಪುರುಷನಿಂದ ಒಬ್ಬೊಬ್ಬರನ್ನೇ ತೆಗೆಯೋಣ 63 ಪುರಾತನರು ; ಶರೀರಕ್ಕೆ ಏನೂ ಆಗದು ; ಪಂಚಾಚಾರ್ಯರನ್ನು ತೆಗೆಯೋಣ ; ಮುಳ್ಳು ಕಿತ್ತು ಹಾಕಿದಷ್ಟು ಹಗುರ ಮತ್ತು ಹರ್ಷವಾಗುವುದು. ಗುರು ಬಸವಣ್ಣನವರೆಂಬ ಹೃದಯವನ್ನು ತೆಗೆಯಲೆಳಸಿ, ಈ ಲಿಂಗಾಯತ ಧರ್ಮಪುರುಷ ಕ್ಷಣಕಾಲ ಉಳಿಯುವನೇನೋ ನೋಡಿರಿ. ಗುರು ಬಸವಣ್ಣನವರನ್ನು ಮತ್ತು ಅವರ ಸಮಕಾಲೀನರಾದ ಶರಣರ ವಚನ ಸಾಹಿತ್ಯವನ್ನು ತೆಗೆದುಬಿಟ್ಟು ಅದಾವ ಧರ್ಮವನ್ನು ಪ್ರತಿಪಾದಿಸುವರೋ ಪ್ರತಿಪಾದಿಸಲಿ. ಬಹುಶಃ ಒಂದು ಉದಾತ್ತ ಧರ್ಮ, ಸಾಹಿತ್ಯ, ಪರಂಪರೆ, ಸಂಸ್ಕೃತಿ ಎಲ್ಲವನ್ನೂ ಪಡೆದುಕೊಂಡು ತನ್ನ ಧರ್ಮಗುರುವಿಗೆ ದ್ರೋಹ ಬಗೆಯುವಂಥ ಸಮಾಜ ಲಿಂಗಾಯತ ಸಮಾಜವನ್ನು ಬಿಟ್ಟು ಇನ್ನೊಂದಿರಲಿಕ್ಕಿಲ್ಲ.

ಸಮನ್ವಯ ಎಂಬ ವಂಚಕಾಸ್ತ್ರ

ಶ್ರೀ ಮೂರು ಸಾವಿರ ಜಗದ್ಗುರುಗಳು ಪದದ ಅರ್ಥವನ್ನೂ ತಿಳಿಯದೆ **'ಸಮನ್ವಯ'** ಎಂದು ಜಪಿಸುತ್ತಿರುತ್ತಾರೆ. ಅವರು ದೊಡ್ಡವರಿರಬಹುದು ಸಾಮಾಜಿಕ ಆರ್ಥಿಕ ಸ್ಥಾನಮಾನದಲ್ಲಿ. ಆದರೆ ಅಧ್ಯಯನ, ಪ್ರಾಮಾಣಿಕ ಚಿಂತನೆಯ ವಿಷಯ ಬಂಧಾಗ ಅವರ ಪ್ರಬುದ್ಧತೆ ಒಪ್ಪಿಕೊಳ್ಳುವುದು ಕಷ್ಟ ಎಂದು ನಾನು ಸ್ಪಷ್ಟವಾಗಿ ಹೇಳಬಲ್ಲೆ ; ನಿಮಗೂ ಮನಗಾಣಿಸಿಕೊಡಬಲ್ಲೆ. ನನ್ನದು ಅಹಂಕಾರ ಎನ್ನಬೇಡಿ.

ಸಮನ್ವಯ ಎಂಬುದು ತಿಳಿದು ಬಳಸಬೇಕಾದ ನುಡಿ. ಅಪ್ಪ ಬಸವಣ್ಣ-ತಾಯಿ ವಚನ ಶಾಸ್ತ್ರ ಹಿಡಿದು ಒಂದು ಅಖಂಡ ಕುಟುಂಬದಂತೆ ಸಾಗಿದ್ದ ಲಿಂಗಾಯತ ಸಮಾಜದಲ್ಲಿ ಸ್ವಾರ್ಥಸಾಧಿಸಲು, ವಂಶವಾದ ಜಾತಿವಾದ ಹುಟ್ಟುಹಾಕಲು ಭಕ್ತ ಮಹೇಶ್ವರ ಎಂಬ ಭೇದ ಸೃಷ್ಟಿಸಲು 20ನೆಯ ಶತಮಾನದಲ್ಲಿ ರೇಣುಕಾದಿ ಪಂಚಾಚಾರ್ಯರನ್ನು ಕಲ್ಪಿಸಿ, ಸಮಾಜವನ್ನು ಛಿದ್ರಗೊಳಿಸಿ, ತತ್ತ್ವವನ್ನು ಮಲಿನಗೊಳಿಸಿದವರೊಡನೆ ಸಮನ್ವಯ ಸಾಧಿಸಬೇಕೆಂಬ ವಂಚಕ ಸೂತ್ರವನ್ನು ಪ್ರತಿಪಾದಿಸುತ್ತಿರುವರು. ಪಂಚಾಚಾರ್ಯರ ಪರಂಪರೆಯವರು ಸಮಾಜ ಒಡೆಯುವುದೆಂಬ ಬಟ್ಟೆ ಹಾವು ಬಿಟ್ಟರೆ, ಮೂರುಸಾವಿರ ಜಗದ್ಗುರುಗಳಂಥವರು ಸಮನ್ವಯ ಸೂತ್ರದ ಮಾತನ್ನಾಡುವರು. ಇವರ ಮಠಕ್ಕೆ ಅವರು, ಅವರ ಮಠಕ್ಕೆ ಇವರು ಹೋಗಿ ಪೂಜೆ-ಪ್ರಸಾದ ಮಾಡಲು ಕರೆಕೊಟ್ಟಿರುವರು. ಬಹುಪಾಲು ವಿಚಾರಶೀಲ ಲಿಂಗವಂತರು, ಲಿಂಗಾಯತೇತರರು ಊಹಿಸುತ್ತಿರುವರು ಇವರಿಬ್ಬರು ಅಂದರೆ ಗುರು–ವಿರಕ್ತರು ಉಭಯತರೂ ಜಾತಿವಾದದ ತಳಹಯ ಮೇಲೆ ಅವರು ಒಂದಲ್ಲ ಒಂದು ದಿನ ಬಸವ ತತ್ತ್ವಕ್ಕೆ ತಿಲಾಂಜಲಿ ಇತ್ತು ಒಂದಾಗಿಯೇ ಆಗಬಹುದು. ಏಕೆಂದರೆ ಅವರಿಗೆ ತತ್ತ್ವ ಮುಖ್ಯವಲ್ಲ, ಜಾತಿ ಮುಖ್ಯ. ಈ ಊಹೆ ಆಧಾರವಿಲ್ಲದ್ದು, ಅರ್ಥ ರಹಿತವಾದುದು ಎಂದು ಮೂರು ಸಾವಿರ ಮಠಾಧೀಶರಾದಿಯಾಗಿ ಉಳಿದ ವಿರಕ್ತರು ಅನ್ನುವುದಾದರೆ ಅತ್ಯಂತ ಸ್ಪಷ್ಟಮಾತುಗಳಲ್ಲಿ ಅಪ್ಪನನ್ನು ಅಪ್ಪಾ ಎನ್ನಲಿ, ಅಂದರೆ ಧರ್ಮಗುರು ಬಸವಣ್ಣನವರನ್ನು ಸ್ಥಾಪಕರು ಎನ್ನಲಿ; ವಚನ ಶಾಸ್ತ್ರವನ್ನು ಧರ್ಮ ಸಂಹಿತೆ ಎಂದು ಒಪ್ಪಿ ಘೋಷಿಸಲಿ. ಧರ್ಮಗುರು ಬಸವಣ್ಣನ ನಾಮದ ಬಲದಿಂದ ವಿರಕ್ತ ಪರಂಪರೆ ಮತ್ತಷ್ಟು ಕೀರ್ತಿಶಾಲಿಯಾಗುವುದು. ಇಲ್ಲದಿದ್ದರೆ ಅವರ ಪ್ರಾಮಾಣಿಕತೆಯ ಬಗ್ಗೆ ಸಂದೇಹ ಹೆಚ್ಚಾಗದಿರದು.

ಈಗ ಬಸಿವ ತತ್ತ್ವದ ಪಾವಿತ್ರ್ಯ ಉಳಿಸಿ, ಅದನ್ನು ಶುದ್ಧರೂಪದಲ್ಲಿ ಜಾಗತಿಕ ಧರ್ಮಗಳ ಸಾಲಿನಲ್ಲಿ ನಿಲ್ಲಿಸಬೇಕಾದರೆ ಶುದ್ಧೀಕರಣ ಮತ್ತು ಧ್ರುವೀಕರಣ ಅಗತ್ಯ.

1) ಸಂಪೂರ್ಣವಾಗಿ ಗುರು ಬಸವಣ್ಣನವರನ್ನು ಹೊರಗಿಟ್ಟು ಜಾತಿವಾದಿ, ಸ್ಥಾವರಲಿಂಗೋಪಾಸಕ, ಅಡ್ಡಪಲ್ಲಕ್ಕಿಯ ವೈಭವದ ಪಂಚ ಪೀಠಾಧೀಶರು ಒಂದು ಇವರು ಗುರು ಬಸವಣ್ಣನವರನ್ನು ಯಾವ ರೀತಿಯಲ್ಲೂ ಸ್ಮರಿಸುವುದು ಬೇಡ. ತಮ್ಮ ರೇಣುಕಾದ್ಯಾಚಾರ್ಯರು ಕೊಟ್ಟ ತತ್ತ್ವದ ಬಂಡವಾಳ ಏನಿದೆಯೋ ಅದರ ಮೇಲೆ ತಮ್ಮ ವಿಚಾರಗಳನ್ನು ಪ್ರತಿಪಾದಿಸಲಿ.

2) ಸಂಪೂರ್ಣವಾಗಿ ಗುರು ಬಸವಣ್ಣನವರ ತತ್ತ್ವಗಳಲ್ಲಿ ನಿಷ್ಠೆ ಇಟ್ಟವರು; ಅವರನ್ನು ಧರ್ಮಪಿತರೆಂದು, ವಚನ ಶಾಸ್ತ್ರವನ್ನು ಧರ್ಮಶಾಸ್ತ್ರ ಎಂದು ನಂಬಿ ನಡೆಯುವವರು ಇನ್ನೊಂದು ಕಡೆ ನಿಲ್ಲಲಿ.

Digitalized by e-Sahithya Documentation Forum
Sponsored by Sarayu Foundation Trust

ವಿರಕ್ತರು ಮೊದಲ ವರ್ಗದವರೊಡನೆ ಸೇರಿದರೂ ಪರವಾಗಿಲ್ಲ, ಒಮ್ಮೆ ಶುದ್ಧೀಕರಣ ಆಗಿ ಜಳಜಳ ಆಗಿಬಿಡಲಿ. ಇವರು ಸಮನ್ವಯ ಸೂತ್ರ ಪಠಿಸಿ ಬಸವ ತತ್ತ್ವಕ್ಕೆ ವಿರುದ್ಧವಾದ ಆಚರಣೆಗಳನ್ನು ಪಂಚಪೀಠಾಧೀಶರೊಡನೆ ಸಖ್ಯ ಬೆಳೆಸಿಕೊಳ್ಳುವ ಮೂಲಕ ತಂದು ಇನ್ನಷ್ಟು, ಈಗಾಗಲೇ ತಾವು ಸೇರಿಸಿರುವ ಕಸದೊಡನೆ, ಸೇರಿಸುವುದು ಬೇಡ.

ಒಮ್ಮೆ ಒಬ್ಬ ಮತದಾರ ಇದ್ದ, ಚುನಾವಣೆ ಬಂದಿತು. ಎಲ್ಲಾ ಪಾರ್ಟಿಗಳಿಂದ ನಿಂತವರೂ ಅವನಿಗೆ ಬೇಕಾದವರೆ. ಎಲ್ಲರೂ ಬಂದು 'ಅಣ್ಣಾವರೇ ನಿಮ್ಮ ಅಮೂಲ್ಯ ಮತ ನನಗೇ ಕೊಡಿರಿ' ಎಂದು ಕೈಮುಗಿದು ಕೇಳಿದರು. ಓಟು ಹಾಕುವ ದಿನ ಬಂದಿತು. ಎಲ್ಲ ಅಭ್ಯರ್ಥಿಗಳೂ ಎಷ್ಟು ವಿಶ್ವಾಸವಿಟ್ಟು ಇವನ ಮನೆಗೆ ಬಂದಿದ್ದರೆಂಬುದು ನೆನಪಾಯಿತು. ಯಾರಿಗೂ ಬೇಸರ ಪಡಿಸಲು ಮನಸ್ಸು ಬರಲಿಲ್ಲ. ಆಗ ಅವನು ಎಲ್ಲರ ಮನಸ್ಸನ್ನೂ ಸಂತೃಪ್ತಿಗೊಳಿಸುವ ಸಲುವಾಗಿ ಎಲ್ಲ ಚುನಾವಣಾ ಅಭ್ಯರ್ಥಿಗಳ ಹೆಸರಿನ ಮುಂದೆಯೂ ಮುದ್ರೆ ಒತ್ತಿದ. ಅವನ ಮತವೇ ಕುಲಗೆಟ್ಟಿತು. ಸೈದ್ಧಾಂತಿಕ ತಳಹದಿಯಿಲ್ಲದ ಸಮನ್ವಯವಾದವೂ ಇದೇ ರೀತಿ ಅರ್ಥರಹಿತ.

ಪರಶಿವನೇ ವೀರಶೈವ ಮತಸ್ಥಾಪಕ

ಏನೋ ಒಂದು ಮಹತ್ವಪೂರ್ಣವಾದ ವಾದವನ್ನು ಮಂಡಿಸುವರೇನೋ ಎಂಬಂತೆ ಶ್ರೀ ಮೂರು ಸಾವಿರ ಮಠಾಧೀಶರು ಹೀಗೆ ಹೇಳಿದ್ದಾರೆ. "ಅನಾದಿಯಿಂದ ಬಂದಿರುವ ವೀರಶೈವ ಮತಕ್ಕೆ ಪರಶಿವನೇ ಸಂಸ್ಥಾಪಕನು. ಈ ತತ್ತ್ವಕ್ಕೆ ಎಲ್ಲರೂ ಒಪ್ಪಿದರೆ ಕಲಹವೇ ಬರುವುದಿಲ್ಲ. ಪರಶಿವನು ಇಬ್ಬರಿಗೂ ಬೇಕು. ಇಬ್ಬರೂ ಶಿವ ಮಂತ್ರವನ್ನು ಜಪಿಸುತ್ತಾರೆ. ವಸ್ತುಸ್ಥಿತಿ ಹೀಗಿರುವಾಗ ಕೇವಲ ಸ್ವಪ್ರತಿಷ್ಠೆಗೆ ಕುಳಿತರೆ ವೀರಶೈವ ಧರ್ಮಕ್ಕೆ ಚ್ಯುತಿ ತಂದಂತಾಗುತ್ತದೆ. ಹೃದಯದಿಂದ ವೀರಶೈವನೆಂಬ ಅಭಿಮಾನದಿಂದ ಕೂಡಿದರೆ ಒಳಿತು....

ವೀರಶೈವ ಸಮಾಜ ಸುಧಾರಣೆಗೆ ಎಲ್ಲ ವೀರಶೈವ ಭಕ್ತರು ಸಹಕರಿಸಿ ಪ್ರೋತ್ಸಾಹಿಸಬೇಕು. ವಿಶಾಲ ಬುದ್ಧಿ ಇದಕ್ಕೆ ಅವಶ್ಯ ಎಂದ ಅವರು, ನಿಸ್ವಾರ್ಥಿಗಳಾಗಿ ವೀರಶೈವ ಸಮಾಜ ರಥವನ್ನು ಎಳೆಯೋಣ, ಆಗ ಮಹಾತ್ಮಾ ಬಸವೇಶ್ವರರಿಗೂ ರೇಣುಕಾಚಾರ್ಯರ ಆತ್ಮಕ್ಕೆ ಶಾಂತಿ, ಇಲ್ಲದಿದ್ದರೆ ಅವರೀರ್ವರ ಶಾಪ ತಟ್ಟದೆ ಬಿಡದು." ಎಂದು ಎಚ್ಚರಿಸಿದರು. (ಸಂಯುಕ್ತ ಕರ್ನಾಟಕ 15-2-92, ಪುಟ 3) ಈ ಮಾತು ಉತ್ತರ ಕರ್ನಾಟಕದ ಭಾಷೆಯಲ್ಲಿ ಹೇಳುವುದಾದರೆ 'ಭಯಂಕರ ಚಲೋ'

ಎನ್ನಿಸುತ್ತದೆ. ವಿಶ್ಲೇಷಿಸಿ ನೋಡಿದರೆ, ಮಧುಮೇಹ ಜಾಸ್ತಿಯಾಗಿ ಪ್ರಜ್ಞೆ ತಪ್ಪಿದ (Coma) ರೋಗಿಗೆ ಇನ್ನಷ್ಟು ಸಕ್ಕರೆ ತಿನ್ನಿಸಿದಂತಿದೆ.

ವಚನ ವಾಙ್ಮಯದಲ್ಲಿ ಮಾತ್ರವಲ್ಲ ಶೈವ ಸಂಬಂಧಿ ಶಾಸ್ತ್ರಗಳಲ್ಲಿ ಸಹ ಶಿವ, ಪರಶಿವಕ್ಕೆ ವ್ಯತ್ಯಾಸವಿದೆ. ಶಿವ ಎಂದರೆ ಜಟಾಧಾರಿ, ಉಮಾವಲ್ಲಭ, ಯೋಗಿರಾಜ ಶಿವ ಪರಶಿವ ಎಂದರೆ ನಾಮರೂಪಗಳಿಲ್ಲದ ನಿರಾಕಾರ ನಿರ್ಗುಣನಾದ ಜಗತ್ಕರ್ತನಾದ ಪರಮತತ್ತ್ವ (Absolute Reality). ಈ ಪರಮ, ಆತ್ಯಂತಿಕ ತತ್ತ್ವವನ್ನೇ ವೇದಾಂತಿಗಳು ಪರಬ್ರಹ್ಮ (ಬ್ರಹ್ಮ ಅಲ್ಲ) ಎನ್ನುವರು ; ಮುಸ್ಲೀಮರು ಅಲ್ಲಾಹ ಎನ್ನುವರು. ಇಂಗ್ಲೀಷಿನಲ್ಲಿ GOD ಎನ್ನಲಾಗುವುದು. ಈ ಪರಶಿವ ತತ್ತ್ವವು ಕೇವಲ ಸೃಷ್ಟಿಯನ್ನು ಮಾಡುವುದೇ ವಿನಾ ಧರ್ಮವನ್ನು ಸ್ಥಾಪಿಸುವುದಿಲ್ಲ. ಧರ್ಮದ ಜೀವಾಳವಾದ ಸಾಹಿತ್ಯ ರಚಿಸುವುದಿಲ್ಲ. ಅದಕ್ಕಾಗಿಯೇ ಎಲ್ಲ ಧರ್ಮಗಳು, ಆ ಪರಮ ತತ್ತ್ವದ ಕಾರುಣ್ಯವನ್ನು **ಅವತೀರ್ಣ** ಮಾಡಿಕೊಂಡು ಅದರ ಜ್ಞಾನವನ್ನು ಪಡೆದುಕೊಂಡವರನ್ನು ಕಾರಣಿಕರು, ಪ್ರವಾದಿಗಳು, ಅವತಾರಿಕರು ಎಂದು ಕರೆಯುವುದು. ನಿರಾಕಾರ ವಿದ್ಯುತ್ ಪ್ರಕಟವಾಗಲು ಸಾಕಾರ ಬಲ್ಬ್ ಹೇಗೆ ಬೇಕೇಬೇಕೋ ಹಾಗೆ ಪ್ರವಾದಿಗಳು ಆ ನಿರಾಕಾರ ತತ್ತ್ವವು ಪ್ರಕಟವಾಗಲು ಬಲ್ಬಿನಂತೆ ಮಾಧ್ಯಮ (medium) ಆಗುತ್ತಾರೆ.

ಕೈಕಾಲು, ಕಿವಿ ಕಣ್ಣು, ಬಾಯಿ ಆಕಾರವಿಲ್ಲದ ಪರಶಿವ ಅದೆಂತು ಧರ್ಮವನ್ನು ಸ್ಥಾಪಿಸಬಲ್ಲ ? ತತ್ತ್ವಜ್ಞಾನದ ಕನಿಷ್ಠ ಜ್ಞಾನ (minimum knowledge) ಕನಿಷ್ಠ ತರ್ಕ (minimum logic) ಇಲ್ಲದಂತೆ ಸ್ವಾಮೀಜಿಯವರು ಮಾತಾಡಬಹುದೆ ? ಪರಶಿವ (Absolute Reality) ನಿಂದ ಧರ್ಮ ಹುಟ್ಟಿತು ಎನ್ನುವುದು ತಂದೆಯಿಲ್ಲದೆ ಮಗುವು ಹುಟ್ಟಿತು ಎಂಬಷ್ಟೇ ಹಾಸ್ಯಾಸ್ಪದ. ಆದ್ದರಿಂದ ಪರಶಿವನಿಂದ ಧರ್ಮಹುಟ್ಟಿತು ಎಂದು ಏನೋ ಹಿರಿಮೆ ಸಾಧಿಸ ಹೋಗಿ ಜಗತ್ತಿನ ಕಣ್ಣಿನಲ್ಲಿ ಮೂರ್ಖರಾಗುವ ಬದಲು ವಿಶ್ವಗುರು ಬಸವಣ್ಣನವರಿಂದ ಈ ಧರ್ಮ ಹುಟ್ಟಿತು ಎಂದು ಸ್ಪಷ್ಟವಾಗಿ, ಪ್ರಾಮಾಣಿಕವಾಗಿ ಹೇಳಿ, ಜಾಗತಿಕ ಧರ್ಮಗಳ ಸಾಲಿನಲ್ಲಿ ನಿಲ್ಲುವುದು ಒಳ್ಳೆಯದು.

ಎಲ್ಲ ಧರ್ಮಗಳು ಪೌರುಷೇಯವೆ

'ವೇದಗಳು ಅಪೌರುಷೇಯ; ಪುರುಷನಿಂದ ಹುಟ್ಟದೆ ಅವು ಪರಬ್ರಹ್ಮನ ಮುಖದಿಂದಲೇ ನೇರವಾಗಿ ಹುಟ್ಟಿದವು.' ಎಂಬ ಸನಾತನ ವೈದಿಕರ ನಂಬಿಕೆಗೂ ಮೂರು ಸಾವಿರ ಜಗದ್ಗುರುಗಳ ಪ್ರತಿಪಾದನೆಗೂ ವ್ಯತ್ಯಾಸವೇನಿದೆ ? ಮುಸ್ಲೀಮರು ಸಹಿತ

Digitalized by e-Sahithya Documentation Forum
Sponsored by Sarayu Foundation Trust

ಕುರಾನ್ ಅಲ್ಲಾಹನ ವಾಣಿ ಎನ್ನುತ್ತಾರೆ. ಒಬ್ಬನೇ ದೇವರು ಸನಾತನ ವೈದಿಕರಿಗೆ ಒಂದು ರೀತಿ, ಸನಾತನ ವೀರಶೈವರಿಗೆ ಒಂದು ರೀತಿ, ಮುಸ್ಲೀಮರಿಗೆ ಒಂದು ರೀತಿ ಹೇಳಿ ಹೀಗೆ ಜಗಳ ಏಕೆ ಹಚ್ಚುವನು ? ಎಲ್ಲ ಗ್ರಂಥಗಳೂ ಪೌರುಷೇಯುವೆ ! ದೇವರ ಸಾಕ್ಷಾತ್ಕಾರ, ದಿವ್ಯಾನುಭವ ಆದಾಗ ದ್ರಷ್ಟಾರರು, ಪ್ರವಾದಿಗಳು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಆ ದೈವೀಜ್ಞಾನವನ್ನು ಅವತೀರ್ಣ (Revelation) ಮಾಡಿಕೊಂಡು, ತಮ್ಮ ಪ್ರತಿಭೆಗನುಸಾರವಾಗಿ ಶಾಸ್ತ್ರಗಳ ರೂಪದಲ್ಲಿ ಜಗತ್ತಿಗೆ ಕೊಡುವರು. ಮಳೆ ನೀರು ಬಿದ್ದಾಗ ಭೂಮಿಗೆ ಅನುಸಾರವಾಗಿ ನೀರಿನ ರೂಪ-ರುಚಿ-ಬಣ್ಣಗಳಲ್ಲಿ ವ್ಯತ್ಯಾಸವಾಗುವಂತೆ ಅವತೀರ್ಣ ಮಾಡಿಕೊಂಡ ಮಹಾತ್ಮರ ಸ್ವಭಾವಕ್ಕೆ ಅನುಸಾರವಾಗಿ ವ್ಯತ್ಯಾಸಗಳು ಕಾಣಬರುತ್ತವೆ ಎಂದು ಹೇಳಬಹುದು. ಶಿಕ್ಷಕನು ಒಬ್ಬನೇ ಎಲ್ಲ ವಿದ್ಯಾರ್ಥಿಗಳಿಗೆ ಪಾಠಹೇಳಿದರೂ ವಿದ್ಯಾರ್ಥಿಗಳು ತಮ್ಮ ಬುದ್ಧಿಮತ್ತತೆಗೆ ಅನುಸಾರವಾಗಿ ಪರೀಕ್ಷೆಯಲ್ಲಿ ಬರೆದು ಬೇರೆ ಬೇರೆ ಅಂಕಗಳನ್ನು ಗಳಿಸುವಂತೆ ಇದು.

ಧರ್ಮ ಅನಾದಿಯೇ ?

ಧರ್ಮ ಅನಾದಿ ಎನ್ನುವುದು ಸರಿಯೆ ? ಅನಾದಿ ಎಂದರೆ Infinity. ಸೃಷ್ಟಿ ಆಗುವ ಪೂರ್ವದಲ್ಲಿ ಇದ್ದ, ಲೆಕ್ಕಕ್ಕೆ ಸಿಗದ ಕಾಲವನ್ನು ಅನಾದಿ ಎಂದೂ, ಸೃಷ್ಟಿ ಆದ ಘಟನೆಯನ್ನು ಇರಿಸಿಕೊಂಡು ಆದಿ ಎಂದು ತತ್ತ್ವಜ್ಞಾನದಲ್ಲಿ ಪ್ರಯೋಗಿಸಲಾಗುವುದು. ಧರ್ಮವು ಮನುಷ್ಯ ಸಮಾಜ ಹುಟ್ಟಿದ ಮೇಲೆ ಬಂದ ನಿಬಂಧನೆಯೇ ಹೊರತು, ಅನಾದಿ ಇರದು. ಒಂದು ರಾಷ್ಟ್ರ (ಉದಾಹರಣೆಗೆ ಭಾರತ) ರೂಪುಗೊಂಡ ಮೇಲೆ ಆದರ ಸಂವಿಧಾನ (constitution) ರಚನೆಯಾಗುವುದೇ ವಿನಾ ಮೊದಲೇ ಆಗದು. ಹಾಗೆ ಧರ್ಮವೂ ಕೂಡ ಮನುಷ್ಯ ಸಮಾಜವನ್ನು ನಿಯಂತ್ರಿಸಲು ಬಂದ ಒಂಹು ಸಂವಿಧಾನ. ಅನಾದಿ ಎಂದರೆ ಪುರಾತನ ಎಂಹು ಅರ್ಥ ಮಾಡಿದರೆ ಆಗ ಪ್ರಕಟವಾಗುವ ಸಂಗತಿ ಬೇರೆ.

ಶಿವನು ಸ್ಥಾಪಕನೆಂದು ಪೂಜ್ಯ ಸ್ವಾಮೀಜಿಯವರ ಪ್ರತಿಪಾದನೆಯೆ ? ಶಿವನೆಂದರೆ ನಾನು ಮೇಲೆ ವಿವರಿಸಿರುವ ಉಮಾವಲ್ಲಭ, ಜಟಾಧಾರಿ, ಸರ್ಪಭೂಷಣನೆ ? ಲಿಂಗಾಯತ ಧರ್ಮದ ಪ್ರಮುಖ ಲಾಂಛನ ಇಷ್ಟಲಿಂಗ. ಲಿಂಗವಂತನ ಆನುಯಾಯಿತ್ವ ಸಿದ್ಧವಾಗುವುದೇ ಈ ಲಾಂಛನ ಧಾರಣೆಯಿಂದ ಎಂದು ಸ್ವಾಮೀಜಿ ಖಂಡಿತಾ ಒಪ್ಪಬಹುದು. ಈ ಶಿವನ ಅಂಗದ ಮೇಲೆ ಇಷ್ಟಲಿಂಗವೇ ಇಲ್ಲ ಎಂದಾಗ ಆದೆಂತು ಆತ ನಮ್ಮ ಧರ್ಮಗುರು ಆಗಬಲ್ಲ ? ಎಲ್ಲಾದರೂ ಶಿವನು ಅಂಗದ ಮೇಲೆ ಲಿಂಗವನ್ನು ಧರಿಸಿರುವ ಒಂದಾದರೂ ಚಿತ್ರ ನೋಡಿರುವಿರಾ ? ಅಥವಾ ವರ್ಣನೆ

ಕೇಳಿರುವಿರಾ ? ಶಿವನು ಪ್ರಥಮ ಯೋಗಿರಾಜನೆಂದು, ನಟರಾಜನೆಂದು ಐತಿಹಾಸಿಕವಾಗಿ (ಪ್ರಥಮ ಧರ್ಮ ಶೈವಧರ್ಮ ಕೊಟ್ಟವನೆಂದು ನನಗೆ ಗೌರವವಿದೆ.) ಹೋಗಲಿ, ಶ್ರೀ ಮೂರುಸಾವಿರ ಸ್ವಾಮೀಜಿಯವರು ಪ್ರತಿಪಾದಿಸುವ ಧರ್ಮಸ್ಥಾಪಕ ಆತನಾಗಿದ್ದರೆ, ಈ ಧರ್ಮದ ಪ್ರಮುಖ ಲಾಂಛನ ಇಷ್ಟಲಿಂಗವನ್ನು ಹೆಂಡತಿ ಪಾರ್ವತಿಗೆ ಏಕೆ ಕಟ್ಟಲಿಲ್ಲ, ಮಕ್ಕಳಾದ ಗಣಪತಿ-ಷಣ್ಮುಖರಿಗೆ ಏಕೆ ಕಟ್ಟಲಿಲ್ಲ ? ಸ್ವಾಮೀಜಿಯವರು ಉತ್ತರಿಸುವರೆ ?

ಆ ಯೋಗಿರಾಜನು ಆಗಿ ಹೋದ ಮೇಲೆ ಅವನ ಪ್ರತೀಕವಾಗಿ (ಕ್ರೈಸ್ತರು ಶಿಲುಬೆಯನ್ನು ಏಸುವಿನ ಸಂಕೇತ ಮಾಡಿಕೊಂಡಂತೆ) ಅವನ ಆಕಾರದ ಸ್ಥಾವರ ಲಿಂಗವನ್ನು ಮಾಡಿ, ಅವನ ಅನುಯಾಯಿಗಳಾದ ಶೈವರು ಪೂಜಿಸತೊಡಗಿದರು. ಆದಕ್ಕಾಗಿ ಆತ ಲಿಂಗವನ್ನು ಕಟ್ಟಿಕೊಂಡಿಲ್ಲ.

ಲಿಂಗಾಯತ ಧರ್ಮಸ್ಥಾಪಕ ಬಸವಣ್ಣನವರು ಇಷ್ಟಲಿಂಗ ಜನಕರು ಎಂಬುದು ನಮ್ಮ ಖಚಿತ ಪ್ರತಿಪಾದನೆ. ಅವರು ತಾವು ವಿಶ್ವಾತ್ಮನ ಕುರುಹು ಎಂದು ಘೋಷಿಸಿದ ಇಷ್ಟಲಿಂಗವನ್ನು ಸ್ವತಃ ಕಟ್ಟಿಕೊಂಡರು, ತಮ್ಮ ಪತ್ನಿ ನೀಲಗಂಗಳಿಗೆ, ಅಕ್ಕ ನಾಗಲಾಂಬಿಕೆಗೆ, ಸೋದರಳಿಯ ಚನ್ನಬಸವಣ್ಣನಿಗೆ ಕಟ್ಟಿದರು ; ಇನ್ನಿತರರಿಗೂ ಕಟ್ಟಿದರು.

[ಶೈವ–ವೀರಶೈವ ಒಟ್ಟಿಗೆ ಹುಟ್ಟಿದವು (parellel) ಎಂದು ಹಲವರ ವಾದ. ಪದಗಳೇ ಸೂಚಿಸುತ್ತವೆ ಶೈವದ ಒಂದು ಶಾಖೆ ವೀರಶೈವ ಎಂಬುದಾಗಿ. ಶೈವಧರ್ಮ ವೈದಿಕಧರ್ಮದ ತೋಳ್ತೆಕ್ಕೆಯಲ್ಲಿ ಸಿಕ್ಕಿ ತಾತ್ತ್ವಿಕ ವೈಶಿಷ್ಟ್ಯತೆಯನ್ನು ಕಳೆದುಕೊಳ್ಳುವ ಸ್ಥಿತಿಯಲ್ಲಿದ್ದಾಗ, ಶಿವಭಕ್ತಿಯನ್ನು ಉಳಿಸಿಕೊಳ್ಳಲು (ವೀರವೈಷ್ಣವದಂತೆ) ಹುಟ್ಟಿದ ಒಂದು ಪಂಥವೇ ವೀರಶೈವ]

ಪಂಚಾಚಾರ್ಯರು. ಶಿವೋಪಾಸಕರು, ಬಸವ ತತ್ತ್ವದವರು ಕರ್ತನಾದ ದೇವರ (ಪರಶಿವನ) ಉಪಾಸಕರು; ಅವರು ರುದ್ರಾಭಿಷೇಕ, ಹೋಮಹವನ ಮಾಡುವವರು, ಇವರು ಅವನ್ನು ತೊರೆದವರು. ಇಬ್ಬರೂ ಒಂದಾಗುವುದು ಭಾ.ಜ.ಪ-ಕಮ್ಯುನಿಷ್ಟರು ಹೊಂದಾಣಿಕೆ ಮಾಡಿಕೊಂಡಂತೆ ; ಇದು ಎಂದಿಗೂ ಸಾಧ್ಯವಾಗದು. ಒಂದು ವೇಳೆ ಆದರೆ, ಅಂದು ಸಮತಾವಾದ ಸಮಾಧಿಯಾದಂತೆ, ಏಕದೇವೋಪಾಸನೆ ಗಡಿಪಾರಾದಂತೆ, ದೀನದಲಿತರಿಗೆ ಧರ್ಮದ ಹಕ್ಕು ನೀಡುವ ಒಂದು ಪ್ರಗತಿಪರ ಧರ್ಮ ಅವಶೇಷವಾದಂತೆ. ಆ ದಿನ ಜಗತ್ತಿನ ಕರಾಳದಿನ! ಕಪ್ಪು ಅಕ್ಷರಗಳಲ್ಲಿ ದಾಖಲಿಸಬೇಕಾದ ದಿನ. ಬಹುಶಃ ಆ ದುರಂತಕ್ಕೆ ಬಸವ ತತ್ತ್ವಾನುಯಾಯಿಗಳು ಎಂದೂ, ಅವರಲ್ಲಿ ಉಸಿರಿರುವವರೆಗೂ ಅವಕಾಶ ಮಾಡಿಕೊಡರು.

Digitalized by e-Sahithya Documentation Forum
Sponsored by Sarayu Foundation Trust

ಯಾವ ಒಂದು ಜನಪರ ಚಳುವಳಿಯನ್ನು ಅಂದರೆ ಶರಣರ ಚಳುವಳಿಯನ್ನು ಪುರೋಹಿತಶಾಹಿ, ರಾಜಶಕ್ತಿ, ಶ್ರೀಮಂತ ಶಕ್ತಿಗಳು ಹತ್ತಿಕ್ಕಲು ಎಳಸಿದವೋ, ಅದರ ಪ್ರತಿನಿಧಿಯಾಗಿ ನಿಂತಿರುವ ಅಖಿಲ ಭಾರತ ವೀರಶೈವ ಮಹಾಸಭೆ ಅಂಥದೊಂದು ಕರಾಳದಿನವನ್ನು ಸಮನ್ವಯತೆಯ ಹೆಸರಿನಲ್ಲಿ ಹುಟ್ಟುಹಾಕಲು ಎಳಸಿದರೂ, ಅಂದಿನಿಂದಲೂ ಬಸವ ತತ್ತ್ವವನ್ನು ಹೃದಯದ ಭಾಂಡಾರದಲ್ಲಿ ಮತಾಂಧ ಶಕ್ತಿಗಳಿಂದ ಕಾಪಾಡಿಕೊಂಡು ಬಂದಿರುವ ಬಸವ ತತ್ತ್ವಾನುಯಾಯಿಗಳು ಮತ್ತು ಸಮತಾವಾದಿಗಳು ಇರುವರಲ್ಲ. ಅವರು ಆ ಕರಾಳ ದಿನಕ್ಕೆ ಅವಕಾಶ ಮಾಡಿಕೊಡರು.

"ವೀರಶೈವ ಸಮಾಜ ಸುಧಾರಣೆಗೆ ಎಲ್ಲ ವೀರಶೈವ ಭಕ್ತರು ಸಹಕರಿಸಿ ಪ್ರೋತ್ಸಾಹಿಸಬೇಕು" ಎಂದು ಮೂರು ಸಾವಿರ ಮಠದ ಶ್ರೀಗಳು ಅಪ್ಪಣೆ ಕೊಡಿಸಿದ್ದಾರೆ. ಪಂಚ ಪೀಠಾಧೀಶರನ್ನು ಆದರದಿಂದ ಆಮಂತ್ರಿಸಿ ದಯವಿಟ್ಟು ಸುಧಾರಣೆಯ ಮಾತನ್ನಾಡುವ ಸಾಹಸ ಬೇಡ. ಅಡ್ಡ ಪಲ್ಲಕ್ಕಿಯಲ್ಲಿ ಸುಧಾರಣೆಯೆ ? ಹೊರುವ ಭಕ್ತರ ನಂಬಿಕೆಯಲ್ಲಿ ಸುಧಾರಣೆಯೆ ? ಬಂಗಾರದ ಕಿರೀಟ, ಶ್ರೀಮಂತ ಹೆಣ್ಣುಮಕ್ಕಳನ್ನು ನಾಚಿಸುವಷ್ಟು ಬಂಗಾರದ ವಜ್ರಾಭರಣ ತೊಡುವುದರಲ್ಲಿ, ಪಟ್ಟೆ ಪೀತಾಂಬರ ಉಡುವುದರಲ್ಲಿ ಸುಧಾರಣೆಯೆ ?

ಸುಧಾರಣೆ ಮಾಡಬೇಕಾದರೆ ಒಂದು ಸೈದ್ಧಾಂತಿಕ ನೆಲೆ ಬೇಕು. ಅದಿರುವುದು ವಚನ ಶಾಸ್ತ್ರದಲ್ಲಿ. ಅದೇ ಬೇಡವಾದ ಪಂಚಾಚಾರ್ಯರನ್ನು ನಂಬಿಕೊಂಡು ಸಮಾಜ ಸುಧಾರಣೆಯ ಕನಸು ಕಾಣುವುದೇ ಅಸಂಬದ್ಧ. ಆದ್ದರಿಂದ ಪೂಜ್ಯ ಸ್ವಾಮಿಗಳೇ ತಮ್ಮಲ್ಲಿ ನಮ್ಮದೊಂದು ಕಳಕಳಿಯ ಬಿನ್ನಹ. ದಯವಿಟ್ಟು, ಧರ್ಮಪಿತ ಬಸವಣ್ಣನವರನ್ನು ನಿಮ್ಮ ಬಾಯಿಂದ, ಸಾಹಿತ್ಯದಿಂದ, ಮಠದಿಂದ ಬಿಡುಗಡೆ, ಬೇಕಾದರೆ ಗಡೀಪಾರು ಮಾಡಿಬಿಡಿರಿ. ವಚನ ಸಾಹಿತ್ಯದ ತಂಟೆಗೆ ಹೋಗಬೇಡಿ, ಆಧಾರವಾಗಿ ಬಳಸಿಕೊಳ್ಳಬೇಡಿ, ಪ್ರಕಟಿಸಬೇಡಿ. ಸುಮ್ಮನೇ ಧರ್ಮಪಿತನನ್ನು ಆಹ್ವಾನಿಸಿದಂತೆ ಮಾಡಿ ಮೂಲೆಯಲ್ಲಿ ಕೂರಿಸುವುದಗತ್ಯವಿಲ್ಲ. ಭಕ್ತರಿಗೆ ವೈಚಾರಿಕ ಸ್ವಾತಂತ್ರ್ಯ ಕೊಟ್ಟು, ಕೈಬಿಡಿ. ಅವರನ್ನು ರಕ್ಷಿಸುವ ಶಕ್ತಿ ಧರ್ಮಗುರು ಬಸವಣ್ಣ, ಧರ್ಮಶಾಸ್ತ್ರ ವಚನ ಸಾಹಿತ್ಯಗಳಿಗಿದೆ. ತಾವು ಮಾನಸಿಕ ಸಂಕಟದಿಂದ ತೊಳಲದೆ, ನಿಮ್ಮ ಸಂಕಟ ಪರಿಹಾರಕ್ಕಾಗಿ ಭಕ್ತರನ್ನು ಬಲಿಗೊಡದೆ ಗುರು ವರ್ಗದವರೊಡನೆ ಒಂದಾಗಿರಿ. ಅವರ ಮಠಕ್ಕೆ ತಾವು ಹೋಗಿ, ತಮ್ಮ ಮಠಕ್ಕೆ ಅವರು ಬರಲಿ. ಎರಡೂ ಸಂಪ್ರದಾಯಗಳ ಮಠಗಳಿಗೆ ನಿಮ್ಮ ಜಾತಿಯವರೇ ಮಠಾಧೀಶರಾಗಲಿ; ದಯವಿಟ್ಟು ಸಮನ್ವಯದ ಮಾತನ್ನು ನಿಲ್ಲಿಸಿ, ನಿಮ್ಮ ವೀರಶೈವದ ನೆಲೆಯನ್ನು ಗಟ್ಟಿಗೊಳಿಸಿ

ಕೊಳ್ಳಿರಿ. ಬಸವಣ್ಣನನ್ನು ಬಿಟ್ಟ ವೀರಶೈವ ಶೂನ್ಯ ಎಂದ ಶ್ರೀ ನಿಜಲಿಂಗಪ್ಪನವರಂಥವರ ವಿಚಾರಗಳಿಗೆ ಸೊಪ್ಪು ಹಾಕದೆ, ಹಾಗೆ ಉಂಟಾಗುವ ಶೂನ್ಯವನ್ನು (ಪಂಚ ಪೀಠಾಧೀಶರ) ಅಡ್ಡ ಪಲ್ಲಕ್ಕಿ ಉತ್ಸವಗಳನ್ನು ಜಾಸ್ತಿ ಮಾಡುವ ಮೂಲಕ ತುಂಬಿರೆಂದು ವಿನಂತಿಸುತ್ತೇನೆ. ಬಸವಣ್ಣನವರನ್ನು ತಾವು ಕೈ ಬಿಟ್ಟರೇನಂತೆ ಪಂಚ ಪೀಠಾಧೀಶರ ಸಖ್ಯ ಸಿಕ್ಕಿರುವುದು ತಾನೆ ? ನೀವು ಅಂದರೆ ವಿರಕ್ತರು ಮಠಗಳಿಂದ ಬಸವಣ್ಣನವರನ್ನು ಹೊರಗೆ ಕಳಿಸಿದ ತಕ್ಷಣವೇ ಸ್ವಾಗತಿಸಿ, ಹೃದಯದಲ್ಲಿ ಇಂಬಿಟ್ಟುಕೊಳ್ಳಲು ಅಸಂಖ್ಯಾತರು ಸಿದ್ಧರಾಗಿದ್ದಾರೆ. ಅರ್ಥಂಬರ್ಥ ಗೌರವ, ಅರ್ಥಂಬರ್ಥ ಅನಾದರ ಗುರು ಬಸವಣ್ಣನವರ ಬಗ್ಗೆ ತೋರುವ ಮಠಾಧಿಕಾರಿಗಳು ಬಸವಣ್ಣನವರನ್ನು ಕೈ ಬಿಡುವ ದಿನ, ಬಸವ ಧರ್ಮದ ಇತಿಹಾಸದಲ್ಲಿ ಸುವರ್ಣ ಪುಟವನ್ನು ತೆರೆಯಲಿದೆ. ಅಂದು ಕ್ರಾಂತಿಪುರುಷ ಬಸವಣ್ಣ ಸಂಕೋಲೆಗಳಿಂದ ಮುಕ್ತನಾಗಿ ವಿಶ್ವದೆತ್ತರಕ್ಕೆ ಬೆಳೆದು ನಿಲ್ಲುವರು.

ಗುರು ಬಸವಣ್ಣನವರು ವೀರಶೈವರಲ್ಲ

ಈ ಶೀರ್ಷಿಕೆ ನೋಡಿ ಅನೇಕರಿಗೆ ಆಶ್ಚರ್ಯ–ಆಘಾತವಾಗಬಹುದು. ಆಹುದು; ವಿಶ್ವ ಗುರು ಬಸವಣ್ಣನವರು ವೀರಶೈವ ದೀಕ್ಷೆಯನ್ನೇ ಪಡೆಯಲಿಲ್ಲ. ಬ್ರಾಹ್ಮಣರಾಗಿ ಜನಿಸಿದರು, ಅಲ್ಲಿದ್ದ ಕೆಲವು ವೈಷಮ್ಯಗಳನ್ನು ನೋಡಿ ಬೇಸರಪಟ್ಟು ಹೊರಬಂದರು. ಸಂಗಮೇಶ್ವರನ ಅರ್ಚಕರಾಗಿರುತ್ತಲೇ ಸ್ವತಂತ್ರ ವಿಚಾರವಾದಿಯಾಗಿ ರೂಪುಗೊಂಡು ಒಂದು ದಿನ ಇಷ್ಟ ಲಿಂಗದ ಕಲ್ಪನೆ ಮೂಡಿ, ಅದನ್ನು ತಾವೂ ಧರಿಸಿದರು, ಇತರರಿಗೂ ಕೊಟ್ಟು ಇದನ್ನೇ ಗಣಲಾಂಛನವಾಗಿಟ್ಟುಕೊಂಡ ಒಂದು ಜಾತ್ಯಾತೀತ ಸಮಾಜ–ಶರಣ ಸಮಾಜ ರಚಿಸಿದರು.

ಬಸವಣ್ಣನವರು ವೀರಶೈವರಲ್ಲ; ಪಂಚಾಚಾರ್ಯರ ಮತಕ್ಕೂ ಅವರಿಗೆ ಯಾವ ಸಂಬಂಧವೂ ಇಲ್ಲ ಎಂಬುದಕ್ಕೆ ಇನ್ನೊಂದು ವಾದವನ್ನು ಮಂಡಿಸುತ್ತೇನೆ. ಒಬ್ಬ ವ್ಯಕ್ತಿ ನಮಾಜ್ ಮಾಡುತ್ತಾನೆ, ಕುರಾನ್ ಓದುತ್ತಾನೆ, ಮಸೀದಿಗೆ ಹೋಗುತ್ತಾನೆ, ಅಲ್ಲಾಹನನ್ನಷ್ಟೆ ಕೊಂಡಾಡುತ್ತಾನೆ. ಈತ ಯಾರು ? ಮುಸ್ಲಿಂ. ಹಾಗೆಯೇ ಒಬ್ಬ ಸ್ವಾಮಿ, ಸ್ಥಾವರಲಿಂಗ ಪೂಜೆ ಮಾಡುತ್ತಾನೆ, ರುದ್ರಾಭಿಷೇಕ ಮಾಡುತ್ತಾನೆ, ಪಂಚಾಮೃತಾಭಿಷೇಕ ಮಾಡುತ್ತಾನೆ, ಜಾತಿ ಪದ್ಧತಿ ಮನ್ನಿಸುತ್ತಾನೆ (ಅದು ಬ್ರಾಹ್ಮಣ ಮುಂತಾದ 4 ವರ್ಣದಾ ಧಾರದಲ್ಲೇ ಇರಲಿ, ಭಕ್ತ-ಮಾಹೇಶ ಎಂಬ ಎರಡು ವರ್ಗವೇ ಇರಲಿ) ವೇದಾಗಮಗಳನ್ನೇ ಧರ್ಮಶಾಸ್ತ್ರ ಎನ್ನುತ್ತಾನೆ, ಬಹುದೇವತೋಪಾಸನೆ ಮಾಡುತ್ತಾನೆ. ಈತ ಯಾರು ? ವೀರಶೈವ. ಪಂಚಾಚಾರ್ಯ ಪಂಥೀ

Digitalized by e-Sahithya Documentation Forum
Sponsored by Sarayu Foundation Trust

ಯರ ಆಚರಣೆಗಳು ಹೀಗೇ ಇವೆ. ಅಂದಾಗ, ಸ್ಥಾವರಲಿಂಗೋಪಾಸನೆ ಮಾಡದ, ರುದ್ರಾಭಿಷೇಕ ಒಪ್ಪದ, ಜಾತಿ ಪದ್ಧತಿ ಮನ್ನಿಸದ, ವೇದಾಗಮಗಳನ್ನು ತನ್ನ ಧರ್ಮಶಾಸ್ತ್ರವೆನ್ನದ, ಏಕದೇವೋಪಾಸಕ ವ್ಯಕ್ತಿಯನ್ನು ಅದೆಂತು ವೀರಶೈವ ಎನ್ನಲು ಸಾಧ್ಯ ? ಆದ್ದರಿಂದ ಬಸವಣ್ಣನವರನ್ನು ವೀರಶೈವರೆಂದು ಕರೆಯದೆ, ತಮಗೆ ಯಾವ ರೀತಿಯಲ್ಲೂ ಸಂಬಂಧಿಸದ ವ್ಯಕ್ತಿ ಎಂದು ಪಂಚ ಪೀಠಾಧೀಶರು ಭಾವಿಸಿದರೆ ನಾವು ನೆಮ್ಮದಿಯಾಗಿ ಇರಬಹುದು. “ಬೆರಣಿಯನಾಯಲು ತೆರಹಿಲ್ಲವೆನಗೆ ಅಟ್ಟುಣ್ಣುವುದು ಯಾವಾಗ ?” ಎಂದು ಧರ್ಮಪಿತರು ಹೇಳುವಂತೆ, ಬರೀ ಧರ್ಮಸ್ಥಾಪಕರು ಯಾರು ? ಎಂದು ಕಚ್ಚಾಡುವುದರಲ್ಲಿ ವಾದ-ವಿವಾದ ಮಾಡುವುದರಲ್ಲಿ ಕಾಲ ಕಳೆಯಲು ಬೇಸರಿಕೆ ಬರುತ್ತದೆ. ಈ ಪಂಚಾಚಾರ್ಯರು ಬಾರಿ ಬಾರಿಗೂ ಕೆದರದೆ ಇದ್ದರೆ ನಾವು ಸಮಯವನ್ನು ಬೇರೆ ವಿಧಾಯಕ ಕಾರ್ಯಗಳಿಗೆ ಬಳಸಬಹುದು. ಈ ಬರಹವನ್ನು ಬರೆಯುವ ಈ ಸಮಯ ಮತ್ತು ಪುಟಗಳನ್ನು ವಚನಗಳನ್ನು ವಿಶ್ಲೇಷಣೆ ಮಾಡಲು ಬಳಸಿದರೆ ಜನರಿಗೂ ಪ್ರಯೋಜನ, ನಮಗೂ ಶಾಂತಿ.

ಇಂಥಾ ಲೇಖನಗಳಲ್ಲಿ ಲಿಂಗಾಯತೇತರ ವಚನ ಸಾಹಿತ್ಯಾಸಕ್ತರಾದವರಿಗೆ ಎಷ್ಟೂ ಆಸಕ್ತಿ ಇರದು. ಅವರಿಗೆ ವಚನ ಸಾಹಿತ್ಯದ ಅಮೃತದೂಟ ಬೇಕು. ಆದರೆ ನಾವು ಅನಿವಾರ್ಯವಾಗಿ ಲೇಖನ ಬರೆದು ಉತ್ತರಿಸಬೇಕಾಗುತ್ತದೆ. ಎದುರಾಳಿ ಭುಜಗೆಪರಿ ಜಗಳಕ್ಕೆ ನಿಂತಾಗ, ಐತಿಹಾಸಿಕ ತಾತ್ವಿಕ ಆಧಾರ ಇರುವ ಬಸವ ಭಕ್ತರು ಸುಮ್ಮನಿರಲಾದೀತೆ ? ಸೋಕ್ರಟೀಸ್‌ನಂತಹ ಮಹಾಜ್ಞಾನಿಯನ್ನು ಸಂದರ್ಶಿಸಲು ದೇಶ ವಿದೇಶಗಳಿಂದ ತತ್ತ್ವಜ್ಞಾನಿಗಳು ಬರುತ್ತಿದ್ದರೆ, ಗಯ್ಯಾಳಿಯಂಥ ಹೆಂಡತಿ ಅವನ ವ್ಯಕ್ತಿತ್ವವನ್ನರಿಯದೆ ಹೀನವಾಗಿ ಬಯ್ಯುತ್ತಿದ್ದಳಂತೆ. ಈ ಗುರು ವರ್ಗದ ಜನರೂ ಅಂಥ ಗಯ್ಯಾಳಿ ಮಹಿಳೆಯಂತೆ ಇದ್ದಾರೆ ! ಏಕೆಂದರೆ ದೇಶ ವಿದೇಶಗಳವರು ಪರಭಾಷೆಯುವರು, ಲಿಂಗಾಯತೇತರರೂ ಹೆಚ್ಚಿನ ಆಸಕ್ತಿ ತಳೆದು ಬಸವಣ್ಣನವರನ್ನು, ವಚನ ಸಾಹಿತ್ಯವನ್ನು ಅಧ್ಯಯನ–ವಿಶ್ಲೇಷಣೆ ಮಾಡಿ ಬೆರಗಾಗುತ್ತಿದ್ದರೆ. ಇವರು ಲಿಂಗಾಯತ ಸಮಾಜದ ಮನೆಯೊಳಗೆ ಸೇರಿಕೊಂಡು, ವಚನ ಸಾಹಿತ್ಯವೆಂಬ ಆ ಮಹಾ ಗುರು ಕೊಟ್ಟ ಅನ್ನವನ್ನೆ ತಿಂದು, ಬಸವಣ್ಣ ಗುರುವಲ್ಲ ಮುಂತಾಗಿ ನಿಂದಿಸುತ್ತಾರೆ. ಜಾತಿವಾದಿಗಳಾಗಿ ವಿ ಚಾ ರ ಮಾಡಿದರೂ ಬಸವಣ್ಣನವರು ಹುಟ್ಟು ಬ್ರಾಹ್ಮಣರಾದ ಕಾರಣ ಗುರುವು; ಇನ್ನು ತತ್ತ್ವವಾದಿಗಳಾಗಿ ನೋಡಿದರಂತೂ ಅವರು ಮಹಾಗುರುವು; ವಿಶ್ವ ಗುರುವು.

ಈ ಪಂಚ ಪೀಠಾಧೀಶರದು ಇನ್ನೊಂದು ವಿಶೇಷ. ಇವರು ಮನೆಗೆ ಮಾತ್ರ ಮಾರಿಗಳು, ಪರರಿಗೆ ಉಪಕಾರಿಗಳಲ್ಲವೋ ಅಹುದೋ ನಮಗೆ ತಿಳಿಯದು ಹೇಗೆಂದರೆ, ಇವರು ತಮ್ಮ ಪೀಠಗಳು ಅಲ್ಲಿವೆ ಇಲ್ಲಿವೆ, ಹೊರ ರಾಜ್ಯಗಳಲ್ಲಿವೆ ಎಂದು ಕೊಚ್ಚಿ

ಕೊಳ್ಳುವರು. ಲಿಂಗೋದ್ಭವ ಆಚಾರ್ಯರು ಎಲ್ಲೆಲ್ಲೋ ಉದ್ಭವವಾದಂತೆ ಬಣ್ಣಿಸುವರು. ಆದರೆ ಇವರನ್ನು ಹೊರುವವರು ಕರ್ನಾಟಕದ(ಹಳ್ಳಿ) ಭಕ್ತರು. ಹೊರ ರಾಜ್ಯಗಳಲ್ಲಿ ಇವರು ಎರಡು ಮೂರು ಊರು ಬಿಟ್ಟರೆ ಏನೂ ಪರಿಚಯವಿಲ್ಲದವರಾಗಿದ್ದಾರೆ. ಕರ್ನಾಟಕದ ಲಿಂಗವಂತ ಸಮಾಜದಲ್ಲಿ ಅಡ್ಡಾಡುತ್ತ ಬಸವ ಭಕ್ತಿಯನ್ನು ಕೆಡಿಸಲು ಸತತವಾಗಿ ಯತ್ನ ಮಾಡುತ್ತಾರೆ. ಲಿಂಗಧಾರಣೆ, ವಿಭೂತಿಧಾರಣೆ ಬಿಡಿಸುವ ಆಕರ್ಷಣೀಯ ಪಂಥಗಳು ಒಂದು ಕಡೆ, ಆಚಾರವನ್ನು ಬಿಟ್ಟು ಅನಾಚಾರದ ಪಥವನ್ನು ಬೋಧಿಸುವ ಅವಧೂತ ಮಾರ್ಗಿಗಳು ಇನ್ನೊಂದು ಕಡೆ, ಇವರೆಲ್ಲರೂ ಲಿಂಗಾಯತ ಸಮಾಜವನ್ನು, ಸಂಸ್ಕೃತಿಯನ್ನು ಘಾಸಿಗೊಳಿಸುತ್ತಿದ್ದರೂ ಆ ಬಗ್ಗೆ ಚಕಾರ ಎತ್ತದೆ, ಸಮಾಜದ ಶಿಥಿಲತೆ ಬಗ್ಗೆ ಎಷ್ಟೂ ಚಿಂತೆ ಮಾಡದೆ, ಅಡ್ಡ ಪಲ್ಲಕ್ಕಿಯ ಹೀರೋಗಳಾಗಿ ಮೆರೆಯುವ ಇವರು ಬಸವಣ್ಣನವರ ಕುರಿತು ಇರುವ ಭಕ್ತಿಯನ್ನು ಕೆಡಿಸುವಲ್ಲೇ ಆಸಕ್ತರು ಎಂದರೆ ಮನೆಗೆ ಮಾರಿಗಳಲ್ಲವೆ ?

ಭಿನ್ನ ವಿಚಾರಧಾರೆಯುವರಾದ ಮತ್ತು ಬಸವ ತತ್ತ್ವಕ್ಕೆ ತದ್ವಿರುದ್ಧವಾದ ಆಚರಣೆ ಹೊಂದಿದ ಇವರೊಂಡ ಧಾರ್ಮಿಕ–ಸಾಮಾಜಿಕ ಸಖ್ಯ ಮನೆಯೊಳಕ್ಕೆ ಹಾವು ಹೊಕ್ಕಂತೆ. ಹೊರಗಡೆ ನೂರಾರು ಹಾವುಗಳಿದ್ದರೂ ಭಯವಾಗದು; ಮನೆಯೊಳಗೆ ಹಾವು ಹೊಕ್ಕಾಗ ಮನುಷ್ಯನಿಗೆ ಹೇಗೆ ಉಂಡದ್ದು ರುಚಿ ಎನಿಸದೋ, ನಿದ್ರೆ ಹತ್ತದೋ ಹಾಗಾಗುವುದು ಕೆಲವು ವಿರಕ್ತರಿಗೂ ಬಸವಾದಿ ಪ್ರಮಥರು ಕಹಿ ಗುಳಿಗೆಗಳೇ. ಸ್ವಚ್ಛಂದವಾಗಿರಬೇಕೆನ್ನುವ ಹುಡುಗರಿಗೆ ಮನೆಯಲ್ಲಿ ಒಂದು ಹಿರಿಯ ಜೀವ ವಿವೇಕದ ಪ್ರತಿನಿಧಿಯಾಗಿ ಇದ್ದು ಹೀಗೆ ಮಾಡಬೇಡಿ, ಹಾಗೆ ಮಾಡಬೇಡಿ, ಹೀಗಿರಿ ಎಂದು ಹೇಳಿದಾಗ ಎಷ್ಟು ಚಟುಪಟಿಕೆಯಾಗುವುದೋ, ಆ ಮುದುಕರು ಬೇಡವಾಗುವರೋ ಹಾಗೆ ಬ ಸ ವ ಣ್ಣ ಕೆಲವರಿಗೆ ಬೇಡ. ಒಬ್ಬ ಸ್ವಾಮಿಗಳು ಪಕ್ಕಾ ಸದಾ ಪಂಚಾಂಗ, ಇನ್ನೊಬ್ಬರು ಗಣಪತಿ ಪೂಜಕರು, ಮತ್ತೊಬ್ಬರು ಮಠದಲ್ಲಿ ಚೌಡೇಶ್ವರಿಯನ್ನು ಇಟ್ಟವರು; ಮಗದೊಬ್ಬರು ಲಕ್ಷ್ಮಿ ಕಂಭ ಮಠದಲ್ಲಿ ನೆಟ್ಟು ಪೂಜಿಸುವವರು, ಇನ್ನೊಬ್ಬರು ವೀರಭದ್ರನ ಆರಾಧಕರು, ಮತ್ತೊಬ್ಬರು ದೇವಿ ಪುರಾಣದ ಪಾಠಕರು, ಮತ್ತೊಬ್ಬರು ಹುಟ್ಟಿನಿಂದ ಶ್ರೇಷ್ಠತ್ವ ಪ್ರತಿಪಾದಿಸುವವರು, ಇವರನ್ನೆಲ್ಲ ಬಸವಣ್ಣ ವಚನ ಸಾಹಿತ್ಯದ ಬಾರುಕೋಲು ಹಿಡಿದುಕೊಂಡು ಬೆನ್ನು ಹತ್ತಿದರೆ ಅವರು ಯಾಕೆ ಸಹಿಸಿಕೊಂಡಾರು ? ವಿರಕ್ತ ಪರಂಪರೆಯ ಮೂಲಿಗೆ ಬಸವಣ್ಣ ಕಣಪ್ಪ ಎಂದು ಪ್ರಭುದೇವರು; ಸಿದ್ಧರಾಮೇಶ, ಚನ್ನ ಬಸವಣ್ಣ, ಸಿದ್ಧಲಿಂಗೇಶ್ವರರು, ಷಣ್ಮುಖ ಶಿವಯೋಗಿಗಳು ಬೇರೆ ನೆನಪಿಸಿ ನೆನಪಿಸಿ ಫಜೀತಿ ಮಾಡುತ್ತಿರುವರು. ಹೀಗಾಗಿಯೇ ಕೆಲವರು ಪಕ್ಷಾಂತರ ಮಾಡಿ ಪಂಚಾಚಾರ್ಯ ವಾದದ ಬಲದಿಂದ ಬಸವಣ್ಣನವರನ್ನು ಕೈ ಬಿಡುವ ಯೋಜನೆ ಹಾಕಿದ್ದರೂ ಹಾಕಬಹುದು. ಅದೂ ಹಿತಕಾರಿಯೆ !

Digitalized by e-Sahithya Documentation Forum
Sponsored by Sarayu Foundation Trust

"ನೀವು ಈ ರೀತಿ ಹಟ ಮಾಡದೆ ರೇಣುಕಾಚಾರ್ಯರನ್ನೇ ಸ್ಥಾಪಕರು ಎಂದೊಪ್ಪಿದರೆ ನಿಮಗೆ ಲಕ್ಷಾಂತರ ರೂಪಾಯಿಯ ದೇಣಿಗೆ ಕೊಡುತ್ತೇವೆ. ಈಗ ಅದಕ್ಕೇ ಯಾವ ಸಹಕಾರವನ್ನೂ ಮಾಡುತ್ತಿಲ್ಲ."

"ನಿಮ್ಮ ಹಣಕ್ಕಾಗಿ ತತ್ತ್ವವನ್ನು, ಸತ್ಯವನ್ನು ಮಾರಿಕೊಳ್ಳುವವರು ನಾವಲ್ಲ. ಇತಿಹಾಸಕ್ಕೆ ವಿರುದ್ಧವಾದ ಕಾಗಕ್ಕ ಗುಬ್ಬಕ್ಕನ ಕಥೆ ಹೇಳಿ ರಂಜಿಸಲು ನಮಗೆ ಬರದು. ನೀವು ಹಣ ಕೊಡದಿದ್ದರೆಷ್ಟೇ ನಿಜವಾದ ಇತಿಹಾಸವನ್ನು ತಿಳಿದುಕೊಳ್ಳಿರಿ...." ಎಂದೆನು.

"ನೀವು ಇಷ್ಟು ಹಟವಾದಿಗಳೇ ?" ಅವರೆಂದರು.

"ಹಟವಾದಿಗಳಲ್ಲ ತತ್ತ್ವವಾದಿಗಳು."

"ನೀವು ಹೀಗೇ ಪಟ್ಟು ಹಿಡಿದರೆ ಮುಂದೆ ನಿಮ್ಮ ಪ್ರವಚನಗಳು ಹೇಗಾಗುತ್ತವೋ ನೋಡಿಯೇ ಬಿಡುತ್ತೇವೆ. ಪ್ರವಚನ ಮಾಡ್ರಿ ನೋಡೋಣ." ಎಂದರು ಬೆದರಿಕೆ ಹಾಕುವ ದನಿಯಲ್ಲಿ. ಆಗ ನಾನಂದೆ,

"ಇದು ಪ್ರಜಾಪ್ರಭುತ್ವ ಸರ್ವಾಧಿಕಾರಿಶಾಹಿಯಲ್ಲ; ತಮ್ಮ ತಮ್ಮ ಅಭಿಪ್ರಾಯ ಹೇಳಲು ಎಲ್ಲರಿಗೂ ಹಕ್ಕಿದೆ. ಮೇಲಾಗಿ ನಾವು ಬಳೆ ತೊಟ್ಟಿಲ್ಲ. ರುದ್ರಾಕ್ಷಿ ಕಂಕಣ ಕಟ್ಟಿದ್ದೇವೆ; ಗುರು ಬಸವಣ್ಣನ ಶ್ರೀರಕ್ಷೆ ಇದೆ." ಎಂದು ಫೋನ್ ಇಟ್ಟು ನಡೆದೆ. ನಮ್ಮ ಪ್ರವಚನಗಳು ನಡೆದಿವೆ, ನಡೆಯುತ್ತಲೇ ಇರುತ್ತವೆ. ಹೀಗೆ ಆಮಿಷ, ಬೆದರಿಕೆ ಎಲ್ಲ ತಂತ್ರಗಳನ್ನೂ ಆ ವ್ಯಕ್ತಿ ಅನುಸರಿಸಿದರು. (ಉದ್ದೇಶಪೂರ್ವಕವಾಗಿ ಅವರ ಹೆಸರನ್ನು ನಾನು ಕಾಣಿಸಿಲ್ಲ.)

ಪಂಚ ಪೀಠಾಧೀಶರ ಪ್ರೇರಣೆ ಇರುವುದೋ ಅಥವಾ ಅವರ ಪರವಾಗಿ ಅವರ ಭಕ್ತರು ಮಾಡುವರೋ ತಿಳಿಯದು. ಅವರು ಅನೇಕ ಬಾರಿ ಅಡ್ಡ ಪಲ್ಲಕ್ಕಿ ವೈಭವ ಪ್ರದರ್ಶಿಸಿರುತ್ತಾರೆ. ಆಗ ಬಸವ ಭಕ್ತರು ತಮಗೆ ಇಷ್ಟವಿಲ್ಲದಿದ್ದರೂ, ಸುಮ್ಮನೇ ತಮ್ಮ ಪಾಡಿಗೆ ತಾವಿರುತ್ತಾರೆ. ಪಂಚಾಚಾರ್ಯ ಭಕ್ತರಿರುವ ಕೆಲವು ಊರುಗಳಲ್ಲಿ ನಮ್ಮ ಪ್ರವಚನಗಳು ಯಶಸ್ವಿಯಾಗಿ, ಜನ ಜಾಗೃತಿಯಾದರೆ ಸಂಕಟ ಪಟ್ಟು ಕೆಡಿಸಲು ಮುಂದಾಗುತ್ತಾರೆ. ಕೆಡಿಸಲು ಸಾಧ್ಯವಾಗದೆ ಪ್ರವಚನ ಇನ್ನಷ್ಟು ಚೆನ್ನಾಗಿ ಆಗುವುದು ಒಂದು ವಿಶೇಷ. 1991 ರ ಫೆಬ್ರವರಿ–ಮಾರ್ಚ್‌ನಲ್ಲಿ ರಾಣೇಬೆನ್ನೂರಿನಲ್ಲಿ ಪ್ರವಚನ ಅತ್ಯಂತ ಯಶಸ್ವಿಯಾದಾಗ ಕೆಡಿಸಲು ಬಂದು ಮುಖಭಂಗಿತರಾದರು; ಕೆಲವರೇ ಗುರುವರ್ಗದ ಪರಂಪರೆಯ ಅಯ್ಯನವರ ನೇತೃತ್ವದಲ್ಲಿ ಬಂದ ಪಂಚ ಮಸಾಲೆಯ ಹಿಂ-ಬಾಲಕರಲ್ಲಿ ಕೆಲವರು ಪರಿವರ್ತನೆಗೊಂಡು ಕಾಣಿಕೆಗಳನ್ನೂ

ಕೊಟ್ಟರು. ಸೊಲ್ಲಾಪುರ ಪ್ರವಚನವು ಒಂದು ಅದ್ಭುತ ಯಶಸ್ಸನ್ನು ಕಂಡಿತು. ಮಾತನಾಡುವಷ್ಟು ಕನ್ನಡ ಜ್ಞಾನ ಹೊಂದಿ, ಕನ್ನಡ ಓದಲು ಬರದ ಆದರೆ ಭಕ್ತಿ ನಿರ್ಭರತೆಯಿಂದ ಕೂಡಿದ ಜನ ಸೊಲ್ಲಾಪುರದವರು. ಪೂಜ್ಯ ಅಪ್ಪಾಜಿಯವರ ಪ್ರವಚನದ ಜ್ಞಾನಶ್ರೀ, ವಾಗ್ವೈಖರಿ, ಕಳಕಳಿಗೆ ಶರಣಾದರು. 800 ವರ್ಷಗಳ ಬಳಿಕ ಬಸವವಾಣಿ, ಸಿದ್ಧರಾಮವಾಣಿ ಮೊಳಗಿದವು. ಲಿಗಾಡೆ, ವಾರದ, ಕಾಡಾದಿ, ಮಡಕಿ ಹೀಗೆ ಕೆಲವು ಮನೆತನಗಳು ಬಸವ ಭಕ್ತಿ-ಶರಣ ಸಂಸ್ಕೃತಿಯ ಸಿರಿಯನ್ನು ಉಳಿಸಿಕೊಂಡು ಬಂದಿದ್ದುವು. ಬಹುಶಃ ಆದಿ ಶರಣರು ಮಾತ್ರವಲ್ಲ ಇತ್ತೀಚೆಗಷ್ಟೇ ಆಗಿ ಹೋದ ಶರಣೆ ಜಯದೇವಿ ತಾಯಿ ಲಿಗಾಡೆ, ಶರಣ ನಾಗಪ್ಪಣ್ಣ ಕಾಡಾದಿ, ಶರಣ ಬಾಬಾ ಸಾಹೇಬ ವಾರದ ಮುಂತಾದವರ ಹೃದಯದಲ್ಲಿ ಆ ನೋವಿನ ಘಟನೆ ಅಚ್ಚಳಿಯದ ಗಾಯವನ್ನು ಮೂಡಿಸಿತ್ತು. ಅದೆಂದರೆ, ಅಡ್ಡ ಪಲ್ಲಕ್ಕಿಯಲ್ಲಿ ಬರುತ್ತಿರುವಾಗ ಮೇಲೆ ಸ್ವಾಗತ ಕಮಾನಿಗೆ ಕಟ್ಟಿದ್ದ ಬಸವ ಪಟ (ಫೋಟೋ) ವನ್ನು ಅಂದಿನ ರಂಭಾಪುರ ಶ್ರೀಗಳು ಕಿತ್ತಿಸಿ, ಕೆಳಗೆ ಹಾಕಿಸಿದ್ದು.

ಈಗ, ಸುಮಾರು 60 ದಿವಸಗಳ ಕಾಲ ನಡೆದ ಪ್ರವಚನದಿಂದ ಬಸವ ತತ್ತ್ವ, ವಚನ ಸಾಹಿತ್ಯ ಸೌರಭ ಚೆಲ್ಲವರಿದಿದ್ದವು. ಜನರು ಸ್ವಧರ್ಮದ ಶ್ರೇಷ್ಠತೆ ತಿಳಿದು ಬೆರಗಾದರು. ತನು ಮನ ಧನದಿಂದ ಸಹಾಯ ಮಾಡಿದರು. ಬಂತು ನೋಡಿ ಪಂಚಾಚಾರ್ಯ ಪ್ರಭೃತಿಗಳಿಗೆ ಸಂಕಟ. ಇಷ್ಟು ದಿವಸಗಳ ಕಾಲ ಅವರು ಬಂದು ಪಲ್ಲಕ್ಕಿ ಏರಿ, ಬಸವ ನಿಂದೆ ಮಾಡಿ ಮೆರೆದು ಹೋದರೂ ಬಸವ ಭಕ್ತರಾರೂ ಅವರಿಗೆ ತೊಂದರೆ ಮಾಡಲು ಹೋಗಿದ್ದಿಲ್ಲ. ಏಕೆಂದರೆ ಇವರು ಸಭ್ಯರು, ಸುಸಂಸ್ಕೃತರು. ಬಹುಶಃ ತಪ್ಪು ಬಸವಣ್ಣನವರದೇ ಇರಬೇಕು ಅವರೇಕೆ ನಮಗೆ "ಮೃದು ವಚನವೇ ಸಕಲ ಜಪಂಗಳು, ಮೃದು ವಚನವೇ ಸಕಲ ತಪಂಗಳು ಸದುವಿನಯವೇ ಸದಾಶಿವನ ಒಲುಮೆ ಎಂದು ಕಲಿಸಬೇಕಿತ್ತು ಅಲ್ಲವೆ ?

ಪ್ರವಚನ ನಿಲ್ಲಿಸಬೇಕು, ಕೆಡಿಸಬೇಕು ಎಂದು ದಿ|| 17-3-92 ರಂದು ಗುಂಪು ಕಟ್ಟಿಕೊಂಡು ಬಂದರು. [ಪ್ರಸಂಗ ಬಹಳ ಆಸಕ್ತಿ ಕಾರಕವಾಗಿದೆ, ಸಮಯ ಸಿಕ್ಕಿದಾಗ ಬರೆಯುತ್ತೇನೆ] ಗದ್ದಲ ಹಾಕುತ್ತಿದ್ದವರಿಗೆ ಹೇಳಿದೆ. "ಯಾರ ಕಾರ್ಯಕ್ರಮವನ್ನೂ ಯಾರೂ ಕೆಡಿಸಲೂ ಹಕ್ಕಿಲ್ಲ. ನಾವು ವೇದಿಕೆ ರಚಿಸಿಕೊಂಡು ಹೇಳುತ್ತೇವೆ. ನಿಮ್ಮೂರಲ್ಲಿ ಮೈದಾನ ಇರಲಿಲ್ಲವೆ ? ನೀವೂ ಏಕೆ ನಿಮಗೆ ತಿಳಿದುದು ಹೇಳಬಾರದಿತ್ತು ? ನಮ್ಮ ವೇದಿಕೆ ಮೇಲೆ ಅವಕಾಶ ಕೊಡಲು ನಿರಾಕರಿಸುವ ಹಕ್ಕು ನಮಗಿದ್ದರೂ, ಸೌಜನ್ಯಕ್ಕಾಗಿ ಅವಕಾಶ ಕೊಡುತ್ತೇವೆ. ಬನ್ನಿ, ನಿಮ್ಮಲ್ಲಿ ಯಾರಿದ್ದೀರಿ ಪಂಡಿತರು ಕುಳಿತುಕೊಳ್ಳಿ, ಕುರ್ಚಿ ಹಾಕುತ್ತೇವೆ. ಮೈಕ್ ನಿಮಗೆ ಕೊಡುತ್ತೇವೆ;

Digitalized by e-Sahithya Documentation Forum
Sponsored by Sarayu Foundation Trust

ನಿಮ್ಮ ಪ್ರಶ್ನೆಗಳನ್ನು ಒಂದೊಂದಾಗಿ ಕೇಳಿ ನಾನು ಉತ್ತರಿಸುವೆ. ನೀವು ಕೇಳುವುದು ಮುಗಿದ ಮೇಲೆ ನಾನು ಪ್ರಶ್ನೆ ಕೇಳುವೆ. ಆಗ ನೀವು ಉತ್ತರಿಸಬೇಕು. ನೀವು 50 ಜನರಿರುವಿರಾ ? 100 ಜನ ಇರುವಿರಾ ? ಬೇಕಾದರೆ ಒಬ್ಬರಾದ ಮೇಲೆ ಒಬ್ಬರು ಕೇಳಿರಿ. ಇಡೀ ರಾತ್ರಿ ಈ ಸಂವಾದ ನಡೆಯಲಿ....'' ಎಂದು ಶಾಸ್ತ್ರಿಗಳನ್ನು ಕರೆದು ಮೈಕ್ ಕೊಟ್ಟೆವು. ನನ್ನ ಮಾತು ಕೇಳಿ ಹಿಂದೆ ಬಂದಿದ್ದ ಹುಡುಗರೂ ಸುಮ್ಮನೇ ಕುಳಿತರು. ಬಹಳ ಚೆನ್ನಾಗಿ ಪ್ರಶ್ನೋತ್ತರ ನಡೆದು ಒಂದೊಂದು ಪ್ರಶ್ನೆಗೆ ಉತ್ತರಿಸಿದಾಗಲೂ ಮೆತ್ತಗಾದರು. ತಮ್ಮ ಕೈ ತಾವೇ ತೋರಿಸಿ ಅವಲಕ್ಷಣ ಎನ್ನಿಸಿ ಕೊಂಡಿದ್ದರು.

"ನಿಮ್ಮ ಭಕ್ತಿಯ ಘನವ ನೀವೇ ಮೆರೆಯಲೆಂದು
ಪರವಾದಿ ಬಿಜ್ಜಳನ ತಂದೊಡ್ಡಿ"

ಎಂದು ಹೇಳುವಂತೆ ಬಸವಶಕ್ತಿ ಅಂದು ಮೆರೆಯಿತು. ಮರುದಿವಸ ಸಂಚಾರ್, ಕೇಸರಿ, ತರುಣ ಭಾರತ ಮುಂತಾದ ಮರಾಠಿ ಪತ್ರಿಕೆಗಳು ಬಹಳ ಚೆನ್ನಾಗಿ ವರದಿ ಮಾಡಿ, ಅವರು ಎಂಥಾ ಸಂಕುಚಿತವಾದಿಗಳು, ಮತಾಂಧರು ಎಂಬುದಾಗಿ ಬಣ್ಣಿಸಿದ್ದವು. ಅವರು ಗದ್ದಲ ಮಾಡಲು ಬಂದಾಗ ನಾವು ಸಭ್ಯತೆಯಿಂದ ವರ್ತಿಸಿ, ಪ್ರಶ್ನೆ ಕೇಳಲು ಮೈಕ್ ಕೊಡುವ ಮೂಲಕ ಅವಕಾಶ ಮಾಡಿಕೊಟ್ಟದ್ದನ್ನು, ನಾವು ಶಾಂತವಾಗಿ ವರ್ತಿಸಿದ್ದವು ಪತ್ರಿಕೆಗಳು ವಿಶೇಷವಾಗಿ ಕಾಣಿಸಿದ್ದವು.

ವಾದ ಮಾಡಲು ಬುದ್ಧಿ–ನಾಲಿಗೆ ಸೋತಾಗ ಕೈ ಎತ್ತಿ ಗಲಾಟೆಗಿಳಿಯುವ ಪ್ರವೃತ್ತಿಯನ್ನು ಈ ಎರಡೂ ಪ್ರಸಂಗಗಳು ಚಿತ್ರಿಸುತ್ತವೆ.

"ವೀರಶೈವ ಮಹಾಸಭೆ ಸ್ಥಾಪನೆಯಾಗಿ ೯0 ವರ್ಷಗಳಾದವು, 21 ಅಧಿವೇಶನ ನಡೆದವು. ಇನ್ನೂ ಬಸವ ಪಂಥ–ಆಚಾರ್ಯಪಂಥಗಳ ವಿವಾದ ಏಳುತ್ತಿರುತ್ತದೆ.'' ಎಂದಿದ್ದಾರೆ ಕೋ. ಚನ್ನಬಸಪ್ಪನವರು. ಅಹುದು, ಏಳುತ್ತಲೇ ಇರುತ್ತವೆ. ಏಕೆಂದರೆ ಉಭಯವಾದಿಗಳ ದೃಷ್ಟಿಕೋನದಲ್ಲಿ ಮೂಲಭೂತ, ಸೈದ್ಧಾಂತಿಕ ವ್ಯತ್ಯಾಸಗಳಿವೆ. ಈ ವ್ಯತ್ಯಾಸ ಕ್ರೈಸ್ತರ ಕೆಥೋಲಿಕ್–ಪ್ರಾಟಸ್ಟೆಂಟ್, ಬೌದ್ಧರ ಹೀನಯಾನ–ಮಹಾಯಾನಕ್ಕಿಂತಲೂ ದೊಡ್ಡವು. ಆದ್ದರಿಂದ, ಬದಲಾಗುತ್ತಿರುವ ವೈಜ್ಞಾನಿಕ ಪರಿಸರ, ಚಿಂತನೆಯ ಹಿನ್ನೆಲೆ ಬಸವ ತತ್ತ್ವವು ಗತಿಶೀಲತೆಯಿಂದಾಗಿ ಇಂದು ಬೇಕಾಗಿದೆ. ಲಿಂಗಾಯತರಿಗೆ ಮಾತ್ರವಲ್ಲ ಇಡೀ ರಾಷ್ಟ್ರಕ್ಕೆ, ಮನುಕುಲಕ್ಕೆ ಬೇಕಾಗಿದೆ. ಇಂಥಾ ಅಂತರರಾಷ್ಟ್ರೀಯ ಮಾರುಕಟ್ಟೆಯಿರುವ ಬೆಲೆಬಾಳುವ ನಾಣ್ಯವನ್ನು ಪೌರಾಣಿಕ ದೃಷ್ಟಿಕೋನದ ಜಾತಿ–ವಂಶವಾದಿಗಳ ಪಂಥದ, ಅಪಮೌಲ್ಯ (devalued) ಹೊಂದಿರುವ ಸವಕಳಿ ನಾಣ್ಯಗಳೆಂಬ ಪಂಚಾಚಾರ್ಯ ತತ್ತ್ವಗಳ ತಗ್ಗಿನಲ್ಲಿ ಹಾಕಲು

ಯಾವ ವಿಚಾರಶೀಲ ಬಯಸಿಯಾನು ? ಆದ್ದರಿಂದ, ಈ ಸಮಸ್ಯೆಗೆ ಪರಿಹಾರ ಕಂಡು ಕೊಳ್ಳಬೇಕು, ಪುನಃ ಪುನಃ ಈ ಕಚ್ಚಾಟ ಆಗಬಾರದೆಂದಿದ್ದರೆ ಮುಂದಿರುವುದು ಒಂದೇ ದಾರಿ.

೧. ಗುರುವರ್ಗದ ಸಿಂಹಾಸನಾಧೀಶ್ವರರು 'ಬಸವಣ್ಣ' ಎಂಬ ವ್ಯಕ್ತಿ ಇದ್ದರು, ಆಗಿಹೋದರು ಎಂಬುದನ್ನು ಮರೆತುಬಿಡುವುದು-ಅವರು ಹೊಗಳುವುದು ಬೇಡ, ತೆಗಳುವುದೂ ಬೇಡ.

೨. ವಚನ ಸಾಹಿತ್ಯವನ್ನು ಮರೆತೂ ಸಹ ಉಲ್ಲೇಖಿಸದೆ, ತಮ್ಮ ಸಾಹಿತ್ಯ ವೇನಿದೆಯೋ ಅದನ್ನು ಪ್ರತಿಪಾದಿಸಿಕೊಳ್ಳುವುದು. ಪಂಚಪೀಠಾಧೀಶರು ಅವರ ಪಂಥದ ಪಂಡಿತರು ಕುಳಿತು ವಿಶ್ವಗುರು ಬಸವಣ್ಣ ಅವರ ಪರಂಪರೆಯ ಶರಣರು ಮತ್ತು ಇವರು ಕೊಟ್ಟ ವಚನ ಸಾಹಿತ್ಯ ಇವುಗಳನ್ನು ಸಂಪೂರ್ಣವಾಗಿ ಕೈಬಿಟ್ಟು, ಇವೆರಡೂ ಇರದಿದ್ದರೆ, ಇವರು ಹೇಳುವ ವೀರಶೈವ ಮೊದಲೇ ಇದ್ದಿದ್ದರೆ, ಅವನ್ನು ಪ್ರತಿಪಾದಿಸಿ ಶಾಸ್ತ್ರಗಳನ್ನು ರಚಿಸಿಕೊಳ್ಳಲಿ, ಬೋಧಿಸಿಕೊಳ್ಳಲಿ.

ಇತ್ತ ಧರ್ಮಗುರು ಬಸವಣ್ಣ–ಧರ್ಮಶಾಸ್ತ್ರ ವಚನ ಸಾಹಿತ್ಯ ಎಂಬ ಎರಡು ಹಳ್ಳಿಗಳ ಮೇಲೆ, ಜಾತ್ಯತೀತವಾಗಿ ರೂಪುಗೊಂಡ ಒಂದು ಶುದ್ಧ ಶರಣ ಸಮಾಜ, ಓಡುವಂತಾಗಲಿ. ಒಂದೇ ಮನೆಯಲ್ಲಿದ್ದು ಹೀಗೆ ಬಾರಿಬಾರಿಗೆ ಚರ್ಮ ರೋಗದ ತುರಿ ತೊಂದರೆಕೊಡುವಂತೆ ಪಂಚಾಚಾರ್ಯವಾದಿಗಳು ತೊಂದರೆಕೊಡುವುದು ಬೇಡ. ಅವರು ಹೊರಗೆ ಹೋಗಿ ನೆರೆಮನೆಯವರಂತೆ ಇರಲಿ. ಏಕೆಂದರೆ ಹೊರಗಿನ ಶತ್ರುವಿಗಿಂತಲೂ ಒಳಗಿನ ಶತ್ರುಗಳು ಬಹಳ ಅಪಾಯಕಾರಿ. ಬಸವ ತತ್ತ್ವಕ್ಕೆ ಇಂದು ಕುತ್ತು ಇರುವುದು ಬ್ರಾಹ್ಮಣ ಪುರೋಹಿತ ಶಾಹಿಯಿಂದಲ್ಲ. ಅವರು ವಚನ ವಾಙ್ಮಯ ಕ್ಷೇತ್ರಕ್ಕೆ ಅಮೂಲ್ಯಕೊಡುಗೆ ಕೊಟ್ಟಿದ್ದಾರೆ. ಕುತ್ತು ಇರುವುದು ವೀರಶೈವ ಪುರೋಹಿತಶಾಹಿಯಿಂದ. ಬ್ರಾಹ್ಮಣ ವಿದ್ವಾಂಸರು ಅತ್ಯಮೂಲ್ಯ ಗ್ರಂಥಗಳನ್ನು ನೀಡಿದ್ದರು. ಇವರು ವಚನ ಸಾಹಿತ್ಯದಲ್ಲಿ ವಿಷ ಬೀಜಗಳನ್ನು ತೂರಿಸಿ ಅಪಾಯವನ್ನು ಒಡಿದ್ದಾರೆ.

ಆಚಾರ್ಯ ಪಂಥೀಯರು ಮನೆಯಿಂದ ಆಚೆಗೂ ಹೋಗರು; ಬಸವ ತತ್ತ್ವವನ್ನು ವಿಕೃತಗೊಳಿಸುವ ಹವ್ಯಾಸವನ್ನೂ ಬಿಡರು. ಆದ್ದರಿಂದ ನಾವೇ ನಮ್ಮ ಅಪ್ಪ (ಧರ್ಮಗುರು ಬಸವಣ್ಣ) ಅಮ್ಮ (ಧರ್ಮಶಾಸ್ತ್ರ ವಚನಶಾಸ್ತ್ರ)ರನ್ನು ಕರೆದುಕೊಂಡು ವೀರಶೈವವಾದದ ಮುರುಕು ಮನೆ ಬಿಟ್ಟು, ಲಿಂಗಾಯತ ಧರ್ಮವೆಂಬ ಪ್ರಗತಿಪರ ಧರ್ಮದ ಮಂದಿರದಲ್ಲಿ ಸುರಕ್ಷಿತವಾಗಿರೋಣ ಹೊರಗಿನಿಂದ ಬರುವವರನ್ನು ಕರೆದು ಕೊಳ್ಳೋಣ.

Digitalized by e-Sahithya Documentation Forum
Sponsored by Sarayu Foundation Trust

ಹೆಸರಿಡುವ ಪದ್ಧತಿ

"ಅಣೆಕಟ್ಟು, ಬಡಾವಣೆ, ಬೀದಿ, ವೃತ್ತ, ಮಕ್ಕಳು, ರೇಲು ಮುಂತಾದುವುಗಳಿಗೆ ಹೆಸರಿಡುವುದರಿಂದಲೇ ಪುತ್ಥಳಿಗಳ ನಿರ್ಮಾಣದಿಂದಲೇ ಬಸವ ತತ್ತ್ವಪಾಲನೆಯಾಗದು" ಎಂದು ವ್ಯಂಗ್ಯೋಕ್ತಿಗಳನ್ನು ಕೋ. ಚನ್ನಬಸಪ್ಪನವರು ನುಡಿದಿದ್ದಾರೆ. ತತ್ತ್ವವನ್ನು ಆಚರಿಸದೆ ಹೀಗೆ ಮಾಡುವುದು ಅರ್ಥರಹಿತ ಎಂಬ ಕಳಕಳಿ ಈ ಮಾತುಗಳಲ್ಲಿದೆಯಾದರೂ, ಮಹಾತ್ಮರ ಹೆಸರುಗಳನ್ನಿಡುವುದು ಒಂದು ಸತ್ಸಂಪ್ರದಾಯ. ದೃಶ್ಯ ಪರಿಣಾಮ, ಶಬ್ದ ಪರಿಣಾಮ ತನ್ನದೇ ಆದ ಪ್ರಭಾವ ಬೀರುತ್ತವೆ. ಕಿತ್ತೂರು ಚನ್ನಮ್ಮನ ಪುತ್ಥಳಿ ನೋಡಿದ ಮಗುವಿಗೆ ದೇಶಭಕ್ತಿಯ ಒಂದು ಭಾವ ಅಂತರಂಗದಲ್ಲಿ ಅಚ್ಚೊತ್ತುತ್ತದೆ. ಬಸವಣ್ಣನವರ ಪುತ್ಥಳಿನೋಡಿದ ವ್ಯಕ್ತಿಗೆ ಸಮತಾವಾದ ಕಲ್ಪನೆ ಮೂಡುತ್ತದೆ. ಬಡಾವಣೆ, ಬೀದಿ, ಟ್ರೇನ್‌ಗಳಿಗೆ ಹೆಸರಿಡುವುದರಿಂದ ಕೊಂಚವಾದರೂ ಆಸಕ್ತಿ ಆ ವ್ಯಕ್ತಿಯನ್ನು ಕುರಿತು ಕೆರಳುತ್ತದೆ. ಯಾರಿರಬಹುದು ? ಎಂದು ಸ್ವಲ್ಪವಾದರೂ ಓದುತ್ತಾನೆ. ಇದರ ಪರಿಣಾಮದಿಂದ ಆದರ್ಶಗಳನ್ನು, ಮೌಲ್ಯಗಳನ್ನು ಅರಿಯುತ್ತಾನೆ ಮಹಾ ಪುರುಷರನ್ನು ಅನುಸರಿಸಿ, ಅವರ ತತ್ತ್ವಗಳನ್ನು ಅನುಷ್ಠಾನಿಸುವುದೇ ನಾವು ಅವರಿಗೆ ಸಲ್ಲಿಸುವ ನಿಜವಾದ ಕೃತಜ್ಞತೆ. ಆದರೆ ಅವರುಗಳ ಹೆಸರನ್ನು ನಮ್ಮ ಸುತ್ತಲಿನ ಪರಿಸರದಲ್ಲಿ ಹರಡುವಂತೆ ಮಾಡಿ, ತನ್ಮೂಲಕ ಅವರನ್ನು ಜಗತ್ತು ತಿಳಿದುಕೊಳ್ಳುವಂತೆ ಮಾಡುವುದೂ ಒಂದು ಬಗೆಯ ಕೃತಜ್ಞತೆ ಎಂಬುದನ್ನು ಮರೆಯಲಾಗದು.

—ಮಾತಾಜಿ

ಟಿಪ್ಪಣಿ

ಪ್ರಸ್ತುತ ಬರಹ ನಿಜವಾದ ಚಿಂತನೆಯಿಂದ ಕೂಡಿದೆ. ಈ ಬಗ್ಗೆ ಎರಡು ವಿವರಣೆಗಳು.

೧. ವೀರಶೈವ ಉಪಶಾಖೆಯ ಸಂಸ್ಥಾಪಕರು ಪಂಚಾಚಾರ್ಯರು ಎಂಬುದನ್ನು ಯಾರೂ ಅಲ್ಲಗಳೆಯಲಾರರು ಎಂದಿದ್ದಾರೆ ಲೇಖಕರು. ಸಪ್ತಶೈವಗಳಲ್ಲಿ ಒಂದಾದ ವೀರಶೈವ ಬಹಳ ಪುರಾತನವಿದ್ದರೂ ಪಂಚಾಚಾರ್ಯರಿಗೂ ಅದಕ್ಕೂ ಯಾವ ಸಂಬಂಧವೂ ಇಲ್ಲ. ಪಂಚಾಚಾರ್ಯರ ಕಲ್ಪನೆ ತೀರಾ ಇತ್ತೀಚಿನ ಸೃಷ್ಟಿ, ಪಂಚಾಚಾರ್ಯರಿಗೆ ಐತಿಹಾಸಿಕ ನೆಲೆಗಟ್ಟು ಸಿಕ್ಕುವುದು ಕೇವಲ ರೇವಣಸಿದ್ಧರು,

ಮರುಳುಸಿದ್ಧರು, ಮಲ್ಲಿಕಾರ್ಜುನ ಪಂಡಿತಾರಾಧ್ಯರು, ಏಕೋರಾಮರು. ಇವರಿಂದ ಚತುರಾಚಾರ್ಯ ಪುರಾಣ ಈ ಮಹಾತ್ಮರ ಹೆಸರಿನಲ್ಲೇ ಇದೆ. ಈ ನಾಲ್ವರಲ್ಲಿ ಕೆಲವರು ಧರ್ಮಪಿತ ಬಸವಣ್ಣನವರ ಸಮಕಾಲೀನರು, ಕೆಲವರು ನಂತರದವರು.

೨. ಹಿಂದು ಒಂದು ಧರ್ಮವಲ್ಲ. ಒಂದು ವಿಶಿಷ್ಟ ಸಂಸ್ಕೃತಿಯ ನಡೆ-ನುಡಿ, ಆಚಾರ-ಶಿಷ್ಟಾಚಾರಗಳನ್ನು ಪಾಲಿಸುತ್ತಿದ್ದ ಒಂದು ಜನಾಂಗವನ್ನು ಮುಸ್ಲೀಮರು ಕರೆದ ಬಗೆ ಇದು. ಆದ್ದರಿಂದ ವೈದಿಕ ಧರ್ಮವನ್ನೇ ಹಿಂದೂ ಧರ್ಮ ಎಂದು ಕರೆಯುವ ತಪ್ಪು ಪದ್ಧತಿಯನ್ನು ವೈದಿಕರು ಮತ್ತು ಅವೈದಿಕರು ಉಭಯತರೂ ಬಿಡಬೇಕು. ವೈದಿಕ ಹಿಂದು, ಜೈನ ಹಿಂದು, ಬೌದ್ಧ ಹಿಂದು, ಲಿಂಗಾಯತ ಹಿಂದು ಎಂದು ಸ್ಪಷ್ಟವಾಗಿ ತಿಳಿದು, ಬಳಸಬೇಕು. ಈ ಎಲ್ಲ ಧರ್ಮಗಳಿಗೂ ತಮ್ಮದೇ ಆದ ಆಚಾರ–ವಿಚಾರ, ಧರ್ಮಗ್ರಂಥಗಳಿವೆ. ವೈದಿಕ ಹಿಂದೂಗಳು ಚತುರ್ವರ್ಣಗಳನ್ನು ಒಪ್ಪುವ ಕಾರಣ ಬಹುಪಾಲು ಜನ ಸಂಸ್ಕಾರವಿಲ್ಲದೆ ಶೂದ್ರರಾಗಿ ಉಳಿದಿದ್ದಾರೆ. ಇಂಥವರನ್ನು ಮತಾಂತರಗೊಳಿಸಬಾರದೆಂಬ ಆಲೋಚನೆಯನ್ನು ಅಂತರಂಗದಲ್ಲಿಟ್ಟುಕೊಂಡು ಕೆಲವರು ಬೌದ್ಧ, ಜೈನ, ಲಿಂಗಾಯತ, ಸಿಖ್ಖರನ್ನು ಅಹಿಂದುಗಳೆಂದು ಬಿಟ್ಟರೆ, ಶೂದ್ರರು-ಅಸ್ಪೃಶ್ಯರು ಧರ್ಮ ಸಂಸ್ಕಾರ ಪಡೆಯದೆ ಇರುವವರು ಎಂಬ ಒಳಗುಟ್ಟು ಇದೆ. ಆ ಮುಗ್ಧ ಜನರೋ ಧರ್ಮ ಸಂಸ್ಕಾರವಿಲ್ಲದ ತಮ್ಮ ಸ್ಥಿತಿಯ ಅರಿವೂ ಇಲ್ಲದೆ ಬಸವ–ಬುದ್ಧರಂಥವರನ್ನು, ತಮ್ಮವರಲ್ಲವೆಂದು ಇವರನ್ನು ಶೂದ್ರರನ್ನು-ಅಸ್ಪೃಶ್ಯರನ್ನು ಮಾಡಿದ 'ಅವತಾರ' ಪುರುಷರನ್ನೇ ತಮ್ಮವರೆಂದು ತಲೆಯ ಮೇಲೆ ಹೊತ್ತು ಕುಣಿಯುತ್ತಾರೆ. ಈ ಅಜ್ಞತೆ ಕಂಡು ಮರುಕ ಉಕ್ಕುತ್ತದೆ. ಆದ್ದರಿಂದ ಲಿಂಗಾಯತ ಧರ್ಮವನ್ನು ಅವೈದಿಕ ಧರ್ಮ ಎನ್ನಬಹುದೇ ವಿನಾ ಅಹಿಂದು ಧರ್ಮವೆಂದಲ್ಲ ವಿಚಾರವಂತರು ಈ ಪ್ರತಿಪಾದನೆಯ ಹಿಂದೆ ಇರುವ ಅಮೂಲ್ಯ ಸತ್ಯವನ್ನು, ಕಳಕಳಿಯನ್ನು ಮನಗಾಣಬೇಕು.

—ಮಾತಾಜಿ

ನೀರಡಿಸಿ ಬಂದ ಸೋದರಗೆ ನೀರನು ಕೊಡಲು
ಮನುಧರ್ಮ ಶಾಸ್ತ್ರವೆನಗೊರೆಯಬೇಕೇನು ?
ನೊಂದವರ ಕಂಬನಿಯನೊರಸಿ ಸಂತೈಸುವೊಡೆ
ಶಾಸ್ತ್ರ ಪ್ರಮಾಣವದಕಿರಲೆ ಬೇಕೇನು ?

—ರಾಷ್ಟ್ರಕವಿ ಕುವೆಂಪು

Digitalized by e-Sahithya Documentation Forum
Sponsored by Sarayu Foundation Trust

"ಬಸವ ರತ್ನ" ಪ್ರಶಸ್ತಿಯ ದಾಸೋಹಿ ಶರಣ ಕುಮಾರ ಕಕ್ಕಯ್ಯ ಪೋಳ

ಗುರು ಬಸವಣ್ಣನವರನ್ನು ಜಗತ್ತಿಗೆ ಕೊಟ್ಟ ಬಿಜಾಪುರ ಜಿಲ್ಲೆ, ಭೌತಿಕವಾಗಿ ಬರಗಾಲದ ಜಿಲ್ಲೆ ಎಂದು ತಲೆಪಟ್ಟಿ ಹೊತ್ತಿದ್ದರೂ ಹೃದಯ ಶ್ರೀಮಂತಿಕೆಯಲ್ಲಿ ಪ್ರಥಮ ಸ್ಥಾನದಲ್ಲಿ ನೆಲೆನಿಲ್ಲುವಂಥದ್ದು.

೧. ವಿಶ್ವಗುರು ಬಸವಣ್ಣನವರಂಥ ಶ್ರೇಷ್ಠ ದಾರ್ಶನಿಕರನ್ನು, ಜಗತ್ತಿನ ಮೊಟ್ಟಮೊದಲ ಸಮತಾವಾದಿಯನ್ನು, ಅವರ ಮೂಲಕ ಒಂದು ಸ್ವತಂತ್ರವಾದ ವಿಶ್ವಧರ್ಮವನ್ನು ಕೊಟ್ಟಂತಹುದು. ಧರ್ಮಪಿತರನ್ನು ಕೊಟ್ಟ ಕೀರ್ತಿಗೆ ಭಾಜನವಾಗಿದೆ.

೨. ಕಲ್ಲು, ಗಾರೆಗಳ ಅದ್ಭುತ ಕಲಾಕೃತಿ ಗೋಲಗುಮ್ಮಟವನ್ನು ಹೊಂದಿದ ಹಿರಿಮೆಯೊಡನೆ, ಜ್ಞಾನಗುಮ್ಮಟ ವಚನ ಸಾಹಿತ್ಯ ಪಿತಾಮಹ ಶರಣ. ಫ.ಗು. ಹಳಕಟ್ಟಿಯವರನ್ನು ಕೊಟ್ಟ ಮತ್ತೊಂದು ಹಿರಿಮೆಯನ್ನು ಅದು ಹೊಂದಿದೆ. ವಚನ ಸಾಹಿತ್ಯವನ್ನು ಪುರೋಹಿತ ಶಾಹಿಯ ಕೈಯಿಂದ ರಕ್ಷಿಸಲು ಶರಣರು ಸಹ್ಯಾದ್ರಿಯ ಗುಡ್ಡಗಳಲ್ಲಿ ಅದನ್ನು ಬಚ್ಚಿಟ್ಟರು. ಬಹು ದೀರ್ಘಕಾಲ ಅದು ಗುಪ್ತಗಾಮಿನಿಯಾಗಿ ಹರಿಯಿತು. ಇಂಥ ಒಂದು ನಿಧಿಯನ್ನು ಹೊಂದಿದ ವಾರಸುದಾರರು ನಾವು, ಕನ್ನಡಿಗರು ಮತ್ತು ಲಿಂಗವಂತರು ಎಂದು ಹೆಮ್ಮೆಯಿಂದ ತಲೆ ಎತ್ತಿ ಹೇಳಿಕೊಳ್ಳುವಂತೆ ಆ ಸಾಹಿತ್ಯ ವಾರಾಶಿಯನ್ನು ಬಯಲಿಗೆ ತಂದವರು ವಚನ ಶಾಸ್ತ್ರ ಪಿತಾಮಹ ಶರಣ. ಲಿಂಗ|| ಫ.ಗು. ಹಳಕಟ್ಟಿಯವರು.

೩. ಸಾಹಿತ್ಯವು ರಾಶಿರಾಶಿಯಾಗಿ ಪ್ರಕಟವಾದುದು ನಿಜವಾದರೂ ಅದು ಜನಸಾಮಾನ್ಯರನ್ನು ನಿಲುಕಿರಲಿಲ್ಲ. ಗ್ರಂಥಸ್ತವಾಗಿ, ವಿಶ್ವವಿದ್ಯಾಲಯಗಳಲ್ಲಿ ಸಂಗ್ರಹಿತವಾಗಿದ್ದ ವಚನ ವಾಙ್ಮಯವನ್ನು ಜನತೆಯ ಹೃದಯ ಬುದ್ಧಿಗಳ ಪ್ರಣತೆಗೆ

ಹಚ್ಚಿದ ಪುಣ್ಯಪುರುಷ ಪ್ರವಚನ ಪಿತಾಮಹ ಪೂಜ್ಯಶ್ರೀ ಲಿಂಗಾನಂದ ಮಹಾಸ್ವಾಮಿಯವರನ್ನು ಕೊಟ್ಟ ಹಿರಿಮೆ ಬಿಜಾಪುರ ಜಿಲ್ಲೆಯದು. ಪೂಜ್ಯರು ಹುಟ್ಟಿದ್ದು ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೋಕಿನ ಮಸುಗೂಳಿಯಲ್ಲಿ.

೪. ಲಿಂಗವಂತ ಧರ್ಮದ, ಬಸವ ತತ್ತ್ವಾನುಯಾಯಿಗಳ ಜಾಗತಿಕ ಕ್ಷೇತ್ರವಾಗುತ್ತಿರುವ ಕೂಡಲ ಸಂಗಮವಿರುವುದು ಇದೇ ಜಿಲ್ಲೆಯಲ್ಲಿ.

೫. ಬಸವ ಧರ್ಮದ ಮಹಾಜಗದ್ಗುರು ಪೀಠವು ಇದೇ ೧೩-೧-೧೯೯೨ ರಂದು ಸ್ಥಾಪನೆಗೊಂಡಿದ್ದು, ಪೂಜ್ಯ ಶ್ರೀ ಶ್ರೀ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಪ್ರಥಮ ಪೀಠಾಧೀಶರಾದುದು, ಬಸವ ತತ್ತ್ವಾನುಯಾಯಿಗಳ ಶ್ರದ್ಧಾಕೇಂದ್ರ ರೂಪುಗೊಳ್ಳುವಂತಾದುದು ಇದೇ ಜಿಲ್ಲೆಯಲ್ಲಿ.

೬. ಈ ಪ್ರಥಮಗಳ, ದಾಖಲೆಗೆ ಇನ್ನೊಂದು ಹಿರಿಮೆಯನ್ನು ಸೇರಿಸಿಕೊಳ್ಳುತ್ತಿದೆ ಬಿಜಾಪುರ ಜಿಲ್ಲೆ. ಬಸವರತ್ನ, ಪ್ರಶಸ್ತಿಯ ದಾಸೋಹದಿಂದಾಗಿ ಇದಕ್ಕೆ ಕಾರಣರು ಶರಣದಾಸೋಹಿ ಕುಮಾರ ಕಕ್ಕಯ್ಯ ಪೋಳ ಅವರು. ಪೂಜ್ಯಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿಯವರ 59 ದಿವಸಗಳ ಕಾಲದ ವಿಶ್ವ ಧರ್ಮ ಪ್ರವಚನದ ಮುಕ್ತಾಯ ಸಮಾರಂಭಕ್ಕೆಂದು ನಾನು ಹೋದಾಗ ದಿನಾಂಕ 25-5-92 ರಂದು ಶರಣ ಕುಮಾರ ಕಕ್ಕಯ್ಯನವರು ಸ್ವಯಂಪ್ರೇರಣೆಯಿಂದ ಒಂದು ಅಪೇಕ್ಷೆಯನ್ನು ಮುಂದಿಟ್ಟರು.

"ನಾನು ದಲಿತ ಸಮಾಜದಲ್ಲಿ. ಹುಟ್ಟಿದೆ ಬಡತನದ ಸಂಕಷ್ಟದಲ್ಲಿ ಬೆಳೆದೆ, ಅಸ್ಪೃಶ್ಯತೆಯ ನೋವನ್ನುಂಡೆ, ತಹಸೀಲ್ದಾರನಾದೆ. ಗುರು ಬಸವಣ್ಣನವರ ತತ್ತ್ವಗಳನ್ನು ತಿಳಿದು, ನಮ್ಮ ಬಗ್ಗೆ ಅವರಿಗಿರುವ ಕಳಕಳಿ ಅರಿತು ಮೂಕ ವಿಸ್ಮಿತನಾದೆ. ಪೂಜ್ಯಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಅವರಿಂದ ಲಿಂಗದೀಕ್ಷೆ ಪಡೆದು ಲಿಂಗವಂತನಾದೆ. ನನ್ನ ಜೀವನದಲ್ಲಿ ಆಂತರಿಕ ಪರಿವರ್ತನೆ ಆದುದು ಮಾತ್ರವಲ್ಲ, ಸಾಮಾಜಿಕ ಸ್ಥಾನಮಾನದಲ್ಲಿ ಬದಲಾವಣೆಯಾಯಿತು. ಶರಣ ಬಂಧುಗಳು ನನ್ನನ್ನು ಆದರದಿಂದ ಕಂಡರು. ಅನೇಕ ಪೂಜ್ಯರು, ಮಠಾಧಿಪತಿಗಳು ನನ್ನ ಮನೆಗೆ ಬಂದು ಪೂಜೆ-ಪ್ರಸಾದ ಮಾಡಿದರು. ನನ್ನ ಮಕ್ಕಳಲ್ಲಿ ಒಳ್ಳೆಯ ಸಂಸ್ಕಾರ ಬೆಳೆದು ಅವರೆಲ್ಲರೂ ಉತ್ತಮ ಸ್ಥಾನಗಳಿಗೆ ಏರಿದರು. ಇದೆಲ್ಲ ಆದುದು ಗುರು ಬಸವಣ್ಣನವರ ಕೃಪೆಯಿಂದ, ಅವರ ತತ್ತ್ವದ ಬಲದಿಂದ. ಪೂಜ್ಯಶ್ರೀ ಮಹಾಜಗದ್ಗುರುಗಳು ಶರಣ ಮೇಳದಲ್ಲಿ ಹೇಳಿದರು, "ಬಸವಣ್ಣನನ್ನು ನಂಬಿಕೆಟ್ಟವರಿಲ್ಲ. ಕೆಟ್ಟವರು ಬಸವಣ್ಣನನ್ನು ನಂಬುವುದಿಲ್ಲ." ಈ ಮಾತು ನನ್ನಲ್ಲಿ ಬಹಳ ಪರಿಣಾಮ ಬೀರಿತು. ಗುರು ಬಸವ ಕೃಪೆಯಿಂದ ಎಲ್ಲ ರೀತಿಯಿಂದಲೂ ನನಗೆ ಒಳ್ಳಿತಾಗಿದೆ. ಆದ್ದರಿಂದ ಈ ಋಣವನ್ನು ಹೇಗಾದರು ತೀರಿಸಬೇಕು ಎಂಬ ಹಂಬಲ ತುಂಬಿ

Digitalized by e-Sahithya Documentation Forum
Sponsored by Sarayu Foundation Trust

ನಿಂತಿತು. ಶರಣ ಹರಳಯ್ಯನವರು ತಮ್ಮ ಮೈ ಚರ್ಮದಿಂದ ಚಮ್ಮಾವುಗೆ ಮಾಡಿ ಕೊಟ್ಟರು. ಆ ಪರಿಯು ತ್ಯಾಗ ನನಗಾಗದಿದ್ದರೂ ಇನ್ನೊಂದು ರೂಪದಲ್ಲಿ ಮಾಡ ಬೇಕು ಎನಿಸಿತು. ನಾನೇನೂ ಸಿರಿವಂತನಲ್ಲ, ಯಾವುದಾದರೂ ಸ್ಥಾವರ ವಸ್ತು ವನ್ನು ಮಾರಿ ಜಂಗಮಾತ್ಮಕವಾದ ಒಂದು ಪ್ರಶಸ್ತಿಯನ್ನು ಕೊಡಬೇಕೆಂದು ಸಂಕಲ್ಪಿಸಿರುವೆ.

ಬಸವ ಧರ್ಮದ ಮಹಾಜಗದ್ಗುರು ಪೀಠಕ್ಕೆ ಒಂದು ಲಕ್ಷರೂಪಾಯಿಗಳ ದೇಣಿಗೆ ನೀಡುವೆ. ಪೂಜ್ಯರು ಅದನ್ನು ಸ್ವೀಕರಿಸಿ, ಪುದುವಟ್ಟನ್ನಾಗಿ ಇಟ್ಟು ಅದರ ಬಡ್ಡಿಯಲ್ಲಿ ಪ್ರತಿವರ್ಷಕ್ಕೆ ಒಬ್ಬರನ್ನು ಆಯ್ಕೆ ಮಾಡಿ, ಅವರಿಗೆ "ಬಸವರತ್ನ" ಪ್ರಶಸ್ತಿ ಯನ್ನು, ೧೧೧೧೧–೦೦ ರೂ. ಗಳ ಹನ್ನೊಂದು ಸಾವಿರದ ಒಂದು ನೂರಾ ಹನ್ನೊಂದು ರೂ.ಗಳ ನಗದನ್ನು, ಸನ್ಮಾನ ಪತ್ರ-ಫಲಕ-ಶಾಲುಗಳನ್ನು ಕೊಡಬೇಕು. ಧರ್ಮ ಪ್ರಚಾರ, ಸಮಾಜ ಸೇವೆ, ಸಾಹಿತ್ಯ ಸೇವೆ, ಶೈಕ್ಷಣಿಕ ಸೇವೆ, ಸಂಗೀತ ಸೇವೆ ಈ ಯಾವುದೇ ಇರಲಿ ಬಸವ ತತ್ತ್ವಕ್ಕೆ ಸಂಬಂಧಿಸಿದಂತೆ ಕಾರ್ಯ ಮಾಡಿದವರಿಗೆ ಈ ಪ್ರಶಸ್ತಿಯನ್ನು ಬಸವ ಕ್ರಾಂತಿ ದಿನದಂದು (ಜನವರಿ 14) ಶರಣ ಮೇಳದಲ್ಲಿ ಕೊಡ ಬೇಕು. ಮೊದಲನೆಯದನ್ನು ಪೂಜ್ಯಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿಯವರಿಗಾಗಲೀ, ಪೂಜ್ಯ ಮಾತಾಜಿಯವರಿಗಾಗಲೀ ಕೊಟ್ಟರೆ ನನಗೆ ಅತೀವ ಸಂತೋಷವಾಗುತ್ತದೆ. ನಿರ್ಧಾರ ಅವರಿಗೆ ಬಿಟ್ಟದ್ದು.

ಶರಣ ಕುಮಾರ ಕಕ್ಕಯ್ಯ ಪ್ರಶಸ್ತಿ ಎಂದು ಹೆಸರಿಸಬೇಕು, 'ಬಸವರತ್ನ' ಎಂಬ ಬಿರುದುಕೊಡಬೇಕು. ಬಸವ ಧರ್ಮ ಸಂಸತ್ ವ್ಯಕ್ತಿಗಳನ್ನು ಒಮ್ಮತ ಅಥವಾ ಬಹುಮತದಿಂದ ಆರಿಸಬೇಕು. ಅಂತಿಮ ಆಯ್ಕೆ ಮಾಡಲು ೫ ಜನರ ಸಮಿತಿ ಮಾಡಬೇಕು. ಅದರಲ್ಲಿ ನಾನು ಒಬ್ಬ; ನನ್ನ ನಂತರ ನಮ್ಮ ಕುಟುಂಬದಿಂದ ಒಬ್ಬರನ್ನು ಸದಸ್ಯರನ್ನಾಗಿ ತೆಗೆದುಕೊಳ್ಳಬೇಕು." ಶರಣ ಕುಮಾರ ಕಕ್ಕಯ್ಯನವರ ಈ ಘೋಷಣೆ ಎಲ್ಲರಿಗೂ ಆನಂದದ ಮಹಾಪೂರವನ್ನೇ ಹರಿಸಿತು. ಸಾರ್ವಜನಿಕ ಸಭೆಯಲ್ಲೂ ಈ ಸಂಗತಿಯನ್ನು ಪ್ರಚುರ ಪಡಿಸಿದಾಗ ಜನರು ಹರ್ಷೋದ್ಗಾರ ಮಾಡಿದರು. ಪೂಜ್ಯರು ನಿಧಿಯನ್ನು ಸ್ವೀಕರಿಸಿ, ಬಸವ ತತ್ತ್ವ ಪ್ರಚಾರ ಕ್ಷೇತ್ರದಲ್ಲಿ ದುಡಿದವರಿಗೆ "ಬಸವ ರತ್ನ" ಪ್ರಶಸ್ತಿ ಕೊಡಲು ವ್ಯವಸ್ಥೆ ಮಾಡುವುದಾಗಿ ಒಪ್ಪಿ ಕೊಂಡು, ಶರಣ ಕಕ್ಕಯ್ಯನವರಿಗೆ ಆಶೀರ್ವಾದ ನೀಡಿದಾಗ ಎಲ್ಲರೂ ಸಂತೋಷ ಪಟ್ಟರು. ಬಸವಣ್ಣನವರ ಹೆಸರಿನಲ್ಲಿ ಇಂಥ ಉದಾತ್ತ ಕಾರ್ಯಮಾಡಿದ ಶರಣ ಕಕ್ಕಯ್ಯನವರ ಜೀವನವು ಸಾರ್ಥಕ; ಗಳಿಕೆಯೂ ಸಾರ್ಥಕ ಅವರಿಗೆ, ಅವರ ಕುಟುಂಬ ವರ್ಗಕ್ಕೆ ಧರ್ಮಪಿತರ ಪೂರ್ಣಾನುಗ್ರಹವಿರಲೆಂದು ಹಾರೈಸುವೆವು.

—ಪೂಜ್ಯ ಮಾತಾಜಿ

ಕುಮಾರ ಕಕ್ಕಯ್ಯ ಪೋಳ ವಿಜಾಪುರ ಇವರ ಸಂಕ್ಷಿಪ್ತ ಪರಿಚಯ

1.	ಹೆಸರು	ಕುಮಾರ ಕಕ್ಕಯ್ಯ ಪೋಳ
2.	ಕಾವ್ಯನಾಮ	ಕುಮಾರ ಕಕ್ಕಯ್ಯ
3.	ಜನ್ಮ ತಾರೀಖು	28–7–1929
4.	ವಯಸ್ಸು	63
5.	ಜಾತಿ	ಪರಿಶಿಷ್ಟ ವರ್ಗದ ಹರಿಜನ ಸಮಾಜಕ್ಕೆ ಸೇರಿದ ಡೋಹರ ಜಾತಿ.
6.	ಶಿಕ್ಷಣ	ಎಸ್.ಎಸ್.ಎಲ್.ಸಿ.
7.	ಭಾಷೆ	ಕನ್ನಡ, ಮರಾಠಿ, ಹಿಂದಿ, ಇಂಗ್ಲಿಷ್
8.	ಉದ್ಯೋಗ	ನಿವೃತ್ತ ತಹಶೀಲದಾರ
9.	ಹವ್ಯಾಸ	ಸಾಹಿತ್ಯ ಮತ್ತು ಸಮಾಜ ಸೇವೆ

10. ಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯ ವಿವರ :–

ಶ್ರೀಯುತರು ಪ್ರಗತಿಪರ ವಿಚಾರವಾದಿ ಸಾಹಿತಿಗಳಲ್ಲಿ ಒಬ್ಬರಾಗಿದ್ದು, ಈಗಾ ಗಲೇ ಅನೇಕ ವಿಚಾರಪರ ಗ್ರಂಥ, ನಾಟಕ, ಕಾದಂಬರಿ, ಕಥಾಸಂಕುಲನ, ಕಾವ್ಯ ಸಂಕಲನ, ಬಿಡಿ ಲೇಖನ, ಚುಟುಕು, ವಚನ ಇತ್ಯಾದಿಗಳನ್ನು ಹೋದ 25 ವರ್ಷ ಗಳಿಂದ ಬರೆಯುತ್ತಿದ್ದಾರೆ. ಅವುಗಳಲ್ಲಿ ಈ ಕೆಳಗೆ ನಮೂದಿಸಿದ ಗ್ರಂಥಗಳು ಈಗಾಗಲೇ ಪ್ರಕಟವಾಗಿವೆ.

1.	ಧರ್ಮ ಕ್ರಾಂತಿ	ವಿಚಾರಪರ ಗ್ರಂಥ
2.	ಸಮಾಜದ ತೊಡರಿಗೆ ಧರ್ಮದ ಕಗ್ಗಂಟು	ಕಥಾಸಂಕಲನ
3.	ಗೀಜಗನ ಗೂಡು	ಕಾದಂಬರಿ
4.	ನೀಯತಿ ಶಾಸನ	ಕಾದಂಬರಿ
5.	ಕುಮಾರ ಕಕ್ಕಯ್ಯನ ವಚನಗಳು	ವಚನ ಸಂಕಲನ
6.	ಮೂಕನ ಭಾಷಣ	ಭಾಷಣ ಪ್ರಬಂಧ
7.	ಇದು ನನ್ನ ಸಮಾಜ	ನಾಟಕ
8.	ಬಸವ ಧರ್ಮ ಯಾರ ಸ್ವತ್ತು ?	ಪುರಾಣ ಪ್ರಬಂಧ
9.	ಧರ್ಮದರ್ಶನ	ಧಾರ್ಮಿಕ ಚಿಂತನೆ
10.	ಶರಣರ ಸಮಗ್ರ ಕ್ರಾಂತಿ	ವಿಚಾರಪರ ಗ್ರಂಥ
11.	ಚಾತುರ್ವರ್ಣ ಧರ್ಮ ದರ್ಶನ	ಸಮಾಜ ಚಿಂತನೆ

ಇದಲ್ಲದೆ, ಇವರು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಬೆಂಗಳೂರಿನಲ್ಲಿ ನಡೆದ ದಲಿತ ಸಾಹಿತ್ಯ ಸಮ್ಮೇಳನದಲ್ಲಿ ಕವಿಗೋಷ್ಠಿಯ ಅಧ್ಯಕ್ಷರಾಗಿಯೂ, ಬೆಳಗಾವಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಉಪನ್ಯಾಸಕರಾಗಿಯೂ, ಗುಲಬರ್ಗಾ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಕವಿಗೋಷ್ಠಿಯ ಅಧ್ಯಕ್ಷರಾಗಿಯೂ, ವಿಜಾಪುರ ಜಿಲ್ಲಾ ಸಾಹಿತ್ಯ ಸಮ್ಮೇಳನದ ದಲಿತ ಗೋಷ್ಠಿಯ ಅಧ್ಯಕ್ಷರಾಗಿಯೂ, ಹೀಗೆ ಇನ್ನೂ ಅನೇಕ

Digitalized by e-Sahithya Documentation Forum
Sponsored by Sarayu Foundation Trust

ಸಾಹಿತ್ಯ ಮತ್ತು ಸಾಂಸ್ಕೃತಿಕ ಗೋಷ್ಠಿಗಳಲ್ಲಿ ಅನೇಕ ಉಪನ್ಯಾಸಗಳನ್ನು ಕೊಟ್ಟಿದ್ದಾರೆ.

11. **ಸಾಮಾಜಿಕ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯ ವಿವರ :-**

ನಿವೃತ್ತ ತಹಶೀಲದಾರರಾಗಿ, ಆಡಳಿತ ಮತ್ತು ಕಾಯಿದೆ—ಕಾನೂನುಗಳಲ್ಲಿ ಅನುಭವವುಳ್ಳ ಶ್ರೀಯುತರು ಈಗ ಅನೇಕ ಸಂಘ ಸಂಸ್ಥೆಗಳಲ್ಲಿ, ಈ ಕೆಳಕಂಡಂತೆ ಪದಾಧಿಕಾರಿಗಳಾಗಿ ಸಾಹಿತ್ಯಕ ಮತ್ತು ಸಾಮಾಜಿಕ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

1. ಅಧ್ಯಕ್ಷ : ಕಲ್ಯಾಣ ನಾಡಿನ ಶರಣ ಪರಿಷತ್ತು.
2. ಅಧ್ಯಕ್ಷ : ಪಂಚಮ ಪ್ರಗತಿ ಸಂಘ ವಿಜಾಪುರ.
3. ಚೇಅರಮನ : ಕೆ.ಸಿ.ಎಮ್. ಸೊಸೈಟಿ, ವಿಜಾಪುರ.
4. ಚೇಅರಮನ : ಕೆ.ಎಚ್.ಬಿ. ಸ್ಕೂಲ್ ಬಿಲ್ಡಿಂಗ್ ಕಮಿಟಿ, ವಿಜಾಪುರ.
5. ಆಮಂತ್ರಿತ ಸದಸ್ಯ : ಜಿಲ್ಲಾ ಸಾಹಿತ್ಯ ಪರಿಷತ್ತು, ವಿಜಾಪುರ.
6. ಅಜೀವ ಸದಸ್ಯ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರ..
7. ಅಜೀವ ಸದಸ್ಯ : ಶರಣ ಸಾಹಿತ್ಯ ಪರಿಷತ್ತು, ಮೈಸೂರು.
8. ಅಜೀವ ಸದಸ್ಯ : ಅಖಿಲ ಭಾರತ ವೀರಶೈವ ಮಹಾಸಭೆ, ಬೆಂಗಳೂರು.
9. ಅಜೀವ ಸದಸ್ಯ : ಬಸವ ತತ್ತ್ವ ಪ್ರಸಾರ ಸಂಸ್ಥೆ, ಬೆಂಗಳೂರು.
10. ಉಪಾಧ್ಯಕ್ಷ : ಪದ್ಮಶ್ರೀ ಕಾಕಾ ಕಾರಖಾನೀಸ ಸ್ಮಾರಕ ಸಮಿತಿ, ವಿಜಾಪುರ.
11. ಕಾರ್ಯದರ್ಶಿ : ಜಿಲ್ಲಾ ಸಾಹಿತ್ಯ ವರ್ಧಕ ಸಂಘ, ವಿಜಾಪುರ.
12. ಬಸವ ಧರ್ಮ ಸಂಸತ್ ಸದಸ್ಯರು.
13. ರಾಷ್ಟ್ರೀಯ ಬಸವ ದಳ, ಬಿಜಾಪುರದ ಕೋಶಾಧ್ಯಕ್ಷರು.

ಹೀಗೆ ಇನ್ನೂ ಅನೇಕ ಸಂಘ ಸಂಸ್ಥೆಗಳ ಅಧ್ಯಕ್ಷರಾಗಿಯೂ, ಉಪಾಧ್ಯಕ್ಷರಾಗಿಯೂ, ಕಾರ್ಯದರ್ಶಿಯಾಗಿಯೂ ಮತ್ತು ಸದಸ್ಯರಾಗಿಯೂ ಸಕ್ರಿಯಸೇವೆ ಸಲ್ಲಿಸುತ್ತಿದ್ದಾರೆ. ಸಾಧಾರಣ ಬೆಂಗಳೂರಿನಿಂದ ಬೀದರದವರೆಗೆ, ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಮತ್ತು ಮಹಾರಾಷ್ಟ್ರ, ಆಂಧ್ರಪ್ರದೇಶದಲ್ಲಿಯೂ ಕೂಡಾ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ರಾಜಕೀಯ ವೇದಿಕೆಗಳಿಂದ ಮತ್ತು ಇದೂ ಅಲ್ಲದೆ, ಅನೇಕ ಶಾಲೆ ಕಾಲೇಜುಗಳಲ್ಲಿ, ಅಧ್ಯಕ್ಷರಾಗಿ, ಮುಖ್ಯ ಅತಿಥಿಗಳಾಗಿ ಮತ್ತು ಉಪನ್ಯಾಸಕರಾಗಿ, ಅನೇಕ ಸಭೆ, ಸಮಾರಂಭ ಮತ್ತು ಸಮ್ಮೇಳನಗಳಲ್ಲಿ ಪಾಲ್ಗೊಂಡಿದ್ದಾರೆ. ಈ ಪ್ರಕಾರ ಪ್ರಗತಿಗರ ವಿಚಾರವಾದಿಯಾದ ಶರಣರು ಹೋದ 25-30 ವರ್ಷಗಳಿಂದ, ನಿರಂತರವಾಗಿ ಸಾಹಿತ್ಯ ಮತ್ತು ಸಮಾಜ ಸೇವೆಯನ್ನು ಮಾಡುತ್ತಿದ್ದಾರಲ್ಲದೆ, ಬಸವ ತತ್ತ್ವದಲ್ಲಿ ವಿಶೇಷ ಆಸಕ್ತಿ ತಳೆದು ಪ್ರಚಾರ ಮಾಡುತ್ತಿದ್ದಾರೆ.

ವಿಳಾಸ :
ಕುಮಾರ ಕಕ್ಕಯ್ಯ ಪೋಳ
79, ಕೆ. ಹೆಚ್. ಬಿ. ಕಾಲನಿ, ಸೋಲಾಪುರ ರೋಡ, ವಿಜಾಪುರ-586 103.

ಕಲ್ಯಾಣ ಕಿರಣ ಪತ್ರಿಕೆಯ ಒಡೆತನ ಮತ್ತಿತರ ವಿವರಗಳ ಪ್ರಕಟಣೆ

ಪ್ರಾರೂಪ 4 [ನಿಧಿ 8]

1.	ಪ್ರಕಟಣೆಯ ಸ್ಥಳ	– ಬೆಂಗಳೂರು.
2.	ಪ್ರಕಟಣೆಯ ನಿಯತಕಾಲಿಕತೆ	– ಮಾಸಿಕ
3.	ಮುದ್ರಕರ ಹೆಸರು	– ಸೋದರಿ ಕಸ್ತೂರಿ.
	ಭಾರತದ ಪ್ರಜೆಯೇ ?	– ಹೌದು.
	ವಿಳಾಸ	– ಪ್ರಭುದೇವ ಮುದ್ರಣಾಲಯ ಬಸವ ಗಂಗೋತ್ರಿ, ಕುಂಬಳಗೋಡು
4.	ಪ್ರಕಾಶಕರ ಹೆಸರು	– ಬಿ. ಶಂಭುಲಿಂಗಯ್ಯ
	ಭಾರತದ ಪ್ರಜೆಯೇ ?	– ಹೌದು
	ವಿಳಾಸ	– ಕಲ್ಯಾಣ ಕಿರಣ ಕಾರ್ಯಾಲಯ ಬಸವ ಮಂಟಪ, ರಾಜಾಜಿನಗರ, ಬೆಂಗಳೂರು-560010
5.	ಸಂಪಾದಕರ ಹೆಸರು.	– ಬಿ. ಶಂಭುಲಿಂಗಯ್ಯ
	ಭಾರತದ ಪ್ರಜೆಯೇ ?	– ಹೌದು
	ವಿಳಾಸ	– ಬಸವ ಮಂಟಪ, ರಾಜಾಜಿನಗರ ಬೆಂಗಳೂರು-560010
6.	ಪತ್ರಿಕೆಯ ಒಡೆತನ ವಹಿಸಿರುವ ವ್ಯಕ್ತಿಯ ಮತ್ತು ಪಾಲುದಾರರ ಅಥವಾ ಒಟ್ಟು ಭಂಡವಾಳ ಶೇ 1ಕ್ಕಿಂತ ಹೆಚ್ಚು ಭಾಗಕ್ಕೆ ಪಾಲುದಾರರ ಹೆಸರು ಮತ್ತು ವಿಳಾಸ	– ವಿಶ್ವಕಲ್ಯಾಣ ಮಿಷನ್ (ರಿಜಿಸ್ಟರ್ ರಿಲಿಜಿಯಸ್ ಚಾರಿಟಬಲ್ ಟ್ರಸ್ಟ್) ಬಸವ ಮಂಟಪ, ರಾಜಾಜಿನಗರ ಬೆಂಗಳೂರು-560010

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದಮಟ್ಟಿಗೆ ಮತ್ತು ನನ್ನ ನಂಬಿಕೆಯಂತೆ ನಿಜವೆಂದು, ನಾನು ಬಿ. ಶಂಭುಲಿಂಗಯ್ಯ ಘೋಷಿಸುತ್ತೇನೆ.

ಪ್ರಕಾಶಕ
ಬಿ. ಶಂಭುಲಿಂಗಯ್ಯ
ಕಲ್ಯಾಣ ಕಿರಣ, ಬೆಂಗಳೂರು-10

...ಾಂಕ 1-3-1992

Digitalized by e-Sahithya Documentation Forum
Sponsored by Sarayu Foundation Trust

ೊ.

ಣ ಕಿರಣ

Digitalized by e-Sahithya Documentation Forum
Sponsored by Sarayu Foundation Trust